SAPTHAGIRI (KANNADA)
SPIRITUAL ILLUSTRATED MONTHLY
Volume:03, Issue: 7 Pages:56
February - 2024, Price Rs.20/-

ತಿರುಮಲ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸಪತ್ರಿಕೆ

ಫೆಬ್ರವರಿ 2024
ಬೆಲೆ ರೂ. 20/-



## ಶ್ರೀನಿವಾಸ ಮಂಗಾಪುರಂ,
## ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು
## ಫೆಬ್ರವರಿ 28 ರಿಂದ ಮಾರ್ಚ್ 8 ರ ವರೆಗೆ


**23-12-2023 ರಂದು ವೈಕುಂಠ ಏಕಾದಶಿ ಸಂದರ್ಭವಾಗಿ ತಿರುಮಲೆ ಭಕ್ತ ಜನ ಸಮುದ್ರವಾಯಿತು. ಭಕ್ತರು ಗೋವಿಂದ ನಾಮಸ್ಮರಣೆ ಮಾಡಿದರು. 23-12-2023 ರಂದು ಮುಂಜಾನೆ 01-45 ನಿಮಿಷಕ್ಕೆ ವೈಕುಂಠದ್ವಾರದ ಬಾಗಿಲನ್ನು ತೆರೆಲಾಯಿತು. ಭಕ್ತರು ಸ್ವಾಮಿಯವರನ್ನು ವೈಕುಂಠದ್ವಾರದಿಂದ ದರ್ಶಿಸಿ ಪುಲಕಿತರಾದರು. ಅದೇ ದಿನ ಬೆಳಗ್ಗೆ ಶ್ರೀದೇವಿ ಭೂದೇವಿ ಸಮೇತ ಶ್ರೀಮಲೆಯಪ್ಪಸ್ವಾಮಿಯವರು ಸ್ವರ್ಣ ರಥದಲ್ಲಿ ನಾಲ್ಕು ಮಾಡಬೀದಿಗಳಲ್ಲಿ ಮೆರವಣಿಗೆ ಬಂದು ಭಕ್ತರನ್ನು ಅನುಗ್ರಹಿಸಿದರು.**















ದಾಸನ್ನ ಮಾಡಿಕೋ ಎನ್ನ

ಸ್ವಾಮಿ ಸಾಸಿರನಾಮದ ವೆಂಕಟರಮಣ

ದುರುಬುದ್ಧಿಗಳನೆಲ್ಲಾ ಬಿಡಿಸೋ ನಿನ್ನ

ಕರುಣ ಕವಚವನ್ನ ಹರಣಕ್ಕೆ ತೊಡಿಸೋ॥

ಚರಣ ಸೇವೆ ಎನಗೆ ಕೊಡಿಸೋ ಅಭಯ ಕರ
ಪುಷ್ಪವನೆನ್ನ ಶಿರದಲ್ಲಿ ಮುಡಿಸೋ

ದೃಢ ಭಕ್ತಿ ನಿನ್ನಲ್ಲಿ ಬೇಡಿ ನಾ

ನಡಿಗೆರಗುವೆನಯ್ಯಾ ಅನುದಿನ ಪಾಡಿ

ಕಡೆಗಣ್ಣಲೇಕೆನ್ನ ನೋಡಿ ಬಿಡುವೆ

ಕೊಡು ನಿನ್ನ ಧ್ಯಾನವ ಮನ ಶುಚಿ ಮಾಡಿ

ಮೊರೆ ಹೊಕ್ಕವರ ಕಾಯ್ವ ಬಿರುದು

ಎನ್ನ ಮರೆಯದೆ ರಕ್ಷಣೆ ಮಾಡಯ್ಯ ಪೊರೆದು

ದುರಿತಗಳೆಲ್ಲವ ತರಿದು ಸಿರಿ

ಪುರಂದರವಿಟ್ಠಲ ಎನ್ನನು ಪೊರೆದು

- ಶ್ರೀ ಪುರಂದರದಾಸರು





# ಭಗವದ್ಗೀತೆ

ನತ್ವೇವಾಹಂ ಜಾತು ನಾಸಂ ನ ತ್ವಂ ನೇಮೇ ಜನಾಧಿಪಾಃ


ನಚೈವ ನ ಭವಿಷ್ಯಾಮಃ ಸರ್ವೇ ವಯಮತಃ ಪರಮ್

(ಶ್ರೀಮದ್ಭಗವದ್ಗೀತೆ ಅಧ್ಯಾಯ - 2, ಶ್ಲೋಕ -12)

ನಾನು ,ನೀನು, ಈ ಅರಸರು - ಹಿಂದೆಂದೂ ಇಲ್ಲವೆಂದಾದುದಿಲ್ಲ. ಮುಂದೆಯೂ ನಾವೆಲ್ಲರೂ ಇಲ್ಲವಾಗಲಾರೆವು.

(ಒಂಬತ್ತನೆಯ ದಶಕ)

# ದಯಾ ಶತಕಮ್



- ಎನ್. ನರಸಿಂಹಾಚಾರ್ಯ

ಪ್ರಭೂತ ವಿಬುಧದ್ವಿಷದ್ಭರಣಖಿನ್ನ ವಿಶ್ವಂಭರಾ ಭರಾಪನಯನಚ್ಛಲಾತ್ತ್ವ ಮವತಾರ್ಯ ಲಕ್ಷ್ಮೀಧರಮ್।
ನಿರಾಕೃತವತೀ ದಯೇ ನಿಗಮ ಸೌಧದೀಪಶ್ರಿಯಾ ವಿಪಶ್ಚಿದವಿಗೀತಯಾ ಜಗತಿ ಗೀತಯಾಽಂಧಂ ತಮಃ॥ 89॥

ಶ್ರೀಕೃಷ್ಣಾವತಾರದಲ್ಲಿ ಉಂಟಾದ ದಯೆಯ ಉಪಕಾರವನ್ನು ಈ ಪದ್ಯದಲ್ಲಿ ವರ್ಣಿಸಿರುತ್ತಾರೆ. ಶ್ರೀರಾಮಾವತಾರದಲ್ಲಿ ಸೇತು ಬಂಧನವೆಂಬ ಕಾರ್ಯವು ಹೇಗೆ ಮುಖ್ಯವಾದುದೋ ಹಾಗೆಯೇ ಶ್ರೀ ಕೃಷ್ಣಾವತಾರದ ಮುಖ್ಯ ಪ್ರಯೋಜನವು ಗೀತೋಪದೇಶವೇ. ಅಸುರರ ಭಾರವನ್ನು ಸಹಿಸಲಾರದ ಭೂಮಿ ದೇವಿಯ ಪ್ರಾರ್ಥನೆಯನ್ನು ಗಮನಿಸಿ ಅವಳ ಹೊರೆಯನ್ನು ತಪ್ಪಿಸುವುದೇ (ಅಸುರರನ್ನು ಸಂಹರಿಸುವುದೇ) ಈ ಅವತಾರದ ಉದ್ದೇಶವೆಂದು ಪುರಾಣಗಳಲ್ಲಿ ಹೇಳಿರುವುದು ವ್ಯಾಜಮಾತ್ರ ಭೂಭಾರವನ್ನು ಹೋಗಲಾಡಿಸುವುದು ಮುಖ್ಯವಾದ ಉದ್ದೇಶವಲ್ಲ. ಗೀತೋಪದೇಶವೇ ಪರಮೋದ್ದೇಶ್ಯವಾದದು. ಕಂಸನೇ ಮೊದಲಾದ ಅಸುರರ ವಧೆಯಿಂದ ಆ ಕಾಲದ ವರಿಗೇನೋ ಅನುಕೂಲವುಂಟಾಗಿರಬಹುದು. ಈಚಿನವರಾದ ನಮ್ಮಂತಹ ಕೋಟ್ಯಂತರ ಪ್ರಜೆಗಳಿಗೆ ಗೀತೆಯಿಂದ ಉಂಟಾದ ಅನುಕೂಲಗಳನ್ನು ವರ್ಣಿಸಲು ಅಸಾಧ್ಯ. ಆದ್ದರಿಂದ, ದಯಾದೇವಿಯು ಎಲ್ಲಕಾಲದಲ್ಲಿಯೂ ಒಳ್ಳೆಯ ಜ್ಞಾನವನ್ನು ಹೊಂದಿ ಎಲ್ಲ ಜನರೂ ಪರಮ ಕ್ಷೇಮವನ್ನು ಪಡೆಯಲೆಂದು ಯೋಚಿಸಿ ಲಕ್ಷ್ಮೀಪತಿಯಾದ ಶ್ರೀನಿವಾಸನನ್ನು ಶ್ರೀಕೃಷ್ಣನಾಗಿ ಅವತರಿಸುವಂತೆ ಮಾಡಿ, ತನ್ಮೂಲಕವಾಗಿ ಅತ್ಯಂತ ಶ್ರೇಷ್ಠ ಪ್ರಮಾಣ ಗ್ರಂಥವಾದ ಗೀತಾಶಾಸ್ತ್ರವನ್ನು ಲೋಕಕ್ಕೆ ತಂದುಕೊಟ್ಟಳು. ಈ ಗೀತಾ ಶಾಸ್ತ್ರವು ವೇದಶಿಖರವಾದ ವೇದಾಂತಕ್ಕೆ ದೀಪದಂತಿರುವುದು. ವೇದಾಂತದಲ್ಲಿ ಅಡಗಿರುವ ಸಮಸ್ತ ರಹಸ್ಯಗಳೂ ಈ ದೀಪದಿಂದಲೇ ತಿಳಿಯಲ್ಪಡತಕ್ಕವು ಉಪ್ಪರಿಗೆಗೆ ದೀಪವಿಲ್ಲದಿದ್ದರೆ ಹೇಗೆ ಶೋಭಿಸುವುದಿಲ್ಲವೋ ಹಾಗೆಯೇ ಈ ಗೀತಾಶಾಸ್ತ್ರವಿಲ್ಲದಿದ್ದರೆ ವೇದ ವೇದಾಂತಗಳು ಸ್ಫುಟವಾಗಿ ಸ್ಫುರಿಸಲಾರವು. ಅಂದರೆ - ಅವುಗಳ ಅಭಿಪ್ರಾಯವು ಸ್ಪಷ್ಟವಾಗಿ ಗೋಚರಿಸಲಾರದು. ಅಲ್ಲದೆ, ಈ ಗೀತೆಯನ್ನು ಪ್ರಮಾಣವಾಗಿ ಒಪ್ಪಿಕೊಳ್ಳದಿರುವ ಪಂಡಿತನು ಈ ಪ್ರಪಂಚದಲ್ಲಿಯೇ ಇಲ್ಲವೆಂದು ಹೇಳಬಹುದು.ಎಲ್ಲ ಪಂಥದವರೂ ಒಂದಲ್ಲ ಒಂದು ರೀತಿಯಿಂದ ಇದನ್ನು ಆಧಾರವಾಗಿ ಇಟ್ಟುಕೊಂಡು ತಮ್ಮವಾದವನ್ನು ಮುಂದುವರಿಸುವುದನ್ನು ಲೋಕದಲ್ಲಿ ನಾವು ಕಾಣುತ್ತೇವೆ. ಅಷ್ಟೊಂದು ಶ್ರೇಷ್ಠವಾದ ಪ್ರಮಾಣವಿದು. ಗಾಢಾಂಧಕಾರದಂತಿರುವ ಅಜ್ಞಾನವನ್ನು ಈ ಗೀತಾದೀಪವೇ ಹೋಗಲಾಡಿಸಬಹುದು. ಅಂತಹ ಅಜ್ಞಾನವು ನಾಶವಾದರಲ್ಲವೇ ಜನಗಳಿಗೆ ಪರಮ ಕ್ಷೇಮವುಂಟಾಗುವುದು! ಇದೇ ಗೀತೆಯಲ್ಲಿಯೇ ಶರಣಾಗತಿಯನ್ನು ಉಪದೇಶಿಸುವ ಚರಮ ಶ್ಲೋಕವು ಅಡಗಿರುವುದಲ್ಲವೆ! ಆದ್ದರಿಂದ ಅಜ್ಞಾನವು ತೊಲಗಿ ಪರಮ ಪುರುಷಾರ್ಥವಾದ ಮೋಕ್ಷಪರ್ಯಂತವಾದ ಪುರುಷಾರ್ಥಗಳನ್ನು ಪಡೆಯಲು ಒಳ್ಳೆಯ ಮಾರ್ಗವನ್ನು ಉಪದೇಶಿಸಿ ಎಲ್ಲ ಕಾಲದವರೂ ಕ್ಷೇಮವನ್ನು ಹೊಂದುವಂತೆ ಮಾಡಿದ ಈ ಗೀತೋಪದೇಶಕ್ಕಿಂತಲೂ ಹೆಚ್ಚಿನದಾದ ದಯಾಕಾರ್ಯವು ಮತ್ತೊಂದಿಲ್ಲವೆಂಬ ಅಭಿಪ್ರಾಯದಿಂದ ಈ ಅವತಾರಕ್ಕೆ ಇದೇ ಪರಮಪ್ರಯೋಜನವೆಂದೂ,ಇದು ದಯಾದೇವಿಯಿಂದುಂಟಾದ ಮಹೋಪಕಾರವೆಂದೂ ಆಚಾರ್ಯರು ನಿರೂಪಿಸಿರುವರು.




ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಆಧ್ಯಾತ್ಮಿಕ ಸಚಿತ್ರ ಮಾಸ ಪತ್ರಿಕೆ

ಶ್ರೀ ಶೋಭಕೃತ್ ನಾಮಸಂವತ್ಸರ ಪುಷ್ಯ - ಮಾಘ ಮಾಸ ಸಂಚಿಕೆ

ಸಂಪುಟ : 03 ಫೆಬ್ರವರಿ - 2024 ಸಂಚಿಕೆ : 07


ವೆಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋ ದೇವೋ ನ ಭೂತೋ ನ ಭವಿಷ್ಯತಿ


**ಗೌರವ ಸಂಪಾದಕರು**
ಎ.ವಿ. ಧರ್ಮಾರೆಡ್ಡಿ, ಐ.ಡಿ.ಇ.ಎಸ್.
ಕಾರ್ಯನಿರ್ವಹಣಾಧಿಕಾರಿ,.(ಎಫ್.ಎ.ಸಿ.)
ತಿ.ತಿ.ದೇ.,ತಿರುಪತಿ.

**ಪ್ರಧಾನ-ಸಂಪಾದಕರು**
ಡಾ॥ಕೆ.ರಾಧಾರಮಣ, ಎಮ್.ಎ.ಎಮ್.ಫಿಲ್.ಪಿಎಚ್.ಡಿ.

**ಸಂಪಾದಕರು**
ಡಾ॥ ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

**ಮುದ್ರಣ**
ಶ್ರೀ.ಪಿ. ರಾಮರಾಜು, ಎಮ್.ಎ.
ವಿಶೇಷಾಧಿಕಾರಿ,
ತಿ.ತಿ.ದೇ.,ಮುದ್ರಣಾಲಯ,ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ.ತಿರುಪತಿ.

**ಛಾಯಗ್ರಹಣ**
ಶ್ರೀ ಪಿ.ಎನ್.ಶೇಖರ್,
ಸಹಾಯ ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.



**ಲೇಖನ / ಚಂದಾ ಮಿಕ್ಕ ವಿವರಗಳಿಗೆ**
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ - 517 507

**ಇತರ ವಿವರಗಳಿಗೆ**
ಕಾರ್ಯಾಲಯ : 0877 - 2264543
: 0877 - 2264359
ಸಂಪಾದಕರು : 0877 - 2264360

ಸಲಹೆ/ದೂರುಗಳಿಗೆ ಟೋಲ್ ಫ್ರೀ ಸಂಖ್ಯೆ :
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri.helpdesk@tirumala.org
24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333
ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org
ಮೂಲಕ ಓದಬಹುದು.


## ವಿಷಯಸೂಚಿಕೆ


| | | |
|---|---|---|
| ಸಂಪಾದಕೀಯ | | 06 |
| ರಥಸಪ್ತಮಿ ಪರ್ವ - | | |
| ಶ್ರೀನಿವಾಸನ ಅರ್ಧ ಬ್ರಹ್ಮೋತ್ಸವಗಳು | - ಎಸ್. ವಸಂತಮಾಧವ | 07 |
| ರಥಸಪ್ತಮಿ | -ನಾರಾಯಣ್ ಸತ್ಯೇಂದ್ರಕುಮಾರ್ | 10 |
| ಮಾಘಮಾಸದಲ್ಲಿ ಫಲದಾನವ್ರತ | -ಶ್ರೀಮತಿ. ಡಾ॥ ಸುಮನ ಬದರೀನಾಥ್ | 12 |
| ಮಿರ್ಲೆಯ ಸುಂದರ ದೇವಾಲಯಗಳು | - ಕೆಂಗೇರಿ ಚಕ್ರಪಾಣಿ | 14 |
| ಪುರಂದರದಾಸರೂ ಮತ್ತು ಮುಕ್ತಿ ಮಾರ್ಗ | - ಜೆ.ವಿ. ಪ್ರಭಾಕರ್ ರಾವ್ | 16 |
| ಭಾಗವತ ಧರ್ಮ ಪ್ರಚಾರಕ | | |
| ಶ್ರೀ ಗೋಪಾಲದಾಸರು | -ಡಾ॥ ಗುರುಪ್ರೋಶೆಟ್ಟಿಹಳ್ಳಿ | 18 |
| ಶ್ರೀ ನರಹರಿತೀರ್ಥರು | -ಶ್ರೀಧರ ರಾಯಸಂ | 20 |
| ಮಾತೃದೇವೋ ಭವ! ಪಿತೃದೇವೋ ಭವ ! | - ವೆಂಕಟರಾಘವನ್ ಎಸ್. | 22 |
| ಶ್ರೀ ವೇಂಕಟೇಶ್ವರಸ್ವಾಮಿ ಆಲಯ | - ದಿ॥ ಬಿ.ಎನ್. ಶ್ರೀನಿವಾಸನ್ | 25 |
| ಸಂಧ್ಯಾವಂದನೆ | - ಬಿ.ವಿಜೇಂದ್ರನಾಥ್ | 31 |
| ಸಂಸ್ಕೃತ ಕಲಿಯೋಣ | -ವಿ. ಪ್ರದೀಪ್ ಕುಮಾರ್ | 35 |
| ಮಹಾದೇವಿ ಕುಂತಿಯ ಉದಾತ್ತ ಚರಿತ್ರೆ | -ಶ್ರೀಮತಿ. ಕಲ್ಯಾಣಿ ಮೂರ್ತಿ | 36 |
| ಆರೋಗ್ಯ ಸಂರಕ್ಷಣೆಗೆ ಕರಿಬೇವು | -ಡಿ.ಎಸ್. ಬದ್ರಿನಾಥ್ | 39 |
| ತಿರುಮಲೆ ಕಾಲಮಾನಾಚರಣೆಗಳು | - ಶ್ರೀಮತಿ | 40 |
| ಆಳ್ವಾರುಗಳು ಕಂಡ ತಿರುವೇಂಗಡ | -ಎಂ. ಆರ್. ನರಸಿಂಹನ್ | 42 |
| ಶ್ರೀವೆಂಕಟಾಚಲ ಮಹಾತ್ಮೆ | -ಶ್ರೀಮತಿ. ಎನ್.ಪಾರ್ವತಿ | 44 |
| ರಾಶಿ ಫಲಗಳು | - ಬ್ರಹ್ಮಶ್ರೀ ಟಿ.ವಿ.ಕೆ.ಪೂರ್ಣ ಪ್ರಸಾದ್ ಸಿದ್ಧಾಂತಿ | 46 |
| ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು | - ಡಾ॥ ಅನಸೂಯ ಎಸ್. ರಾಜೀವ್ | 47 |
| ನೀತಿಕಥೆ - ಶುಚಿತ್ವದಿಂದ ಸುಂದರ ಸಮಾಜ ನಿರ್ಮಾಣ | - ಎ.ಆರ್. ರಘುರಾಮ | 48 |
| ಚಿತ್ರಕಥೆ -ನಮ್ಮದೆಂದೂ ಏನೂ ಇಲ್ಲ | - ಡಾ॥ ಕೆ. ರವಿಂಚಂದ್ರನ್ | 52 |


ಮುಖಚಿತ್ರ - ಶ್ರೀ ಕಲ್ಯಾಣವೆಂಕಟೇಶ್ವರ ಸ್ವಾಮಿಯವರು, ಶ್ರೀನಿವಾಸಮಂಗಾಪುರಂ

ಹಿಂಬದಿಚಿತ್ರ - ರಥೋತ್ಸವ, ದೇವುನಿಕಡಪ


ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ



| | |
|---|---|
| ಬಿಡಿ ಪ್ರತಿ | ರೂ. 20/- |
| ವಾರ್ಷಿಕ ಚಂದಾ | ರೂ. 240/- |
| ಆಜೀವ ಚಂದಾ | ರೂ. 2400/- (12 ವರ್ಷಗಳು) |
| ವಿದೇಶಿವಾರ್ಷಿಕಚಂದಾ | ರೂ. 1030/- |

## ಸಂಪಾದಕೀಯ

# ಮುನ್ನೆಚ್ಚರಿಕೆಯೇ ದಿವ್ಯ ಔಷಧಿ

**ಶ್ಲೋ॥ ಅರ್ಥಾಗಮೋ ನಿತ್ಯ ಮರೋಗಿತಾ ಚ ಪ್ರಿಯಾ ಚ ಭಾರ್ಯಾ ಪ್ರಿಯ ವಾದಿನೀ ಚ।**
**ವಶ್ಯಶ್ಚ ಪುತ್ರೋರ್ಥಕರೀ ಚ ವಿದ್ಯಾ ಷಡ್ ಜೀವ ಲೋಕಸ್ಯ ಸುಖಾನಿ ರಾಜಸಃ (ಮಹಾಭಾರತ - ಉದ್ಯೋಗಪರ್ವ)**

ನಿತ್ಯವೂ ಹಣದ ಹೊಳೆ ಹರಿಯುವುದು, ನಿರೋಗಿಯಾಗಿರುವುದು, ಪ್ರಿಯವಾದ ಪತ್ನಿ ದೊರೆಯುವುದು, ಇಷ್ಟವಾದ ಮಾತುಗಳನ್ನು ಆಡುವಂತಹಾ ಹೆಂಡತಿ ದೊರೆಯುವುದು, ಹೇಳಿದ ಮಾತನ್ನು ಕೇಳುವಂತಹಾ ಮಗ ಇರುವುದು, ಧನಾರ್ಜನೆಗೆ ಸರಿಹೊಂದುವಂತಹಾ ವಿದ್ಯೆಯನ್ನು ಕಲಿಯುವುದು, ಈ ಆರೂ ಮಾನವರಿಗೆ ಸುಖವನ್ನು ಉಂಟುಮಾಡುವಂತಹುದೆಂದು ಮಹಾಭಾರತದಲ್ಲಿ ತಿಳಿಸಲಾಗಿದೆ. ಈ ಆರರಲ್ಲಿ ಎರಡನೆಯದಾದ ಆರೋಗ್ಯವೇ ಮಹಾಭಾಗ್ಯ! ಇದು ಮನುಷ್ಯರಿಗೆ ಮುಖ್ಯವಾದುದು. ಆರೋಗ್ಯವಿದ್ದರೆ ಉಳಿದ ಐದನ್ನೂ ಸಂಪಾದಿಸಬಹುದು. ಆರೋಗ್ಯವಿಲ್ಲದಿದ್ದರೆ ಉಳಿದ ಐದೂ ಇಲ್ಲದಂತೆಯೇ ಲೆಕ್ಕ!

ಪ್ರಾರಂಭದ ಯುಗಗಳಲ್ಲಿ ಪ್ರಜೆಗಳು ಅಜಾನುಬಾಹುಗಳಾಗಿದ್ದರೆಂದೂ, ದೃಢಕಾಯರೆಂದೂ, ಆರೋಗ್ಯವಂತರೆಂದೂ ದೀರ್ಘಕಾಲದವರೆಗೂ ಬದುಕಿರುತ್ತಿದ್ದರೆಂದು ಹೇಳುವುದಕ್ಕೆ ನಮಗೆ ಹೆಮ್ಮೆಯಾಗುತ್ತಿದೆ. ಆದರೆ ಈ ನಡುವೆ ವಾತಾವರಣದಲ್ಲಿ ಅನೇಕ ಬದಲಾವಣೆಗಳುಂಟಾಗಿ ಮಾನವನ ಬದುಕಿನ ಮೇಲೆ ಬಹಳಷ್ಟೇ ಪರಿಣಾಮವನ್ನು ಬೀರಿವೆ. ಈ ಬದಲಾವಣೆಗಳಿಂದಾಗಿ ನಮ್ಮ ನಡುವೆ ಕಂಡೂ ಕೇಳರಿಯದಂತಹಾ ರೋಗಗಳು ಬೇರುಬಿಟ್ಟಿದ್ದು ಇಡೀ ಮಾನವ ಲೋಕದಲ್ಲಿ ಅಲ್ಲಕಲ್ಲೋಲವನ್ನುಂಟು ಮಾಡಿವೆ.

ಸಾವಿರಾರು ಪ್ರಾಣಾಂತಕ ಖಾಯಿಲೆಗಳು ಪ್ರಾರಂಭವಾಗಿವೆ. ಇವೆಲ್ಲವೂ ಮನುಷ್ಯನ ಉಳಿಯುವಿಕೆಗೆ ಅಪಾಯದ ಗಂಟೆಯನ್ನು ಬಾರಿಸುತ್ತಾ ಕ್ಲಿಷ್ಟಪರಿಸ್ಥಿತಿಯನ್ನು ಹುಟ್ಟಿಹಾಕಿವೆ. ಯಾರಿಗೂ ಕಣ್ಣ ತುಂಬಾ ನಿದ್ದೆಯಿಲ್ಲದಂತೆ ಮಾಡಿವೆ.

ಪ್ರಪಂಚವನ್ನು ನಾಲ್ಕು ಗೋಡೆಗಳ ನಡುವೆ ಬಂಧಿಸಿ, ಊರುಗಳು, ನಗರಗಳು, ದೇಶಗಳು ಮೃತ್ಯು ಘೋಷದಿಂದ ನರಳಿದ ಕಾಲ ನಮಗೆ ಸವಾಲು ಎಸೆದಿತ್ತು. ಇದು ಬಹಳ ವಿಷಾಧವನ್ನುಂಟು ಮಾಡಿತ್ತು. ಇದರ ಮೊದಲ ಹಂತ ಮುಗಿದಿತ್ತು. ಮುಖಕ್ಕೆ ಮಾಸ್ಕ್ ಧರಿಸಿ ಉಸಿರಾಡುತ್ತಿರುವ ಸಮಯದಲ್ಲಿ ನಮ್ಮ ದೇಶದ ಮೇಲೆ ಧಾಳಿ ಮಾಡಿದ ಎರಡನೆಯ ಅಲೆ ಮತ್ತೊಂದು ಮಾರಣ ಹೋಮವನ್ನು ಸೃಷ್ಟಿಸಿತ್ತು. ಭಗವಂತನ ದಯೆಯಿಂದಾಗಿ, "ವೈದ್ಯೋ ನಾರಾಯಣೋ ಹರಿಃ" ಎನ್ನುವಂತೆ ನಾರಾಯಣನ ಸ್ವರೂಪರಾದ ವೈದ್ಯರ ಚಿಕಿತ್ಸೆಗಳಿಂದಾಗಿ ಆ ಮಾರಣಾಂತಿಕ ಖಾಯಿಲೆಯಿಂದ ಹೊರಬಂದೆವು. ಆದರೆ ಕೋವಿಡ್ ಎಂಬ ಖಾಯಿಲೆಯನ್ನು ಪೂರ್ತಿಯಾಗಿ ನಿರ್ಮೂಲನ ಮಾಡುವುದು ಅಸಾಧ್ಯವೆಂದು ಅದಕ್ಕೆ ತುತ್ತಾಗದಂತೆ ಎಚ್ಚರಿಕೆಯನ್ನು ತೆಗೆದುಕೊಳ್ಳುವುದೇ ಸರಿಯಾದ ಪರಿಷ್ಕಾರ ಮಾರ್ಗವೆಂದು ವೈದ್ಯ ವರ್ಗದವರು ಎಂದಿನಿಂದಲೋ ಎಚ್ಚರಿಕೆಯನ್ನು ನೀಡುತ್ತಾ ಬಂದಿದ್ದಾರೆ. ಅದು ನಿಜವೆಂದು ನಿರೂಪಿಸುತ್ತಾ ಕರೋನಾ ವೈರಸ್ ಆಗಾಗ ತನ್ನ ಪ್ರತಾಪವನ್ನು ಬೀರುತ್ತಲೇ ಇದೆ. ಆ ನಿಟ್ಟಿನಲ್ಲಿ ಅನೇಕ ರಾಜ್ಯಗಳಲ್ಲಿ ಆ ಖಾಯಿಲೆ ತನ್ನ ಮತ್ತೊಂದು ರೂಪದೊಂದಿಗೆ ಧಾಳಿ ನಡೆಸಲಾರಂಭಿಸಿವೆ. ಕರೋನಾ ವೈರಸ್ ವೇರಿಯಂಟ್ ಜಿ.ಎಸ್.1 ಕೇಸುಗಳು ಹೊರಬೀಳುತ್ತಿದೆ. ಈ ವೇರಿಯಂಟ್ ಅಷ್ಟೊಂದು ಪ್ರಾಣಾಂತಕವಲ್ಲವೆಂದು ಆರೋಗ್ಯದ ನಿಪುಣರು ತಿಳಿಸಿದ್ದಾರೆ. ಆದರೂ ನಾವು ಅಶ್ರದ್ಧೆಯನ್ನು ತೋರದೇ,ಎಚ್ಚರಿಕೆಯಿಂದ ಇರಬೇಕು. ಮಾಸ್ಕ್ ಧರಿಸಬೇಕು. ಕೈಗಳನ್ನು ಆಗಾಗ ತೊಳೆದುಕೊಂಡು ಶುಚಿತ್ವದತ್ತ ಗಮನಹರಿಸಬೇಕು. ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವುದು, ಮುಂತಾದ ಎಚ್ಚರಿಕೆಯ ಕ್ರಮಗಳನ್ನು ಪಾಲಿಸುವುದರಿಂದ ನಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವುದಲ್ಲದೇ ಅದೇ ನಮಗೆ ಶ್ರೀರಾಮರಕ್ಷೆಯಾಗುತ್ತದೆ.

ಜೆ.ಎನ್-೧ ಸಬ್ ವೇರಿಯಂಟ್ ಗೆ ಪ್ರಜೆಗಳು ಭಯಪಡದೇ ಹೆದರದೇ ಸರ್ವಾಂತರ್ಯಾಮಿಯಾದ ಶ್ರೀವೇಂಕಟೇಶ್ವರನನ್ನು ಪ್ರಾರ್ಥಿಸುತ್ತಾ, ಸರ್ವ ವಿಪತ್ತುಗಳನ್ನು ನಿವಾರಿಸುವಂತಹಾ ಸುಂದರಕಾಂಡವನ್ನು ಪ್ರತಿಯೊಬ್ಬರೂ ಪಠಿಸುತ್ತಾ, ಶ್ರವಣ ಮಾಡುತ್ತಾ ಮಾನಸಿಕ ಧೈರ್ಯವನ್ನು, ಸ್ಥೈರ್ಯವನ್ನು ತಂದುಕೊಳ್ಳಬೇಕೆಂದು ನಮ್ಮ ಕೋರಿಕೆ!

**॥ಕಮಲಾಕಾಂತನೇ ಚಿಂತೆಗಳನ್ನು ಓಡಿಸುವಂತಹಾ ದಿವ್ಯ ಔಷಧ॥**



# ರಥ ಸಪ್ತಮಿ ಪರ್ವ ಶ್ರೀನಿವಾಸನ ಅರ್ಧ ಬ್ರಹ್ಮೋತ್ಸವಗಳು



– ಮೂಲ: ಭೂಮನ ಕರುಣಾಕರ ರೆಡ್ಡಿ
ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು

ಸನಾತನ ಸಂಸ್ಕೃತಿಯಲ್ಲಿ ಸೂರ್ಯ ಭಗವಾನನಿಗೆ ಅದ್ವಿತೀಯ ಸ್ಥಾನವನ್ನು ನೀಡಲಾಗಿದೆ. ವೇದ ಪುರಾಣಾದಿಗಳು ಇತಿಹಾಸ ಕಾವ್ಯಾದಿಗಳು ಸೂರ್ಯದೇವನ ಮಹಿಮೆಯನ್ನು ವಿಧವಿಧವಾಗಿ ಕೊಂಡಾಡಿವೆ. ಸೂರ್ಯಭಗವಾನನು ನಮಗೆ ಪ್ರತ್ಯಕ್ಷ ದೈವನಾಗಿದ್ದಾನೆ.ಸೂರ್ಯನ ತ್ರಿಕಾಲ ಸ್ವರೂಪಗಳ ಸ್ಮರಣೆಯಿಂದ ಕೂಡಿದ ಗಾಯತ್ರಿ ಮಂತ್ರದ ಉಪಾಸನೆ ಎಲ್ಲಾ ದುರಿತಗಳನ್ನು ನಿವಾರಿಸುತ್ತದೆ. ಸೌರ ಶಕ್ತಿಗೆ ಸಂಬಂಧಿಸಿದ ವಿಜ್ಞಾನದ ಕುರಿತಾದ ಮಾಹಿತಿಯು ವೇದದಲ್ಲಿ ಸೂರ್ಯ ಮಂತ್ರಗಳಲ್ಲಿ ಅಡಗಿದೆ ಎಂದು ಪಾಶ್ಚಾತ್ಯರು ಸಹ ಗುರುತಿಸಿ ಸಂಶೋಧನೆ ನಡೆಸುತ್ತಿದ್ದಾರೆ.

ಪ್ರತಿದಿನವೂ ನಮ್ಮ ಕಣ್ಣ ಮುಂದೆ ಸಾಕ್ಷಾತ್ಕರಿಸುತ್ತಿರುವ ಪರಬ್ರಹ್ಮನು,ಸಮಸ್ತ ವಿಶ್ವಕ್ಕೆ ಆತ್ಮನಾದ ಸೂರ್ಯನಾಗಿದ್ದಾನೆ.ಸೂರ್ಯೋಪ ನಿಷತ್ತಿನಲ್ಲಿನ ಒಂದರಿಂದ ನಾಲ್ಕರ ಅನ್ವಯ ಸೂರ್ಯನು ಸಮಸ್ತ ಪ್ರಾಣಿಗಳನ್ನು ಸೃಷ್ಟಿಸುತ್ತಿದ್ದಾನೆ ಮತ್ತು ಪೋಷಿಸುತ್ತಿದ್ದಾನೆ. ಸೂರ್ಯನ ಶಕ್ತಿಯನ್ನು ತಿಳಿಸುವ ಅರುಣ ಮಂತ್ರದಿಂದ ಸಾಧಕರಿಗೆ ವಿಜಯಪ್ರಾಪ್ತಿ ,ಆರೋಗ್ಯ ಲಾಭ, ರೋಗ ನಿವಾರಣೆ ಆಗುತ್ತದೆ.


ಉದಯವಾಗುತ್ತಲೇ ಸೂರ್ಯನು ಇಡೀ ಲೋಕವನ್ನು ನಿತ್ಯ ಕರ್ಮಗಳಲ್ಲಿ ತೊಡಗಿಸುತ್ತಾನೆ. ಆದ್ದರಿಂದ ಸೂರ್ಯನನ್ನು ಜಗಚ್ಚಕ್ಷು, ಕರ್ಮಸಾಕ್ಷಿ ಎಂದು ಕರೆದಿದ್ದಾರೆ. ನಾವು ಮಾಡುವ ಸಮಸ್ತ ಶುಭಕರ್ಮಗಳಿಗೆ ಸೂರ್ಯಭಗವಾನನೇ ಸಾಕ್ಷಿ. ಆದ್ದರಿಂದ ನಾವು ಮನಸಾ, ವಾಚಾ, ಕರ್ಮಣಾ ಮಾಡುವಂತಹ ಕಾರ್ಯಗಳೆಲ್ಲವೂ ಪುಣ್ಯಕರ್ಮಗಳೇ ಆಗಿರಬೇಕೆಂದು ಪುರಾಣಗಳು ಸಾರುತ್ತವೆ.

ಹಾಗಾಗಿ ಎಲ್ಲಾ ಸಂದರ್ಭಗಳಲ್ಲಿಯೂ ಶುಭಕರ್ಮಗಳನ್ನೇ ಆಚರಿಸುವಂತಹ ಅದೃಷ್ಟವನ್ನು ಪ್ರಸಾದಿಸುವಂತೆ ಸೂರ್ಯನನ್ನು ಪೂಜಿಸಬೇಕು ಹಾಗೂ ಸೂರ್ಯನು ಸಕಲ ದೇವತಾ ಸ್ವರೂಪನೆಂದು ವೇದಶಾಸ್ತ್ರಗಳೆಲ್ಲವೂ ಮುಕ್ತ ಕಂಠದಿಂದ ಸಾರುತ್ತವೆ.

ಸೂರ್ಯನೇ ಕಾಲಚಕ್ರಕ್ಕೆ ಮೂಲ, ಸೂರ್ಯನಿಂದಲೇ ಷಡ್ ಋತುಗಳು ಏರ್ಪಡುತ್ತಿವೆ. ಸಕಲ ಸೃಷ್ಟಿಗೂ ಪರಮಾತ್ಮ ಸೂರ್ಯನೇ ಕಾರಣೀಭೂತನು. ಆದ್ದರಿಂದ "ಓಂ ಆದಿತ್ಯಾಯ ವಿದ್ಮಹೇ ಸಹಸ್ರಕಿರಣಾಯ ಧೀಮಹಿ,ತನ್ನಃ ಸೂರ್ಯಃ ಪ್ರಚೋದಯಾತ್" ಎನ್ನುವ ಸೂರ್ಯ ಗಾಯತ್ರಿ ಮಂತ್ರದಿಂದ ನಿತ್ಯ ಸೂರ್ಯನನ್ನು ಭಾರತೀಯರು ಆರಾಧಿಸುತ್ತಾರೆ. ಅದಲ್ಲದೇ,

ಏಷ ಬ್ರಹ್ಮಾ ಚ ವಿಷ್ಣುಶ್ಚ ಶಿವಃ ಸ್ಕಂದಃ ಪ್ರಜಾಪತಿಃ।
ಮಹೇಂದ್ರೋ ಧನದಃ ಕಾಲೌಯಮಃ ಸೋಮೋಹ್ಯಪಾಂಪತಿಃ।
ಏನ ಮಾಪತ್ಸು ಕೃಚ್ಛ್ರೇಷು ಕಾಂತಾರೇಷು ಭಯೇಷುಚ್ಛೆಚ।
ಕೀರ್ತಯನ್ ಪುರುಷಃ ಕಶ್ಚಿತ್ನಾವಸೀದತಿ ರಾಘವ ॥

ವಾಲ್ಮೀಕಿ ರಾಮಾಯಣದಲ್ಲಿನ ಯುದ್ಧ ಕಾಂಡದಲ್ಲಿ ಆದಿತ್ಯ ಹೃದಯ ಸ್ತೋತ್ರವನ್ನು ಅಗಸ್ತ್ಯ ಮಹರ್ಷಿಯು ರಾಮನಿಗೆ ಉಪದೇಶಿಸಿದ್ದಾರೆ. ಸೂರ್ಯಭಗವಾನನ ವಿರಾಟ್ ಸ್ವರೂಪವನ್ನು ವಿವರಿಸುತ್ತಾ ಸೂರ್ಯನೇ ಬ್ರಹ್ಮ,ವಿಷ್ಣು,ಶಿವ,ಸುಬ್ರಹ್ಮಣ್ಯ,ಇಂದ್ರ,ಕುಬೇರ,ಯಮ,ವರುಣಾದಿ ದೇವರುಗಳು.ಸೂರ್ಯನನ್ನು ವಿವಿಧ ರೂಪಗಳಲ್ಲಿ ಆರಾಧಿಸುತ್ತೇವೆ.ಆಪತ್ತಿನಲ್ಲಿರುವವರು,ಪಾಪಕಾರ್ಯಗಳನ್ನು ಎಸಗಿದವರು ಅರಣ್ಯ ಮಧ್ಯದಲ್ಲಿ ಸಿಲುಕಿ ದಿಕ್ಕು ತೋಚದೇ ಅಲೆದಾಡುತ್ತಿರುವವರು, ಭಯ ಭೀತರಾದವರು, ಸೂರ್ಯಭಗವಾನನನ್ನು ಆರಾಧಿಸಿದರೆ ಸಮಸ್ತ ದುಃಖ ನಿವಾರಣೆ ಆಗುತ್ತವೆ. ಪ್ರತಿದಿನ ಬೆಳಗ್ಗೆ ಏಕಾಗ್ರತೆಯಿಂದ ಭಕ್ತಿ ಪೂರ್ವಕವಾಗಿ "ಓಂ ನಮೋನಾರಾಯಣಾಯ" ಎಂಬ ಅಷ್ಟಾಕ್ಷರ



ಮಹಾ ಮಂತ್ರವನ್ನು 108 ಬಾರಿ ಜಪಿಸಿ ಅರ್ಘ್ಯ ಪ್ರದಾನ ಮಾಡಿದಲ್ಲಿ ಸೂರ್ಯನ ಅನುಗ್ರಹ ಲಭಿಸುತ್ತದೆ. ಸೂರ್ಯಭಗವಾನನ ಕಿರಣಗಳು ಭೂಮಿಗೆ ಅಧಿಕವಾಗಿ ಲಭಿಸುವ ದಿನವೇ ರಥಸಪ್ತಮಿ. ಈ ದಿನದಂದು ಸೂರ್ಯನ ಚಲನೆಯಲ್ಲಿ ಬದಲಾವಣೆ ಉಂಟಾಗುತ್ತದೆ. ಭಾರತೀಯರು ಆ ದಿನವನ್ನು ಸೂರ್ಯನ ಜಯಂತಿ (ಅವತಾರ ಮಹೋತ್ಸವ)ಎಂದು ಭಾವಿಸಿದ್ದಾರೆ. ರಥಸಪ್ತಮಿಯಂದು ಸೂರ್ಯನಿಗೆ ಪಾಯಸ,ಅನ್ನ,ನೈವೇದ್ಯವನ್ನು ನಿವೇದಿಸುತ್ತಾರೆ.

ರಥಸಪ್ತಮಿಯಂದು ಪ್ರಾತಃಕಾಲದಲ್ಲಿ ಮಾಡುವ ಸ್ನಾನಾದಿ ವಿಧಿಗಳನ್ನು ಮಹರ್ಷಿಗಳು ವೈಜ್ಞಾನಿಕವಾಗಿ ವಿವರಿಸಿದ್ದಾರೆ. ಅರ್ಕದೆಲೆ ಅಥವಾ ಎಕ್ಕದೆಲೆಗಳನ್ನು ತಲೆ, ಭುಜ, ಕತ್ತು, ಕಂಕುಳು, ತೊಡೆ, ಪಾದಗಳ ಮೇಲಿರಿಸಿ ಸ್ನಾನ ಮಾಡುವುದು ರಥಸಪ್ತಮಿಯ ವಿಶೇಷತೆಗಳಲ್ಲೊಂದು.

ಎಕ್ಕದ ಎಲೆಗಳಿಗೆ ಚರ್ಮಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ರೋಗಗಳನ್ನು ನಿವಾರಿಸುವ ಸಾಮರ್ಥ್ಯವಿದೆ. ಅಷ್ಟೇ ಅಲ್ಲದೇ, ದೇಹದಲ್ಲಿನ ಕೀಲುನೋವು, ಹಲ್ಲು ನೋವು, ಹೊಟ್ಟೆ ನೋವುಗಳಿಗೂ ಸಹ ಎಕ್ಕದ ಗಿಡ, ಅದರ ಎಲೆಗಳಲ್ಲಿರುವ ಔಷಧೀಯ ಅಂಶಗಳಿಂದ ಪರಿಹಾರ ಕಂಡುಕೊಳ್ಳಬಹುದಾಗಿದೆ. ಹೀಗಾಗಿಯೇ ಈ ದಿನ ಎಕ್ಕದೆಲೆಯ ಸ್ನಾನಕ್ಕೆ ಮಹತ್ವ ನೀಡಲಾಗಿದೆ. ಪಂಚಾಂಗ ಕರ್ತರು ರಥಸಪ್ತಮಿಯನ್ನು ಸೂರ್ಯಜಯಂತಿ ಎಂದು ತೀರ್ಮಾನಿಸುತ್ತ ಆ ದಿನದಿಂದ ಸೂರ್ಯಕಾಂತಿಯು ಉತ್ತರ ದಿಕ್ಕಿನಲ್ಲಿ ಹೆಚ್ಚಾಗಿ ಇರುವುದರಿಂದ ನಕ್ಷತ್ರಗಳು ಆಕಾಶದಲ್ಲಿ ರಥಾಕೃತಿಯಲ್ಲಿ ಗೋಚರಿಸುತ್ತವೆ. ಆದ್ದರಿಂದ ಅಂದು ಸಮಸ್ತರು ಸೂರ್ಯನನ್ನು ಆರಾಧಿಸುವುದರಿಂದ ಶುಭ ಫಲಗಳು ಲಭಿಸುತ್ತವೆ ಎಂದು ಋಷಿ ಮುನಿಗಳು ಬೋಧಿಸಿದ್ದಾರೆ.

ಸೂರ್ಯನನ್ನು ಹನ್ನೆರಡು ಹೆಸರುಗಳಿಂದ ಆರಾಧಿಸುವುದು ಪ್ರಸಿದ್ಧ ಸಂಪ್ರದಾಯವಾಗಿದೆ. ಸೂರ್ಯನಿಗೆ ಆ ಹೆಸರುಗಳು ಹೇಗೆ ಅನ್ವರ್ಥವಾಗಿದೆ ಎಂದು ಮಹರ್ಷಿಗಳು ವಿವರಿಸಿದ್ದಾರೆ.

**1.ಮಿತ್ರ :** ಸೂರ್ಯನು ಲೋಕಕ್ಕೆಲ್ಲಾ ಮಿತ್ರನು, ಪ್ರಕೃತಿಯಲ್ಲಿ ಎಲ್ಲಾ ಪ್ರಾಣಿಗಳು ಸೂರ್ಯದರ್ಶನವನ್ನು ಕೋರುಕೊಳ್ಳುತ್ತವೆ. ಆದರೆ ಉಷ್ಟ್ರಪಕ್ಷಿಯಂತಹ ಕೆಲವು ಪ್ರಾಣಿಗಳು ದ್ವೇಷಿಸಿದರೂ,ಸೂರ್ಯರಶ್ಮಿ ಇಲ್ಲದೆ ಅವುಗಳು ಸಹ ಜೀವಿಸಲಾರವು. ಆದ್ದರಿಂದ ಸೂರ್ಯನನ್ನು ದರ್ಶಿಸಿ ಸತ್ಕಾರ್ಯಗಳನ್ನು ಮಾಡಿದರೆ ಸೂರ್ಯ ಮೈತ್ರಿ ಸಿದ್ಧಿಸಿ,ಆರೋಗ್ಯ, ಕವಿತ್ವ, ಬುದ್ಧಿಬಲ,ಶರೀರ ಕಾಂತಿ, ಆಯುಷ್ಯ,ಆರೋಗ್ಯ,ಕೀರ್ತಿ,ಧನ ಲಭಿಸುತ್ತವೆ ಎಂದು ಮಯೂರ ಕವಿ ಕೊಂಡಾಡಿದ್ದಾರೆ.

**2.ರವಿ:** ಸೂರ್ಯನು ಎಲ್ಲರಿಂದಲೂ ಸ್ತುತಿಸಲ್ಪಡುವುದರಿಂದ ರವಿ ಎಂಬ ಹೆಸರು ಬಂದಿದೆ. ಇರುಮುಖ ಬ್ರಹ್ಮನಿಗೆ ವೇದವನ್ನು ಉಪದೇಶಿಸಿದ ಮಹನೀಯನು. ನಾರಾಯಣನ ನಾಭಿ ಕಮಲದಿಂದ ಹುಟ್ಟಿದ ಬ್ರಹ್ಮನಿಗೆ ವೇದಗಳನ್ನು ಉಪದೇಶ ಮಾಡಿದ ವೇದವ್ಯಾಸನೇ ಸೂರ್ಯಭಗವಾನನು.

**3.ಸೂರ್ಯ :** ಸೂರ್ಯನು ಅವರವರ ಕರ್ಮಗಳ ಅನುಸಾರವಾಗಿ ಎಲ್ಲಾ ಜೀವಿಗಳು ಪ್ರವರ್ತಿಸುವಂತೆ ಪ್ರೇರೇಪಿಸುತ್ತಾನೆ. ಪ್ರೇರಣೆ, ಸೃಷ್ಟಿ ಸೂರ್ಯನ ಸ್ವಭಾವಕ್ಕೆ ಸಿದ್ಧವಾದ ಗುಣಗಳು.

**4.ಭಾನು:** ಎಲ್ಲರಿಗೂ ಕಾಂತಿಯನ್ನು ನೀಡುವವನೇ ಸೂರ್ಯ. ಆತನನ್ನು ಆರಾಧಿಸಿದರೆ ಕಾಂತಿಯನ್ನು ಪ್ರಸಾದಿಸುತ್ತಾನೆ.

**5. ಖಗ:**ಆಕಾಶದಲ್ಲಿ ಪ್ರಕಾಶಮಾನವಾಗಿ ಸೂರ್ಯನು ಬೆಳಗುತ್ತಿದ್ದಾನೆ. ಈ ಪ್ರಪಂಚವನ್ನು ಪೋಷಿಸುತ್ತ ವೈಕುಂಠದಲ್ಲಿ ವಿರಾಜಮಾನವಾಗಿರುವ ಮಹಾತ್ಮನೇ ಸೂರ್ಯನಾರಾಯಣನು.

**6. ಪೂಷ:**ಇಡೀ ವಿಶ್ವವನ್ನು ತನ್ನ ಕಾಂತಿಯಿಂದ ಪೋಷಿಸುತ್ತಿದ್ದಾನೆ. ಅಂದರೆ ಈ ವಿಶ್ವವನ್ನು, ಪ್ರಕೃತಿ ಸಂಪತ್ತನ್ನು, ನಮ್ಮೆಲ್ಲರನ್ನೂ ಪೋಷಿಸುತ್ತಿದ್ದಾನೆ. ಮಾನವರು ಜೀವಿಸಲು ಅನ್ನವು ಅವಶ್ಯಕವಾಗಿದೆ. ಇದು ಜೀವನ ನಡೆಸಲು ಕಾರಣವೂ ಆಗಿದೆ. ಅನ್ನದ ಮುಖಾಂತರ ಜೀವಿಗಳನ್ನು ಬೆಳೆಸಿ, ಪೋಷಿಸಿ, ಆದರಿಂದಲೇ ಅವರನ್ನು ಸಂಹರಿಸುತ್ತಾನೆ. ಆದರೆ ಅವರಲ್ಲಿನ ತೇಜಸ್ಸಿಗನುಗುಣವಾಗಿ ಅವರ ವಂಶವನ್ನು ಬೆಳಸಿ, ಪೋಷಿಸುತ್ತಾನೆ.

**7. ಹಿರಣ್ಯಗರ್ಭ:** ಪ್ರಳಯ ಕಾಲದಲ್ಲಿ ಎಲ್ಲಾ ಜೀವಿಗಳನ್ನು ತನ್ನ ಬಂಗಾರದಂತ ಪ್ರದೇಶಕ್ಕೆ ತೆಗೆದುಕೊಂಡು ಹೋಗಿ ತನ್ನ ಉದರದಲ್ಲಿ ಇರಿಸಿಕೊಂಡು ಪ್ರಳಯದ ನಂತರ ಮತ್ತೆ ವಿಶ್ವದಲ್ಲಿ ಮರು ಸೃಷ್ಟಿಸುತ್ತಾನೆ.

**8. ಮರೀಚಿ:** ಮರೀಚಿಮಾನ್ ಎಂದರೆ ಕಿರಣಗಳ ಪುಂಜದ ಸಮೂಹದಿಂದ ಕೂಡಿರುವವನು. ಅಂಧಕಾರವನ್ನು, ವ್ಯಾಧಿಗಳೆನ್ನುವ ಶತ್ರುಗಳನ್ನು ನಾಶ ಮಾಡುವ ಸಾಮರ್ಥ್ಯವನ್ನು ಹೊಂದಿರುವವನು. ಶಂಖ, ಪದ್ಮ, ಚಕ್ರ, ಗಧಾಧಾರಿಯಾದ ಪರಮಾತ್ಮನು.

**9. ಆದಿತ್ಯ :** ಸೂರ್ಯನ ಮುಖಾಂತರ ಲೋಕವು ಸಮಸ್ತ ಫಲಗಳನ್ನು ಪಡೆಯುತ್ತದೆ. ಅಂದರೆ ಲೋಕದಲ್ಲಿನ ಸಮಸ್ತವೂ ಸೂರ್ಯನಿಗೆ ಅಧೀನವಾಗಿದೆ. ಅದಲ್ಲದೆ ಸಮಸ್ತ ವಸ್ತುಗಳನ್ನು ಪ್ರಕಾಶಿಸುತ್ತಿರುವ ಪುಣ್ಯ ಮೂರ್ತಿಯೂ ಹೌದು. ಸಮಸ್ತ ವಸ್ತುಗಳನ್ನು ಲೋಕಕ್ಕೆ ನೀಡುವವನೇ ಸೂರ್ಯನು.

**10.ಸವಿತೃ :** ಸಮಸ್ತ ವಿಶ್ವವನ್ನು ಸೃಷ್ಟಿಸಿ, ಸರ್ವಜೀವಿಗಳಿಗೆ ಜೀವನಾಧಾರವಾಗಿ ಸಂತೋಷ, ಆನಂದವನ್ನು ನೀಡುತ್ತಿರುವನು.

**11. ಅರ್ಕ :** ಲೋಕದಲ್ಲಿ ಮೊಟ್ಟ ಮೊದಲ ಸ್ತೋತ್ರವನ್ನು ಸೃಷ್ಟಿಸಿದವನೇ ಸೂರ್ಯನು, ಆದ್ದರಿಂದ ಸೂರ್ಯ ನಮಸ್ಕಾರಗಳು ಸಕಲ ಸಂಪದವನ್ನು, ಆರೋಗ್ಯವನ್ನು, ಅನುಭೂತಿಯನ್ನು ಪ್ರಸಾದಿಸುತ್ತವೆ.

**12. ಭಾಸ್ಕರ:** ಸೂರ್ಯನ ಅನುಗ್ರಹದಿಂದಲೇ ಈ ಪ್ರಪಂಚದಲ್ಲಿ ನಮಗೆ ಎಲ್ಲವೂ ಗೋಚರಿಸುತ್ತವೆ. ಅದಲ್ಲದೇ ಸೂರ್ಯನ ಆರಾಧನೆಯಿಂದ ವಿಶ್ವದಲ್ಲಿನ ನಿಗೂಢ ವಿಷಯಗಳನ್ನು ಅರ್ಥೈಸಲು ಸಾಧ್ಯವಾಗಿದೆ. ಹೀಗೆ ಎಷ್ಟೋ ಗೂಡಾರ್ಥಗಳಿಂದ ಕೂಡಿರುವ ಸೂರ್ಯನ ಈ 12 ನಾಮಗಳು ಮಹಿಮಾನ್ವಿತವಾಗಿವೆ. ಕನಿಷ್ಠ ಪಕ್ಷ ಸೂರ್ಯ ಜಯಂತಿಯಾದ ರಥ ಸಪ್ತಮಿಯಂದು ಇವುಗಳನ್ನು ಸ್ಮರಿಸಬೇಕು.

ಕಲಿಯುಗ ವೈಕುಂಠ ತಿರುಮಲೆ ಪುಣ್ಯಕ್ಷೇತ್ರದಲ್ಲಿ ಈ ಮಾಘ ಸಪ್ತಮಿ ಪರ್ವಗಳನ್ನು ಅರ್ಚಕರು ಅತ್ಯಂತ ವೈಭವವಾಗಿ ನೆರವೇರಿಸುತ್ತಾರೆ.

ಸ್ವಾಮಿಯವರನ್ನು ಏಳು ವಾಹನಗಳ ಮೇಲೆ ಮೆರವಣಿಗೆ ಮಾಡಿ ಚಕ್ರಸ್ನಾನ ಮಾಡುವುದು ಆಗಮ ಸಂಪ್ರದಾಯವಾಗಿದೆ. ಕ್ರಿ.ಶ.1564 ರಿಂದ ಅರ್ಧ ಬ್ರಹ್ಮೋತ್ಸವವನ್ನು ರಥಸಪ್ತಮಿಯಂದು ನಡೆಸಲಾಗುತ್ತಿದೆ ಎಂದು ಶಾಸನಗಳು ವಿವರಿಸುತ್ತವೆ.


ರಥಸಪ್ತಮಿಯಂದು ಸೂರ್ಯಪ್ರಭವಾಹನವು ಆಯುರಾರೋಗ್ಯಗಳನ್ನು ದಯಪಾಲಿಸುತ್ತದೆ, ಚಿಕ್ಕ ಶೇಷ ವಾಹನವು ದುಷ್ಟಪಾಪಗಳನ್ನು ನಾಶಪಡಿಸುತ್ತದೆ,

ಗರುಡವಾಹನವು ದಾಸ್ಯ ಭಕ್ತಿಯನ್ನು ಪರಿಪಾಲಿಸುತ್ತದೆ. ಹನುಮದ್ವಾಹನವು ಕಾರ್ಯ ಸಿದ್ಧಿಯನ್ನು ಉಂಟು ಮಾಡುತ್ತದೆ, ಕಲ್ಪವೃಕ್ಷವಾಹನವು ಕೋರಿಕೆಗಳನ್ನು ಈಡೇರಿಸುತ್ತದೆ,

ಅಧಿಕಾರ ಸಂಪತ್ತುಗಳನ್ನು ದಯಪಾಲಿಸುವುದು ಸರ್ವ ಭೂಪಾಲ ವಾಹನ. ಆಧ್ಯಾತ್ಮಿಕ ಆದಿದೈವಿಕ, ಆದಿಭೌತಿಕ ಸಂಕಷ್ಟಗಳನ್ನು ನಿವಾರಿಸುವುದು ಚಂದ್ರಪ್ರಭವಾಹನ. ಈ ವಾಹನಗಳಿಗೆ ಇಂತಹ ಶಕ್ತಿಯನ್ನು ನೀಡುವವನು ತಿರುಮಲೆ ಶ್ರೀನಿವಾಸನೇ ಅದ್ದರಿಂದ ಶ್ರೀ ವೆಂಕಟೇಶ್ವರಸ್ವಾಮಿಗೆ ಅಥವಾ ಶ್ರೀಮನ್ನಾರಾಯಣನಿಗೆ ಸಾಮ್ಯತೆಯನ್ನು ಬಿಂಬಿಸುವ ಮಹನೀಯರು ಸೂರ್ಯನಾರಾಯಣನಂತೆ ಪರಮಾತ್ಮನನ್ನು ಕೊಂಡಾಡುತ್ತಾರೆ.

ಆ ಭಗವಂತನ ಸೇವೆಯಲ್ಲಿ ನಾವೆಲ್ಲರೂ ನಿರತರಾಗೋಣ. ರಥಸಪ್ತಮಿ ಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಿ ಕೃತಾರ್ಥರಾಗೋಣ.

**ಅನುವಾದ : ಎಸ್. ವಸಂತ ಮಾಧವ**



# ಸಂಧ್ಯಾವಂದನೆ

- ಬಿ. ವಿಜೇಂದ್ರನಾಥ್
99807 58218

ರಾತ್ರಿ ಕಳೆದು ಹಗಲಾಗುವ ಹಾಗೆಯೇ ಹಗಲು ಕಳೆದು ರಾತ್ರಿಯಾಗುವ ಕಾಲಕ್ಕೆ "ಸಂಧ್ಯಾ" ಎಂದು ಹೆಸರು. ಸಂಧ್ಯಾ ವಂದನೆಯ ಮುಖ್ಯ ಅಂಗ ಸೂರ್ಯನಾರಾಯಣನ ಉಪಾಸನೆ. ಈ ಉಪಾಸನೆಯನ್ನು "ಸಂಧ್ಯಾವಂದನೆ" ಎನ್ನುತ್ತಾರೆ.

ಬ್ರಾಹ್ಮಣರಾಗಿ ಜನಿಸಿದವರೆಲ್ಲರೂ ಸಂಧ್ಯಾವಂದನೆಯನ್ನು ತಪ್ಪದೆ ಮಾಡಲೇಬೇಕು. ಎಂದೋ ಒಂದು ದಿನ ಮಾಡಬೇಕಾದ ಕರ್ಮ ಇದಲ್ಲ ಪ್ರತಿನಿತ್ಯ ಮೂರು ಹೊತ್ತು ಸಂಧ್ಯಾ ವಂದನೆಯನ್ನು ಮಾಡಲೇಬೇಕು. ಇಲ್ಲದಿದ್ದಲ್ಲಿ ಅನರ್ಥವಾಗುವುದು ನಿಶ್ಚಿತ, ಸಂಧ್ಯಾವಂದನೆಯನ್ನು ಪರಿತ್ಯಜಿಸಿ ಆಚರಿಸಿದ ಧರ್ಮಗಳೆಲ್ಲ ವ್ಯರ್ಥ. ಆದ್ದರಿಂದ ಮೊದಲು ಸಂಧ್ಯಾ ವಂದನೆಯನ್ನು ಮಾಡುವ ಅಭ್ಯಾಸವನ್ನು ಮಾಡಿಕೊಳ್ಳಬೇಕು ಅನಂತರ ಅರ್ಥಾನುಸಂಧಾನ ಪೂರ್ವಕವಾಗಿ ಮಾಡಲು ರೂಢಿಸಿಕೊಳ್ಳಬೇಕು.

## ಸಂಧ್ಯಾವಂದನೆಯ ಕಾಲಗಳು :

ಪ್ರಾತಃ ಸಂಧ್ಯಾ
ಮಾಧ್ಯಾಹ್ನಿಕ ಸಂಧ್ಯಾ
ಸಾಯಮ್ ಸಂಧ್ಯಾ

## ಸಂಧ್ಯಾವಂದನೆಯ ಔಚಿತ್ಯ

ವೇದಗಳು ಹೇಳುವಂತೆ "ಸೂರ್ಯ ಆತ್ಮಾ ಜಗತಃ ತಸ್ತುಷಶ್ಚ"ಅಂದರೆ ಸೂರ್ಯನಾರಾಯಣನೆ ಜಗತ್ತಿಗೆ ಮುಖ್ಯ ಸ್ವಾಮಿಯೆಂದು ಹೇಳುತ್ತದೆ. ಅವನ ಉದಯವಾಗದಿದ್ದರೆ ಪ್ರಾಣಿಗಳು ಬದುಕಲಾರವು. ಇಂತಹ ಮಹೋಪಕಾರಿಯಾದ ಸೂರ್ಯನು ಉದಯಿಸುವಾಗ ಅವನ ಪೂಜೆಯನ್ನು ಮಾಡದವರು ಆಹಾರವನ್ನು ಕೊಡುವವನ ಮೇಲೆ ಪ್ರೀತಿಯನ್ನು ವ್ಯಕ್ತಪಡಿಸುವ ಪಶುಪ್ರಾಣಿಗಿಂತಲೂ ಹೀನರಾಗುತ್ತಾರೆ. "ಕೃತಜ್ಞೆ ನಾಸ್ತಿ ನಿಷ್ಕೃತಿ" ಎಂದರೆ ಬ್ರಹ್ಮಹತ್ಯಾದಿ ಪಾಪ ಮಾಡಿದವರು ಪ್ರಾಯಶ್ಚಿತ್ತದಿಂದ ಶುದ್ಧನಾಗಬಹುದು. ಆದರೆ ಕೃತಜ್ಞನಿಗೆ ಯಾವ ಪ್ರಾಯಶ್ಚಿತ್ತವು ಇಲ್ಲ ಎಂದು ಶಾಸ್ತ್ರದಲ್ಲಿ ಹೇಳಿದೆ. ಆದರಿಂದ ತ್ರಿಕಾಲ ಸಂಧ್ಯಾವಂದನೆಯನ್ನು ಮಾಡುವುದು ಅತ್ಯಂತ ಅವಶ್ಯಕ.

ಬಹು ಮುಖ್ಯವಾಗಿ ಈ ಸಂಧ್ಯಾವಂದನೆಯು ಕರ್ಮ, ಭಕ್ತಿ, ಜ್ಞಾನಮಾರ್ಗಗಳ ಸಾರವನ್ನೆಲ್ಲ ಬೀಜರೂಪವಾಗಿ ಒಳಗೊಂಡಿರುವುದು. ಈ ಕರ್ಮಾಚರಣೆಯು ಮನುಷ್ಯನನ್ನು ಪರಿಪೂರ್ಣ ಸಂಸ್ಕಾರಿಯನ್ನಾಗಿ ಮಾಡುವುದು. ನಾವು ಮಾಡುವ ಪ್ರತಿ ಕರ್ಮದಲ್ಲಿಯೂ ದೇವತಾ ಶಕ್ತಿಯ ಗುಣ ಕದನ ಬರುವುದಲ್ಲದೆ ದೇವತಾ ಭಾವನೆಯೊಡನೆ ಕರ್ಮ ಮಾಡಬೇಕಾದ್ದರಿಂದ ಕರ್ಮಕ್ಕೂ ಉಪಾಸನೆಗೂ ನಿಕಟ ಸಂಬಂಧ ಇದ್ದೇ ಇರುತ್ತದೆ. ಆದ್ದರಿಂದ ಇಹಪರಗಳೆರಡಕ್ಕೂ ಸಾಧನವಾದ ಸಂಧ್ಯಾ ಕರ್ಮವನ್ನು ಅವಶ್ಯವಾಗಿ ಆಚರಿಸಬೇಕು.

## ಸಂಧ್ಯಾವಂದನೆಯ ಅಂಗಗಳು:

ಸಂಧ್ಯಾವಂದನೆಯ ಕರ್ತವ್ಯದಲ್ಲಿ ಅನುಸರಿಸ ಬೇಕಾದ ಅಂಗಗಳು ಈ ಕೆಳಕಂಡದಂತಿವೆ,

## ಗೋಪಿಚಂದನ ನಾಮ ಮುದ್ರಾಧಾರಣೆ :

ಅಚಮನಂ, ಪ್ರಾಣಾಯಾಮಂ, ಸಂಕಲ್ಪ, ಮಾರ್ಜನಮ್, ಮಂತ್ರಾಚಮನಮ್, ದ್ವಿತೀಯಮಾರ್ಜನಂ, ಅಘಮರ್ಶನಂ, ಅರ್ಘ್ಯ ಪ್ರದಾನಂ, ಭೂತೋಚ್ಚಾಟನಂ, ಕರನ್ಯಾಸಃ, ಅಂಗ ನ್ಯಾಸಃ, ಆವಾಹನಮ್, ಧ್ಯಾನಮ್, ಗಾಯತ್ರಿಮಂತ್ರ ಜಪಃ, ಕರ ನ್ಯಾಸ, ಅಂಗನ್ಯಾಸ, ಧ್ಯಾನಮ್, ಸಂಧ್ಯೋಪಾಸ್ಥಾನಮ್, ದಿಗ್ನಮಸ್ಕಾರ, ಗಾಯತ್ರ್ಯುದ್ವಾಸನಮ್ ಜಪಸ್ತಲ ಪ್ರೋಕ್ಷಣಂ, ದೇವತಾ ನಮಸ್ಕಾರಃ ಸಂಧ್ಯಾವಂದನೆಯ ಕರ್ಮದಲ್ಲಿ ಅತಿ ಮುಖ್ಯವಾದ ಅಂಗ ಪ್ರಾಣಾಯಾಮ. ಪ್ರತಿಯೊಂದು ಮಂತ್ರಗಳಲ್ಲಿ ಋಷಿ ದೇವತೆಗಳನ್ನು ಸ್ಮರಿಸಿಕೊಳ್ಳುವಾಗ ಪ್ರಧಾನ ಋಷಿಗಳಾದ ಶ್ರೀಹಯಗ್ರೀವ-ಲಕ್ಷ್ಮಿದೇವಿ, ಬ್ರಹ್ಮ-ಸರಸ್ವತಿ, ವಾಯು ಭಾರತಿ, ಗರುಡಸೌಪರ್ಣಿ, ಸೂರ್ಯ-ಸಂಜ್ಞಾ ಮೊದಲಾದ ದೇವತೆಗಳನ್ನು ಸ್ಮರಿಸಿಕೊಳ್ಳಬೇಕು. ಪರಮಾತ್ಮ ಎಲ್ಲ ಮಂತ್ರಗಳಿಗೂ ಪ್ರಧಾನ ದೇವತೆ ಎಂದು ಸ್ಮರಿಸಿಕೊಳ್ಳಬೇಕು. ಈ ಪ್ರಾಣಾಯಾಮದಲ್ಲಿ ಮೂರು ಅಂಗಗಳಿವೆ ರೇಚಕ, ಪೂರಕ



ಮತ್ತು ಕುಂಭಕ.

**ಅರ್ಘ್ಯವನ್ನೇಕೆ ಕೊಡಬೇಕು?**

“ಮಂದೇಹ” ಎಂಬ ಪ್ರಸಿದ್ಧರಾದ ದೈತ್ಯರನ್ನು ಸಂಹರಿಸುವುದಕ್ಕಾಗಿ ಸೂರ್ಯಾರ್ಘ್ಯವನ್ನು ಕೊಡಬೇಕೆಂದು‘ಮಂದೇಹಾನಾಮ್ ವಧಾರ್ಥಾಯ ಪ್ರಕ್ಷಿಪೇದು ಕಾಂಜಲಿಮ್’ ಎಂದು ಹೇಳಲಾಗಿದೆ. ಮಂದೇಹ ಎಂದು ಪ್ರಸಿದ್ಧರಾದ ರಾಕ್ಷಸರು ಅಡ್ಡಿ ಕಾಲದಲ್ಲಿ ಬ್ರಹ್ಮದೇವರನ್ನು ಕುರಿತು ಉಗ್ರವಾದ ತಪಸ್ಸು ಮಾಡಿ ಮೆಚ್ಚಿಸಿದರು. ಬ್ರಹ್ಮನು ಅವರಿಗೆ ವರವನ್ನು ಕರುಣಿಸಿದನು. ಆ ರಾಕ್ಷಸರೂ ಸೂರ್ಯನ ಜೊತೆಯಲ್ಲಿ ಯುದ್ಧವನ್ನು ಯಾವಾಗಲೂ ಮಾಡುತ್ತಿರುವಂತೆ ಬೇಡಿದ್ದರು. ಬ್ರಹ್ಮನ ಈ ವರ ಬಲದಿಂದ ಕೊಬ್ಬಿದ ಆರಾಕ್ಷಸರು ಸೂರ್ಯನು ಉದಯಿಸುತ್ತಿರುವಾಗಲೇ ಸೂರ್ಯನೊಡನೆ ಯುದ್ಧವನ್ನು ಮಾಡಲು ಪ್ರತಿದಿನವು ಆರಂಭಿಸಿ ಸೂರ್ಯಾಸ್ತಮಾನದವರೆಗೂ ದೇಹಬಿಡದೆ ಯುದ್ಧವನ್ನು ಮಾಡುತ್ತಿರುವರು.

**ಗಾಯತ್ರಿಮಂತ್ರ ಜಪದ ಮಹತ್ವ ಮತ್ತು ಅರ್ಥವ್ಯಾಪ್ತಿ**

ಸಂಧ್ಯಾವಂದನೆಯ ಮತ್ತೊಂದು ಮುಖ್ಯ ಅಂಗವೆಂದರೆ ಗಾಯತ್ರಿ ಜಪ. ಸೂರ್ಯನಿಗೆ ಅಭಿಮುಖವಾಗಿಯೇ ಗಾಯತ್ರಿ ಜಪವನ್ನು ಮಾಡಬೇಕು. ಸಹಸ್ರಗಾಯತ್ರಿ ಜಪವನ್ನು ಮಾಡುವುದು ಉತ್ತಮ, ನೂರು ಮಾಡುವುದು ಮಧ್ಯಮ, ಹತ್ತು ಮಾಡುವುದು ಅಧಮ,ಅದಕ್ಕಿಂತ ಕಡಿಮೆ ಜಪವನ್ನು ಮಾಡಬಾರದು. ಗಾಯತ್ರಿ ಮಂತ್ರದ ಮೂರರಷ್ಟು ಅಷ್ಟಾಕ್ಷರ ಮಂತ್ರವನ್ನು ಜಪಿಸಬೇಕು. ಗಾಯತ್ರಿ ಮಂತ್ರವು ಮೂರು ಪದಗಳಿಂದ ಕೂಡಿದೆ. ಈ ಮೂರು ಪದಗಳಿಂದಲೇ ಮೂರು ಮಂತ್ರವನ್ನು ಜಪಿಸಬೇಕು. ಗಾಯತ್ರಿ ಮಂತ್ರವು ಮೂರು ಪದಗಳಿಂದ ಕೂಡಿದೆ. ಈ ಮೂರು ಪದಗಳಿಂದಲೇ ಮೂರು ವೇದಗಳು ಈ ಮೂರು ಪಾದಗಳ ವ್ಯಾಖ್ಯಾನರೂಪವಾಗಿ ಹೊರಟಿವೆ. ಆದ್ದರಿಂದಲೇ ಗಾಯತ್ರಿಗೆ ವೇದಮಾತೆ ಎಂದು ಹೆಸರು. ಈ ಮಂತ್ರೋಚ್ಚಾರಣದಿಂದ ಸಮಸ್ತ ವೇದಗಳನ್ನು ಪಠನ ಮಾಡಿದ ಫಲ ಬರುತ್ತದೆ. ಗಾಯತ್ರಿ ಪ್ರತಿಪಾದ್ಯನು ಸಾಕ್ಷಾತ್ ಶ್ರೀಮನ್ನಾರಾಯಣನೇ. ಈ ಮಂತ್ರವು ಪರಮಾತ್ಮನಿಗೆ ಅನಂತ ಪೂರ್ಣತ್ವವನ್ನು ನಿರ್ದೋಷತ್ವವನ್ನು ಹೇಳುತ್ತದೆ.

**ಗಾಯತ್ರಿ ಮಹಿಮೆ**

ಮೂರು ವೇದಗಳಿಂದ ಕ್ರಮವಾಗಿ ಆಕಾರ, ಉಕಾರ, ಮಕಾರಗಳನ್ನು, ಭೂಃಭುವಃ ಸುವಃ ಎಂಬ ಮೂರು ವ್ಯಾಹೃತಿಗಳನ್ನು“ತತ್ಸವಿತುಃ ವರೇಣ್ಯಮ್‌ಭರ್ಗೋ ದೇವಸ್ಯ ಧೀ ಮಹಿ ಧೀಯೋ ಯೋ ನಃ ಪ್ರಚೋದಯಾತ್” ಎಂಬ ಗಾಯತ್ರಿಯ ಮೂರು ಪದಗಳನ್ನು ಬ್ರಹ್ಮ ದೇವರು ಸಂಗ್ರಹಿಸಿದ್ದಾರೆ.


ಹೀಗೆ ಓಂಕಾರ ವ್ಯಾಹೃತಿಸಹಿತವಾದ ತ್ರಿಪದಾ ಗಾಯತ್ರಿಯು ಸಮಸ್ತ ವೇದಗಳ ಸಾರರೂಪವಾಗಿದೆ. ಹೀಗೆ ಈ ಗಾಯತ್ರಿಗೆ ಪರಮೇಷ್ಠಿ ಪ್ರಜಾಪತಿಯು ಋಷಿಯು,ಇಂತಹ ಗಾಯತ್ರಿಯನ್ನು ಪ್ರಾತಃ,ಸಾಯಂಕಾಲಗಳನ್ನು ಜಪಿಸುವ ವಿಪ್ರನಿಗೆ ವೇದತ್ರಯ ಪಾರಾಯಣದ ಫಲವು ಬರುತ್ತದೆ.

ಪ್ರಾತಃಕಾಲದಲ್ಲಿ ಸಂಧ್ಯಾವಂದನೆಯನ್ನು ಮಾಡದಿದ್ದರೆ ಪ್ರಾಯಶ್ಚಿತ್ತ ಪ್ರಾತಃಕಾಲದಲ್ಲಿ ನಕ್ಷತ್ರಗಳಿರುವಾಗ ಅಜಾಗ್ರತೆಯಿಂದ ಸಂಧ್ಯಾವಂದನೆಯನ್ನು ಮಾಡದವನು ಅಶುದ್ಧನಾಗುವನು ಆ ಅಶುದ್ಧಿಯ ಪರಿಹಾರಕ್ಕಾಗಿ ಪ್ರಾಯಶ್ಚಿತ್ತ ರೂಪವಾಗಿ ನೂರೆಂಟು ಸಲ ಗಾಯತ್ರಿ ಮಂತ್ರವನ್ನು ಜಪಿಸಬೇಕು.

ಪ್ರಾತಃಕಾಲದಲ್ಲಿ ಸೂರ್ಯೋದಯಕ್ಕಿಂತಲೂ ಸಾಯಂಕಾಲದಲ್ಲಿ ಸೂರ್ಯಾಸ್ತಕ್ಕಿಂತಲೂ ಪೂರ್ವದಲ್ಲಿಯೇ ಸಂಧ್ಯಾವಂದನೆಯನ್ನು ಮಾಡದವನು ಸ್ನಾನವನ್ನು ಮಾಡಿ ಮೂರು ಸಲ ಆಚಮನವನ್ನೂ,ಪ್ರಾಣಾಯಾಮವನ್ನು ಮಾಡಿ ನೂರ ಎಂಟು ಸಲ ಗಾಯತ್ರಿ ಜಪವನ್ನು ಮಾಡಬೇಕು.

ಸಂಧ್ಯಾವಂದನೆಯನ್ನು ಮಾಡದವನು ಯಾವಾಗಲೂ ಮೈಲಿಗೆಯಾಗಿರುವವನು ಯಾವ ಕಾರ್ಯವನ್ನು ಮಾಡಲೂ ಅರ್ಹನಲ್ಲ. ಅವನು ಯಾವ ಕಾರ್ಯವನ್ನು ಮಾಡಿದರೂ ಆ ಕರ್ಮದ ಫಲವನ್ನು ಪಡೆಯಲಾರನು.

# ಮಾಘ ಮಾಸದಲ್ಲಿ ಫಲ ದಾನ ವ್ರತ



- ಶ್ರೀಮತಿ. ಡಾ॥ ಸುಮನ ಬದರೀನಾಥ್
- 94820 94855

ಚೈತ್ರಾದಿ ದ್ವಾದಶ ಮಾಸಗಳಲ್ಲಿ ಮಾಘಮಾಸವು ನಾನಾ ವಿಧವಾದ ವ್ರತಗಳ, ದಾನಾದಿಗಳ ಆಚರಣೆಗೆ ಅತ್ಯಂತ ಶ್ರೇಷ್ಠವೂ ಪುಣ್ಯಪ್ರದವೂ ಆದ ಮಾಸವೆಂದು ಪರಿಗಣಿಸಲ್ಪಟ್ಟಿದೆ. ಸ್ಕಾಂದಪುರಾಣ, ಪದ್ಮಪುರಾಣ, ವಾಯುಪುರಾಣ, ಮಾಘ ಮಾಸ ಮಹಾತ್ಮೆ ಮುಂತಾದ ಗ್ರಂಥಗಳಲ್ಲಿ ಈ ವಿಷಯಗಳು ವಿಸ್ತಾರವಾಗಿಯೂ, ವಿಶೇಷವಾಗಿಯೂ ಪ್ರತಿಪಾದಿತಗೊಂಡಿವೆ. ಮಾಘಸ್ನಾನ, ಲಕ್ಷಬತ್ತಿ, ಲಕ್ಷಪುಷ್ಪಾರ್ಚನೆ, ಮುಂತಾದ ವ್ರತಗಳೂ, ಮೊರದ ಬಾಗಿ, ದೀಪದಾನ ಮುಂತಾದ ದಾನಗಳೂ ಮಾಸ ನಿಯಾಮಕರಾದ ಕಮಲಾ ಮಾಧವ ರೂಪಿ ಲಕ್ಷ್ಮೀನಾರಾಯಣರಿಗೆ ಬಹು ಪ್ರಿಯವಾದುದೆಂದು ವರ್ಣಿತಗೊಂಡಿವೆ.

ಅವುಗಳಲ್ಲಿ ಫಲದಾನ ಒಂದು ಅತ್ಯಂತ ಪುಣ್ಯಕರವಾದ, ಶ್ರೇಷ್ಠವಾದ ವ್ರತವೆಂದು ಹೇಳಲ್ಪಟ್ಟಿದೆ.

ಫಲದಾನವೆಂದರೆ ನಾನಾ ವಿಧವಾದ ಹಣ್ಣುಗಳ ದಾನ, ಆಚರಣೆಗೆ ಅತ್ಯಂತ ಸುಲಭವಾದ ವ್ರತವಿದು. ಈ ವ್ರತಾಚರಣೆಯಿಂದ ಸಂತಾನಪ್ರಾಪ್ತಿ, ಆರೋಗ್ಯ ಆಯುಸ್ಸು, ಸಕಲ ವಿಧವಾದ ಸಂಪತ್ತುಗಳು ಲಭಿಸುವುದೆಂದು ಪುರಾಣಗಳು ಮುಕ್ತ ಕಂಠದಿಂದ ಸಾರುತ್ತಿವೆ. ಈ ವ್ರತದ ಆಚರಣೆಗೆ ದೀರ್ಘವಾದ ಇತಿಹಾಸವುಂಟು.

ಫಲದಾನಂ ಮಹಾಕಾಮ್ಯಂ ಪುತ್ರ ಪ್ರಾಪ್ತಿಕರಂ ಪರಂ
ಕೌಸಲ್ಯಾಯೈ ವಸಿಷ್ಠೇನ ಮುನಿನಾ ಪ್ರಾಗುದಾಹೃತಮ್ ॥

(ನಮ್ಮ ಅಪೇಕ್ಷೆಗಳನ್ನೆಲ್ಲಾ ಮತ್ತು ಸಂತಾನವನ್ನು ಕೊಡತಕ್ಕ ಫಲದಾನವು ಅತ್ಯುತ್ತಮವಾದದು. ಕೌಸಲ್ಯೆಯಿಂದ ಪ್ರಾರ್ಥಿತರಾದ ವಸಿಷ್ಠ ಮುನಿಗಳಿಂದ ಈ ದಾನವು ಹೇಳಲ್ಪಟ್ಟಿದೆ)

ಪೂರ್ವದಲ್ಲಿ ಕೌಸಲ್ಯೆಗೆ ಬಹುಕಾಲವಾದರೂ ಸಂತಾನ ಪ್ರಾಪ್ತಿಯಾಗದಿರಲು ಕುಲಗುರುಗಳಾದ ವಸಿಷ್ಠರನ್ನು ಸಂತಾನ ಪ್ರಾಪ್ತಿಗಾಗಿ ವ್ರತವೊಂದನ್ನು ಹೇಳಬೇಕೆಂದು ಪ್ರಾರ್ಥಿಸಿದಳಂತೆ ಕೌಸಲ್ಯೆಯಿಂದ ಪ್ರಾರ್ಥಿತರಾದ ವಸಿಷ್ಠ ಮುನಿಗಳು ಫಲದಾನ ವ್ರತವನ್ನು ಮಾಡಲು ಉಪದೇಶಿಸಿದರಂತೆ. ಈ ವ್ರತವನ್ನಾಚರಿಸಿ ಕೌಸಲ್ಯೆಯು ಶ್ರೀಹರಿಯನ್ನೇ ಪುತ್ರನನ್ನಾಗಿ ಪಡೆದಳಂತೆ (ಸತ್ಸಂತಾನವಾಗುವುದೆಂದು ಭಾವಾರ್ಥ.)

ಈ ವ್ರತವನ್ನಾಚರಿಸುವ ಬಗೆ ಎಂತು? ಅದಕ್ಕೆ ಪುರಾಣಗಳು ತಿಳಿಸುತ್ತವೆ. "ನಾನಾ ಫಲ ಪ್ರದಾನಂ ಪುಣ್ಯಮಾಸೇ ಸಮಾರಭ್ಯಂ ಯಾವದ್ವರ್ಷಂ ಸದಕ್ಷಿಣಮ್".

ಫಲದಾನಕ್ಕೆ ಮಾಘಮಾಸವು ಬಹು ಶ್ರೇಷ್ಠವಾದುದು. ಈ ವ್ರತವನ್ನಾಚರಿಸುವುದಕ್ಕೆ ಕೆಲವು ನಿಯಮಗಳುಂಟು. ಮಾಘ ಮಾಸದ ಶುದ್ಧ ಪ್ರತಿಪದೆಯಂದು (ಪಾಡ್ಯದಂದು) ಶುದ್ಧ ಸ್ನಾತರಾಗಿ, ಮಡಿಬಟ್ಟೆಗಳನ್ನುಟ್ಟು ನಿತ್ಯದೇವತಾರ್ಚನೆಯನ್ನು ಮುಗಿಸಿ ನಂತರ ಶುದ್ಧ ಮನಸ್ಕರಾಗಿ ಪೂರ್ವ ಅಥವಾ ಉತ್ತರಾಭಿಮುಖವಾಗಿ ಕುಳಿತು ಮಾಘಮಾಸದಲ್ಲಿ ಪ್ರಾರಂಭ ಮಾಡಿ ವರ್ಷ ಪೂರ್ತಿ ಫಲದಾನ ಮಾಡುವೆನೆಂದು ಸಂಕಲ್ಪ ಮಾಡಿಕೊಳ್ಳಬೇಕು.

ಆಚಾರ್ಯ ಮುಖೇನವೂ ಸಂಕಲ್ಪ ಮಾಡಿಸಿ ಕೊಳ್ಳಬಹುದು. ನಂತರ ಅಂದಿನಿಂದಲೇ ನಿತ್ಯವೂ ಫಲದಾನಕ್ಕೆ ಪ್ರಾರಂಭಿಸಬೇಕು.

ಬ್ರಾಹ್ಮಣರಿಗೆ, ಸುವಾಸಿನಿಯರಿಗೆ, ವಟುಗಳಿಗೆ ಕುಮಾರಿಯರಿಗೆ ಯಾರಿಗಾದರೂ ದಾನ ಮಾಡಬಹುದು ಬಾಳೆ, ಕಿತ್ತಲೆ,

ಮೂಸಂಬಿದ್ರಾಕ್ಷಿ, ಹಲಸು, ಸೇಬು, ಸೀಬೆ, ಮುಂತಾದ, ಪಕ್ವವಾದ,ಸುವಾಸನಾಭರಿತವಾದ ಹಣ್ಣುಗಳನ್ನು ದಾನ ಮಾಡಬೇಕು. ಹಣ್ಣಾಗದ, ಕೊಳೆತ,ಕೆಟ್ಟ ವಾಸನೆಯಿಂದ ಕೂಡಿದ ಹಣ್ಣುಗಳನ್ನು ದಾನ ಮಾಡಬಾರದು.

ಒಣದ್ರಾಕ್ಷಿ, ಬಾದಾಮಿ, ಖರ್ಜೂರ, ಅಂಜೂರ ಮುಂತಾದ ಒಣ ಹಣ್ಣುಗಳನ್ನು ದಾನ ಮಾಡಬಹುದು.ಆಯಾಯಾ ದೇಶಗಳಲ್ಲಿ ಆಯಾಯಾ ಕಾಲಗಳಲ್ಲಿ ಯಾವ ಯಾವ ಹಣ್ಣುಗಳು ಸಿಗುವವೋ ಅವುಗಳನ್ನು ದಾನ ಮಾಡಬಹುದು. ಹದಿನಾರು,ಐದು, ಅಥವಾ ಯಥಾಶಕ್ತಿ ಸಂಖ್ಯೆಯಲ್ಲಿ ದಾನ ಮಾಡಬಹುದು.ದಕ್ಷಿಣೆ ಸಮೇತ ದಾನ ಮಾಡಬೇಕು. ವ್ರತ, ದಾನಾದಿಗಳ ಆಚರಣೆಯ ಯಥಾಶಕ್ತಿ ಇರಬೇಕು,ಶಕ್ತಿಮೀರಿ ಮಾಡಲು ಹೋಗಬಾರದು.

ಹೀಗೆ ಮಾಘಮಾಸವು ಅತಿಶ್ರೇಷ್ಠವಾದ ಮಾಸವಾಗಿದೆ. ಮಾಘಮಾಸದಲ್ಲಿ ಪ್ರಾರಂಭಿಸಿ ಒಂದು ವರ್ಷ ಮತ್ತೊಂದು ಮಾಘ ಮಾಸವು ಮುಗಿಯುವವರೆಗೂ ಫಲದಾನ ಮಾಡಬಹುದು. ಸಾಧ್ಯವಿಲ್ಲದಿದ್ದರೆ ಕೇವಲ ಮಾಘಮಾಸದಲ್ಲಾದರೂ ಪ್ರತಿನಿತ್ಯ ಫಲದಾನ ಮಾಡಬೇಕು. ಕಡೆಗೆ ಒಂದು ದಿನವಾದರೂ ಮಾಡಬೇಕು.ಹೀಗೆ ನೋಡಿದರೆ ಜೀವನ ಪರ್ಯಂತ ಸಾಧ್ಯವಾದ ಮಟ್ಟಿಗೂ ಮಾಘಮಾಸದಲ್ಲಿ ಫಲದಾನ ಮಾಡಬಹುದು.

ಫಲದಾನ ಮಾಡಲು ಹುಣ್ಣಿಮೆ, ದ್ವಾದಶಿಗಳು ಶ್ರೇಷ್ಠವಾದ ದಿನಗಳಾಗಿವೆ.ಹುಣ್ಣಿಮೆ ಹದಿನಾರು ಸಂಖ್ಯೆಯಲ್ಲಿ, ದ್ವಾದಶಿ ಹನ್ನೆರಡು ಸಂಖ್ಯೆಯಲ್ಲಿ, ಅಧಿಕ ಮಾಸದಲ್ಲಿ ಮೂವತ್ತೂರು ಸಂಖ್ಯೆಯಲ್ಲಿ ಇತರ ದಿನಗಳಲ್ಲಿ ಐದು ಸಂಖ್ಯೆಯಲ್ಲಿ ಅಥವಾ ಒಂದು ಫಲ ದಾನ ಮಾಡಬಹುದು ಅಥವಾ ಐದು ಬಗೆಯ ಹಣ್ಣುಗಳನ್ನು (ಪಂಚಫಲದಾನ) ಎರಡು ಬಗೆಯ, ಒಂದು ಬಗೆಯ ಹಣ್ಣುಗಳನ್ನು ಕೊಡಬಹುದು. ಫಲದಾನ ಮುಖ್ಯವೇ ಹೊರತು ಸಂಖ್ಯೆಯಲ್ಲ.

ಫಲದಾನದ ಮಹಿಮೆ ಮತ್ತು ಅದರಿಂದ ಲಭಿಸುವ ಪುಣ್ಯ ಪ್ರಾಪ್ತಿ ವರ್ಣಿಸಲು ಅಸಾಧ್ಯ. ಇಂತಹ ಉತ್ತಮವಾದ ಸುಲಭ ಸಾಧ್ಯವಾದ, ವ್ರತವನ್ನು ಸರ್ವರೂ ಯಥಾಶಕ್ತಿ ಆಚರಿಸಿ ಪುಣ್ಯ ಭಾಜನರಾಗಲೆಂದೇ ಸದಾಶಯ.

| | | | |
|---|---|---|---|
| 09.02.2024 | ಶುಕ್ರವಾರ | ದಿಕ್ಷಾತಿರುಮಂಜನ | ಸೇನಾಧಿಪತಿಉತ್ಸವ |
| 10.02.2024 | ಶನಿವಾರ | ಧ್ವಜಾರೋಹಣ | ಚಂದ್ರಪ್ರಭವಾಹನ |
| 11.02.2024 | ಭಾನುವಾರ | ಸೂರ್ಯಪ್ರಭವಾಹನ | ದೊಡ್ಡಶೇಷವಾಹನ |
| 12.02.2024 | ಸೋಮವಾರ | ಚಿಕ್ಕಶೇಷವಾಹನ | ಸಿಂಹವಾಹನ |
| 13.02.2024 | ಮಂಗಳವಾರ | ಕಲ್ಪವೃಕ್ಷವಾಹನ | ಹನುಮಂತವಾಹನ |
| 14.02.2024 | ಬುಧವಾರ | ಮುತ್ತಿನಚಪ್ಪರವಾಹನ | ಗರುಡವಾಹನ |
| 15.02.2024 | ಗುರುವಾರ | ಕಲ್ಯಾಣೋತ್ಸವ | ಗಜವಾಹನ |
| 16.02.2024 | ಶುಕ್ರವಾರ | ರಥೋತ್ಸವ | ಧೂಳಿ ಉತ್ಸವ |
| 17.02.2024 | ಶನಿವಾರ | ಸರ್ವಭೂಪಾಲವಾಹನ | ಅಶ್ವವಾಹನ |
| 18.02.2024 | ಭಾನುವಾರ | ವಸಂತೋತ್ಸವ, ಚಕ್ರಸ್ನಾನ | ಧ್ವಜಾವರೋಹಣ ಹಂಸವಾಹನ |



**ದೇವುನಿ ಕಡಪ**
**ಶ್ರೀ ಲಕ್ಷ್ಮೀ ವೆಂಕಟೇಶ್ವರ ಸ್ವಾಮಿಯವರ**
**ಬ್ರಹ್ಮೋತ್ಸವಗಳು**

**ಫೆಬ್ರವರಿ 09 ರಿಂದ 18 ರ ವರೆಗೆ**



39

ಕರ್ನಾಟಕದ ವೈಷ್ಣವ ಕ್ಷೇತ್ರಗಳು

# ಮಿರ್ಲೆಯ ಸುಂದರ ದೇವಾಲಯಗಳು

-ಕೆಂಗೇರಿ ಚಕ್ರಪಾಣಿ
94483 86886



ಮೈಸೂರು ಜಿಲ್ಲೆ ಕೃಷ್ಣರಾಜನಗರ ತಾಲ್ಲೂಕಿನ ಒಂದು ಇತಿಹಾಸ ಪ್ರಸಿದ್ಧ ಗ್ರಾಮ ಮಿರ್ಲೆಯು ಕಾವೇರಿ ನದಿ ತೀರದಲ್ಲಿದೆ. ಮಿರ್ಲೆಯು ಹೊಯ್ಸಳರ ಕಾಲದಲ್ಲಿ ಒಂದು ಪ್ರಮುಖ ಧಾರ್ಮಿಕ ಕ್ಷೇತ್ರ. ವಿಶಿಷ್ಟಾದ್ವೈತ ಧರ್ಮದ ಪ್ರತಿಪಾದಕರಾದ ಶ್ರೀ ರಾಮಾನುಜಾಚಾರ್ಯರು ತಮಿಳುನಾಡಿನಲ್ಲಿ ಚೋಳ ದೊರೆ ಕಲೋತ್ತುಂಗ ಚೋಳನ ಕಿರುಕುಳಕ್ಕೆ ಬೇಸತ್ತು ಹಾಗೂ ಧರ್ಮ ಪ್ರಚಾರಕ್ಕೆ ಕರ್ನಾಟಕದ ಹೊಯ್ಸಳ ನಾಡನ್ನು ಮಿರ್ಲೆ ಸಾಲಿಗ್ರಾಮದ ಮೂಲಕ ಪ್ರವೇಶಿಸುತ್ತಾರೆ. ಆಚಾರ್ಯರು ಶ್ರೀ ಯೋಗನರಸಿಂಹನನ್ನು ಆರಾಧಿಸುತ್ತಿದ್ದರಿಂದ ಅವರು ಸಂಚರಿಸಿದ, ವಾಸವಿದ್ದ ಸ್ಥಳಗಳಲ್ಲೆಲ್ಲಾ ಶ್ರೀಯೋಗಾನರಸಿಂಹನ ದೇವಾಲಯಗಳಿರುವುದನ್ನು ಗಮನಿಸಬಹುದು.

### ಶ್ರೀ ಯೋಗಾನರಸಿಂಹ ದೇವಾಲಯ....

ಮಿರ್ಲೆ ಗ್ರಾಮದ ಹೊರವಲಯದಲ್ಲಿರುವ ಯೋಗಾನರಸಿಂಹ ದೇವಾಲಯವು ಗ್ರಾಮದ ಪ್ರಮುಖ ಆಲಯ.ದೇವಾಲಯವು ಹೊಯ್ಸಳ ಶೈಲಿಯ ಆರಂಭ ಕಾಲದ ಆಲಯವಾಗಿದ್ದು, ಗರ್ಭಗೃಹ, ಅಂತರಾಳ, ನವರಂಗವನ್ನು ಹೊಂದಿದೆ. ದೇವಾಲಯದ ಹೊರಭಿತ್ತಿಯು ನಿರಲಂಕೃತವಾಗಿದ್ದರೂ ಅಲ್ಲಲ್ಲಿ ಕಿರು ದೇವಕೋಷ್ಠಗಳಿವೆ. ದೇವಾಲಯದ ಗರ್ಭಗುಡಿಗೆ ಇತ್ತೀಚಿನ ಶಿಖರವಿದೆ. ದೇವಾಲಯದ ಹೊರ ವಿನ್ಯಾಸವು ಚೋಳ ಶೈಲಿಯನ್ನು ನೆನಪಿಸುತ್ತದೆ. ಈ ದೇವಾಲಯದ ಅಂತರಾಳದ ಬಾಗಿಲುವಾಡವು ಬಹಳ ಸೊಗಸಾಗಿ ಮೂಡಿಬಂದಿದೆ. ಬಾಗಿಲುವಾಡದ ಮಕರ ತೋರಣದಲ್ಲಿ ದೇವಾಲಯದ ಶಿಖರದ ಮಾದರಿಗಳನ್ನು ರಚಿಸಿದ್ದಾರೆ ಇಕ್ಕೆಲಗಳಲ್ಲಿ ವಿಷ್ಣುವಿನ ದ್ವಾರಪಾಲಕರಾದ ಜಯ-ವಿಜಯರ ಅಳೆತ್ತರದ ಶಿಲ್ಪಗಳಿವೆ.

ಶ್ರೀ ಯೋಗಾನರಸಿಂಹ ದೇವಾಲಯದ ಗರ್ಭಗುಡಿಯಲ್ಲಿರುವ ಶ್ರೀ ಯೋಗಾನರಸಿಂಹ ಸ್ವಾಮಿಯು ಹೊಯ್ಸಳರ ಕಾಲದ ಸುಂದರ ಕಲಾಕೃತಿ. ಸುಮಾರು ಐದು ಅಡಿ ಎತ್ತರವಿರುವ ನರ ಸಿಂಹನು ಪದ್ಮಪೀಠದ ಮೇಲೆ ಶಂಖ-ಚಕ್ರಧಾರಿಯಾಗಿ ಆಸೀನನಾಗಿರುವವನು. ನರಸಿಂಹನು ಯೋಗಪಟ್ಟಿ ಹಾಕಿಕೊಂಡು ಕುಳಿತಿದ್ದು, ಅತೀ ಸೂಕ್ಷ್ಮ ಕೆತ್ತನೆಗಳ ಅಲಂಕಾರವನ್ನು ಹೊಂದಿರುವನು. ಕಿರೀಟ ಮಕುಟವನ್ನು ಧರಿಸಿರುವ ಸ್ವಾಮಿಯು ಅಲಂಕೃತ ಪ್ರಭಾವಳಿಯ ಕೆಳಗೆ ಆಸೀನನಾಗಿರುವನು. ಪ್ರಭಾವಳಿಯು ಮೂರು ಹಂತವನ್ನು ಹೊಂದಿದ್ದು ಪದ್ಮ-ವಜ್ರ, ಶಾಖೆ, ಲತಾಶಾಖೆ ಮತ್ತು ಮೇಲಿನ ಹಂತದಲ್ಲಿ ವಿಷ್ಣುವಿನ ದಶಾವತಾರದ ಸಾಲು ಇದೆ.ಇವುಗಳು ಬಹಳ ಕಲಾತ್ಮಕವಾಗಿ ಮೂಡಿ ಬಂದಿವೆ. ದೇವನ ಮುಖಾರವಿಂದವು ಬಹಳ ಸುಂದರವಾಗಿದೆ. ದೇವನು ಹಣೆಗಣ್ಣನ್ನು ಹೊಂದಿದ್ದು. ಅಗಲಕಿವಿ, ಕೋರೆದಾಡೆ,ಸೂಕ್ಷ್ಮಕೆತ್ತನೆಗಳ ಕಿರೀಟ ಅದರ ಹಿಂದಿನ ಪ್ರಭಾಚಕ್ರ, ಕತ್ತಿನ ಸುತ್ತಲು ಹರಡಿರುವ ಕೇಸರ ಬಹಳ ಆಕರ್ಷಕವಾಗಿವೆ. ಯೋಗಾನರಸಿಂಹನ ಇಕ್ಕೆಲಗಳಲ್ಲಿ ಆತನ ಪತ್ನಿಯರಾದ ಶ್ರೀದೇವಿ ಭೂದೇವಿಯರಿರುವರು. ಹೀಗಾಗಿ ಮಿರ್ಲೆಯ ಯೋಗಾನರಸಿಂಹನು ಯೋಗಭೋಗ ನರಸಿಂಹನೆನಿಸಿಕೊಳ್ಳುವನು. ಆಚಾರ್ಯ ರಾಮಾನುಜರಿಂದ ಅರ್ಚಿತವಾದ ಯೋಗನರಸಿಂಹ





ದೇವಾಲಯವು ಪ್ರಚಾರದ ಕೊರತೆಯಿಂದ ಹೆಚ್ಚಾಗಿ ಬೆಳಕಿಗೆ ಬಂದಿಲ್ಲವೆಂದೇ ಹೇಳಬೇಕು. ದೇವಾಲಯದ ಕಾಲವನ್ನು 12 ನೆಯ ಶತಮಾನದ ಮೊದಲ ಭಾಗಕ್ಕೆ ಸೇರಿಸಬಹುದು.

## ಶ್ರೀ ಕೋದಂಡರಾಮ ದೇವಾಲಯ

ವೈಷ್ಣವ ಕ್ಷೇತ್ರವಾದ ಮಿರ್ಲೆಯಲ್ಲಿ ಗ್ರಾಮದ ನಡುವೆ ಕೋದಂಡರಾಮ ದೇವಾಲಯವಿದೆ. ಇಲ್ಲಿರುವ ಗರ್ಭಗುಡಿಯಲ್ಲಿ ಶ್ರೀ ಸೀತಾರಾಮಲಕ್ಷ್ಮಣರ ಸುಂದರ ಮೂರ್ತಿಗಳಿವೆ.ಇವುಗಳು ಬಹುತೇಕ ಚುಂಚನಕಟ್ಟೆಯ ಮೂರ್ತಿಗಳನ್ನು ಹೋಲುತ್ತವೆ.ಇಲ್ಲಿಯೂ ಸೀತಾಮಾತೆಯು ಶ್ರೀರಾಮಚಂದ್ರನ ಬಲಭಾಗದಲ್ಲಿದ್ದಾಳೆ. ಶ್ರೀರಾಮಲಕ್ಷ್ಮಣರು ಧನುರ್ಧಾರಿಗಳಾಗಿದ್ದು. ರಾಮನ ಬಲಬದಿಯಲ್ಲಿ ನೀಲೋತ್ಪಲ ಪುಷ್ಪವನ್ನು ಹಿಡಿದಿರುವ ಸೀತಾಮಾತೆಯಿರುವಳು. ಸೀತಾಮಾತೆಯ ಸೀರೆಯ ನೆರಿಗೆಗಳನ್ನು ಬಹಳ ಅಂದವಾಗಿ ಮೂಡಿಸಲಾಗಿದೆ. ವಿಜಯನಗರದರಸರ ಕಾಲಕ್ಕೆ ಸೇರಿಸಬಹುದಾದ ಈ ದೇವಾಲಯದಲ್ಲಿ ಅಂಜಲೀಬದ್ಧನಾಗಿ ಪ್ರಣಾಮ ಭಂಗಿಯಲ್ಲಿರುವ ಹನುಮನ ಮೂರ್ತಿ ಬಹಳ ಕಲಾತ್ಮಕವಾಗಿದೆ.ಶ್ರೀರಾಮನವಮಿಯಂದು ಮಿರ್ಲೆಯ ರಾಮಸ್ವಾಮಿಗೆ ಸೇವೆಗಳು ಜರುಗುತ್ತವೆ.

ಮಿರ್ಲೆಯ ಸ್ಥಳ ಪುರಾಣದ ಪ್ರಕಾರ ತ್ರೇತಾಯುಗದಲ್ಲಿ ಶ್ರೀರಾಮಚಂದ್ರನು ಸೀತಾಮಾತೆಯೊಡನೆ ಮಿರ್ಲೆಗೆ ಬಂದಿದ್ದನಂತೆ. ಕಾವೇರಿ ತೀರದ ಇಲ್ಲಿಯ ವಾತಾವರಣವನ್ನು ನೋಡಿ ಸೀತಾದೇವಿಗೆ ತನ್ನ ತವರು ನೆನಪಾಯಿತಂತೆ. ಆಗ ಶ್ರೀರಾಮನು ತನ್ನ ಪತ್ನಿಗೆ ನೀನಿರುವ ಸ್ಥಳವೇ ನಿನ್ನ ತವರು ಮಿಥಿಲೆಯೆಂದು ಸಮಾಧಾನಪಡಿಸಿದನೆಂದು, ಕಾಲಕ್ರಮೇಣ ಮಿಥಿಲೆ ಜನರ ಬಾಯಲ್ಲಿ ಮಿರಲೆ ಎಂದು ಕರೆದಿದ್ದು, ಶಾಸನದಲ್ಲಿ ಊರನ್ನು ತೆಂಕಣ ಐಹೊಳೆ ಎಂದಿದೆ. ಬಾಗಲಕೋಟೆ ಜಿಲ್ಲೆ, ಬಾದಾಮಿ ತಾಲ್ಲೂಕಿನ ಐಹೊಳೆಯ ಪ್ರಾಚೀನ ಕರ್ನಾಟಕದ ಪ್ರಸಿದ್ಧ ವ್ಯಾಪಾರಿ ಕೇಂದ್ರ. ಅದೇ ರೀತಿ ಮಿರ್ಲೆಯು ದಕ್ಷಿಣ ಐಹೊಳೆ ಎಂದು ಪ್ರಖ್ಯಾತವಾಗಿತ್ತು.ಇದೇ ಶಾಸನದಲ್ಲಿ ಮಿರ್ಲೆಯು ನರಸಿಂಹ ದೇವರಿಗೆ ಹೆಬ್ಬಳಲು ವೈಷ್ಣವದಾಸನ ಪುತ್ರ ತಿರುವಾನಂದ ಪುರದಾಸನು ದೇವರ ನಿತ್ಯನೈವೇದ್ಯಕ್ಕೆ ಭೂದಾನವನ್ನು ನೀಡಿರುವ ಉಲ್ಲೇಖವಿದೆ.

ಕ್ರಿ.ಶ 1399 ರ ಶಾಸನದಲ್ಲಿ ತೆಂಕಣ ಐಹೊಳೆ ಎನಿಸುವ ಮಿರ್ಲೆಯ ನರಸಿಂಹ ದೇವರಿಗೆ ಮಹಾಪ್ರಧಾನಿ ಸತ್ರಾಧಿಕಾರಿಬಲ್ಲಯ ದಂಡನಾಯಕನ ಆಪ್ತಮನುಷ್ಯ ಪೂವಂದನು ದೇವರ ನಂದಾದೀವಿಗೆ ದತ್ತಿ ನೀಡಿರುವನು.

ಮಿರ್ಲೆಯಲ್ಲಿ ದೊರೆತಿರುವ ಹದಿನೈದನೆಯ ಶತಮಾನದ ಶಾಸನದಲ್ಲಿ ಶೃಂಗೇರಿಯ ಶ್ರೀ ಆದಿ ಶಂಕರಾಚಾರ್ಯ ಗುರುಪರಂಪರೆಯ ಬಗ್ಗೆ ಪುರಾತನ ದಾಖಲೆ ದೊರೆಯುತ್ತದೆ. ಆಗಿನ ಜಗದ್ಗುರು ಶ್ರೀಮತ್ಪರಮಹಂಸ ಪರಿವ್ರಾಜಕಾ ಚಾರ್ಯ ಶೃಂಗೇರಿಯ ನಾರಸಿಂಹ ಭಾರತೀ ಸ್ವಾಮಿಗಳ ಶಿಷ್ಯರಾದ ಭಾರತೀಪುರದ ಚಿಕ್ಕ ದೀಕ್ಷಿತರಿಗೆ ಹಂಪಾಪುರದ ಮಹಾರಾಜರು ಭೂಮಿಯನ್ನು ಮಾರಿದ್ದಾರೆ. ಜಗದ್ಗುರುಗಳ ಧರ್ಮ ನಿಮಿತ್ತವಾಗಿ ಮಿರ್ಲೆಯಲ್ಲಿ ಛತ್ರವನ್ನು ಮಾಡಿಸಿ,ನಿತ್ಯವೂ ಬ್ರಾಹ್ಮಣ ಭೋಜನಕ್ಕಾಗಿ ವ್ಯವಸ್ಥೆ ಮಾಡಿದ ದಾಖಲೆಯಿದೆ.ಶಾಸನವನ್ನು ಪತ್ರದ ಮೇಲೆ ಹಂಪಾಪುರದ ಲಕ್ಷ್ಮೀನಾಥದೇವರ ಮುಂದೆ ಬರೆಸಿ, ಶಿಲಾಶಾಸನವನ್ನು ನಾರಸಿಂಹ ದೇವಾಲಯದ ಮುಂದೆ ನೆಟ್ಟಿದ್ದಾಗಿ ಶಾಸನದಲ್ಲಿ ತಿಳಿಸಿದೆ.

## ಮಿರ್ಲೆಯ ಗ್ರಾಮದೇವತೆ ಹುಣಸಮ್ಮನ ದೇವಾಲಯ

ಮಿರ್ಲೆಯ ಕಾವೇರಿ ನದಿ ತೀರದಲ್ಲಿರುವ ಗ್ರಾಮದೇವತೆ ಹುಣಸಮ್ಮನ ಗುಡಿಯು ಮೈಸೂರು ಜಿಲ್ಲೆಯಲ್ಲಿ ಬಹು ಪ್ರಸಿದ್ಧ ಶಕ್ತಿ ದೇವತೆಯ ಆಲಯ. ದೇವಿಯು ಒಂದು ಹುಣಸೆಯ ಮರದ ಕೆಳಗೆ ನೆಲಸಿರುವುದರಿಂದ ಹುಣಸಮ್ಮ ಎಂದು ಕರೆಯಲಾಗಿದೆ. ದೇವಿಯು ನಿರಾಕಾರವಾಗಿರುವ ಸಾಲಿಗ್ರಾಮ ಶಿಲೆಯಾಗಿದೆ.


ಇಲ್ಲಿಯ ಸುತ್ತಮುತ್ತಲಿನ ಎಂಟು ಗ್ರಾಮಗಳಿಗೆ ಅಧಿದೇವತೆ ಮಿರ್ಲೆಯ ಹುಣಸಮ್ಮ. ದೇವಿಗೆ ಪ್ರತಿ ಶುಕ್ರವಾರ ಮತ್ತು ಮಂಗಳವಾರ ವಿಶೇಷ ಸೇವೆಗಳು ಜರುಗುತ್ತವೆ. ಮಿರ್ಲೆಯ ಹುಣಸಮ್ಮನ ವಾರ್ಷಿಕ ಜಾತ್ರೆಯು ಶಿವರಾತ್ರಿ ಹಬ್ಬದ ನಂತರ ಬರುವ ಶುಕ್ರವಾರದ ದಿನ ಜರುಗುತ್ತದೆ. ಜಾತ್ರೆಗೆ ಮೇಲೆ ತಿಳಿಸಿದ ಎಂಟು ಗ್ರಾಮಗಳಲ್ಲಿರುವ ಗ್ರಾಮದೇವತೆಗಳು ಇಲ್ಲಿಗೆ ಆಗಮಿಸಿ, ಅದ್ದೂರಿಯ ಜಾತ್ರೆ ನಡೆಯುತ್ತದೆ. ದೇವಿಗೆ ಸಾತ್ವಿಕ ಪೂಜೆಯು ನಡೆಯುವುದು ಗಮನಾರ್ಹ ಅಂಶವಾಗಿರುವುದು. ಮಿರ್ಲೆಯಲ್ಲಿ ಕೇಶವ ದೇವಾಲಯ, ಅಮೃತೇಶ್ವರ,ವಿರೂಪಾಕ್ಷೇಶ್ವರ ಮುಂತಾದ ದೇವಾಲಯಗಳು ಇವೆ.

## ಹೀಗೆ ಬನ್ನಿ :

ಮೈಸೂರು ಜಿಲ್ಲೆ, ಕೃಷ್ಣರಾಜನಗರ ತಾಲ್ಲೂಕು ಮಿರ್ಲೆಯು ತಾಲ್ಲೂಕು ಕೇಂದ್ರದಿಂದ ಸುಮಾರು ಹದಿನಾಲ್ಕು ಕಿ.ಮೀ.ದೂರದಲ್ಲಿದೆ.ಕೆ.ಆರ್.ನಗರ-ಹಂಪಾಪುರ-ಮಂಚನಹಳ್ಳಿಯಲ್ಲಿ ಎಡಕ್ಕೆ ತಿರುಗಿ ಬಾಲೂರು-ಬೀಚನಹಳ್ಳಿ ಮೂಲಕ ಮಿರ್ಲೆಯನ್ನು ತಲುಪಬಹುದು. ಪ್ರಸಿದ್ಧ ಶ್ರೀರಾಮ ಕ್ಷೇತ್ರ ಚುಂಚನ ಕಟ್ಟೆಯಿಂದ ಮಿರ್ಲೆಯು ಸುಮಾರು ಏಳು ಕಿ.ಮೀ. ದೂರದಲಿದ್ದು ಮಾಳನಾಯಕನ ಹಳ್ಳಿಯ ಮೂಲಕ ಮಿರ್ಲೆಯನ್ನು ತಲುಪಬಹುದು.

# ಪುರಂದರದಾಸರೂ ಮತ್ತು ಮುಕ್ತಿ ಮಾರ್ಗ

- ಜೆ.ವಿ. ಪ್ರಭಾಕರ್ ರಾವ್
93413 69098




ದೇವರು ಸುಗುಣನೋ ನಿರ್ಗುಣನೋ? ಸಾಕಾರನೋ ನಿರಾಕರನೋ? ಎಂಬ ಮಹಾ ಜಟಿಲವಾದ ಪ್ರಶ್ನೆ ಸೃಷ್ಟಿಯ ಆದಿಯಿಂದ ತೊಡಗಿ ಅಂತ್ಯದವರೆಗೂ ಕೇಳಿಸುತ್ತಲೇ ಇದೆ. ಆದರೆ ಅದರ ನಿಷ್ಕರ್ಷ ಮಾತ್ರ ಈವರೆಗೆ ಆಗಿಯೂ ಇಲ್ಲ, ಇನ್ನು ಮುಂದೆ ಆಗುವಂತೆಯೂ ಇಲ್ಲ. ಆದ ಕಾರಣ ಆ ಕುರಿತು ಉದ್ದವಾಗಿ ಪ್ರಸ್ತಾಪಿಸದೆ ಚಿಕ್ಕದಾಗಿ ಹೇಳುವುದಾದರೆ, ವಿಚಾರಕ್ಕೆ ತೋರುವ ಮಟ್ಟಿಗೆ ಸಗುಣವೂ ಸಾಕಾರವೂ ಆದ ಸೃಷ್ಟಿಯನ್ನು ಉತ್ಪಾದಿಸುವಲ್ಲಿ ದೇವರು ವೈಯಕ್ತಿಕನಾಗುತ್ತಾನೆ.

ಅಂದರೆ ಸಗುಣನೂ ಸಾಕಾರನೂ ಆಗುತ್ತಾನೆ. ಅದನ್ನು ತುಲಸೀದಾಸನ (ರಾಮಾಯಣದ) ಮಾತುಗಳಲ್ಲಿ ಹೇಳುವುದಾದರೆ -

ಸಗುನಹಿಂ ಅಹುನಹಿಂ ನಹಿಂ ಕಛು ಭೇದಾ।
ಗಾನಹಿಂ ಮುನಿಪುರಾನ ಬುಧ ವೇದಾ।
ಅಗುನ ಅರೂಪ ಅಲಖ ಅಜ ಜೋ ಈ।
ಭಗತ ಪ್ರೇಮ ಬಸ ಸಗುನ ಸೊ ಹೋ ಈ।
ಜೋ ಗುನರಹಿತ ಸಗುನ ಸೊ ಇ ಕೈ ಸೇ।
ಜಲು ಹಿಮ ಉಪಲ ಬಿಲಗ ನಹಿಂ ಜೈ ಸೇ॥

ಅಂದರೆ ದೇವರ ಸಗುಣತೆಗೂ ನಿರ್ಗುಣತೆಗೂ ಏನೂ ಭೇದವಿಲ್ಲವೆಂದು ಮುನಿಗಳೂ ಪ್ರಾಚೀನ ವಿದ್ವಾಂಸರೂ ವೇದಗಳೂ ಹೇಳುತ್ತವೆ; ಯಾವುದು ನಿರ್ಗುಣನೂ ನಿರಾಕಾರವೂ ಅಚಿಂತನಯವೂ ಅನಾದಯೂ ಆಗಿದೆಯೋ, ಅದೇ ತತ್ತ್ವ ಭಕ್ತರ ಪ್ರೇಮಕ್ಕೆ ಈಡಾಗಿ ಸುಣವಾಗುತ್ತದೆ, ಹೇಗೆಂದರೆ ನೀರೂ ಮಂಜಿನಗಡ್ಡೆಯೂ ಏನೂ ಭೇದವಿಲ್ಲದೆ ಒಂದೇ ಆಗಿರುವಂತೆ, ಆ ಸಗುಣನಾದ ಪರಮಾತ್ಮನ ಉಪಾಸನೆಯೇ ಭಕ್ತಿ ಮಾರ್ಗ ಎನಿಸುತ್ತದೆ.

ಭಕ್ತಿ ಮಾರ್ಗವೂ ಗೀತೆಗೂ ಎಷ್ಟೋ ಹಿಂದಿನಿಂದ, ಪ್ರಾಯಶಃ ವೇದಕಾಲದಿಂದಲೋ ಏನೋ, ನಮ್ಮ ಭರತ ಖಂಡದಲ್ಲಿ ವ್ಯಾಪಿಸಿ ಇದ್ದಿತಾದರೂ, ಕರ್ನಾಟಕದಲ್ಲಿ ಅದು ದೃಢವಾಗಿ ಬೇರನ್ನು ಊರಿಕೊಂಡು ಸಾಹಿತ್ಯರೂಪದಿಂದ ಸರ್ವತ್ರ ಹಬ್ಬಿಕೊಂಡಿದಾದರೆ, ಪರಮಾತ್ಮನೂ ಜೀವಾತ್ಮನೂ ಬೇರೆ ಬೇರೆ, ಆತ ಏವ ಜೀವಾತ್ಮನೂ ಪರಮಾತ್ಮನನ್ನು ಭಕ್ತಿಯಿಂದ ಒಲಿಸಿಕೊಳ್ಳಬೇಕು ಎಂಬ ದ್ವೈತ ಸಿದ್ಧಾಂತವನ್ನು ಶ್ರೀಮನ್ಮಧ್ವಾಚಾರ್ಯರು (ಕ್ರಿ.ಶ. 1238-1318) ಪ್ರತಿಪಾದಿಸಿದಂದಿನಿಂದ, ಆ ತತ್ತ್ವದ ಸ್ಫೂರ್ತಿಯಿಂದಲೆ ಕನ್ನಡ ನಾಡಿನಲ್ಲಿ ಹರಿದಾಸರ ಕೂಟ ಹುಟ್ಟಿತು. ಹೆಚ್ಚು ಕಡಿಮೆ ಆಚಾರ್ಯರ ಕಾಲದಿಂದಲೇ ಅದು ಬೆಳೆದು ನಾಡೆಲ್ಲಾ ಹಬ್ಬಿತು. ಹರಿದಾಸರಲ್ಲಿ ಸರ್ವಶ್ರೇಷ್ಠರೆಂದರೆ ಶ್ರೀಪುರಂದರ ದಾಸರು.

ಅವರು ಉಡುಪಿಯ ಅಷ್ಟ ಮಠಗಳಲ್ಲಿ ಸೋದೆ ಮಠದ ಶ್ರೀವಾದಿರಾಜ ಸ್ವಾಮಿಯವರ (ಕ್ರಿ.ಶ. 1480-1601) ಸಮಕಾಲೀನರು ಪುರಂದರದಾಸರನ್ನು ನಾರದನ ಅವತಾರವೆಂದು ನಂಬುತ್ತಾರೆ.

ಅವರು ಶಾಲೀವಾಹನ ಶಕದ 1402 ನೇಯ ವರ್ಷದಲ್ಲಿ ಅಂದರೆ ಕ್ರಿ.ಶ.1480 ನೇಯ ಇಸವಿಯ ಶಾರ್ವರಿ ಸಂವತ್ಸರದಲ್ಲಿ ಪಂಢರಪುರದ ಬಳಿಯ ಪುರಂದರಗಡ ಎಂಬಲ್ಲೇನೋ ವರದಪ್ಪ ನಾಯಕನೆಂಬ ಸ್ಮಾರ್ತ ದೇಶಸ್ತ ಬ್ರಾಹ್ಮಣನ ಮಗನಾಗಿ ಜನಿಸಿದರಂತೆ. ಅವರ ತೊಟ್ಟಿಲ ಹೆಸರು ಕೃಷ್ಣಪ್ಪ ನಾಯಕನಂತೆ. ಅವರು ವೃತ್ತಿಯಲ್ಲಿ ಶ್ರೀಮಂತನಾದ ಚಿನಿವಾರನಂತೆ. ಗುಣದಲ್ಲಿ ಮಹಾಜಿಪುಣನಂತೆ ಎಂದೋ ಒಮ್ಮೆ ಅವರ ಪೂರ್ವ ಜನ್ಮಗಳ ಸುಕೃತದಿಂದ ಜೀವನದಲ್ಲಿ ಅದ್ಭುತವಾದುದೊಂದು ಪರಿವರ್ತನವಾಯಿತಂತೆ. ಆ ಕಥೆ ಹೀಗಿದೆ :

ಒಮ್ಮೆ ಇವರನ್ನು ಪರೀಕ್ಷಿಸಲೋಸುಗ ಶ್ರೀಕೃಷ್ಣನೂ ಒಬ್ಬ ಬ್ರಾಹ್ಮಣನಾಗಿ ಅವರ ಮಳಿಗೆಗೆ ದಿನಂಪ್ರತಿ ಆರು ತಿಂಗಳವರೆಗೆ ಬಂದು, ತನ್ನ ಮಗನಿಗೆ ಮುಂಜಿ,ಏನಾದರೂ ದೇಶಾವರಕೊಂಡಿರೆಂದು ಬೇಡುತ್ತಲಿದ್ದರೆ. 'ನಾಳೆ ನೋಡೋಣ, ನಾಳೆ ನೋಡೋಣ' ಎಂದು ಆತನ ಯಾಚನೆ ಯನ್ನು ಇವರು ಒಂದೊಂದೆ ದಿನಕ್ಕೆ ಮುಂದೆ ತಳ್ಳುತ್ತಲ್ಲಿದ್ದರು. ಕೊನೆಗೆ ಈ ಬಗೆಯ ಹುಡುಗಾಟಕ್ಕೆ ಶ್ರೀಕೃಷ್ಣನು ಬೇಸತ್ತು,

ನಾಯಕನ ಮನೆಗೆ ಹೋಗಿ ಆತನ ಹೆಂಡತಿಯಲ್ಲಿ ಅದೇ ಯಾಚನೆಯನ್ನು ಮಾಡುತ್ತಲೇ,ಒಂದು ಬಿಡಿಗಾಸು ತನ್ನೊಂದಿಗೆ ಇದ್ದಿಲ್ಲದ ಆ ದಯಾವಂತೆ, ಆತನ ಕಡು ಒಡ ತನಕ್ಕೂ ಅಂಗಲಾಚಿಕೆಗೂ ಮನಮರುಗಿ ತನ್ನ ಮೂಗಿ ನಲ್ಲಿದ್ದ ನತ್ತನ್ನು ಕಳಚಿ ಆತನಿಗೆ ಕೊಟ್ಟಳಂತೆ. ಅದನ್ನು ಎತ್ತಿ ಕೊಂಡು ಬ್ರಾಹ್ಮಣನು ನೆಟ್ಟಗೆ ಕೃಷ್ಣಪ್ಪ ನಾಯಕನ ಅಂಗಡಿಗೆ ಹೋಗಿ "ಇಗೋ ಇದನ್ನು ಇರಿಸಿಕೊಂಡಾದರೂ ನನಗೆ ಹಣ ವನ್ನು ಕೊಡುವಿರಾ?'' ಎಂದು ಆತನೊಡನೆ ಕೇಳಿದನು.

ಹಾಗೇ ಅದು ತನ್ನ ಹೆಂಡತಿಯ ನತ್ತೆಂದು ಅದನ್ನು ಗುರುತಿಸಿಕೊಂಡ ಆ ನಾಯಕನೂ ಅವನನ್ನು ಅಂಗಡಿ ಯಲ್ಲಿರಿಸಿ ತಾನು ಬೇಗ ಮನೆಗೆ ಬಂದನೆಂದು ಆ ನತ್ತನ್ನು ಅಂಗಿಯ ಚೀಲದಲ್ಲಿ ಇಕ್ಕಿ ನೆಟ್ಟಗೆ ಮನೆಗೆ ಹೋದರೆ ನೋಡ ಲೇನು? ಆಕೆಯ ಮೂಗಿನಲ್ಲಿ ನತ್ತಿಲ್ಲ; ಎಲ್ಲಿದೆ? ಎಂದರೆ ಆಕೆ ಅಲ್ಲಿದೆ.ಇಲ್ಲಿದೆ ಎಂದು ನೆವ ಹೇಳಿ ಹುಡುಕಾಡುತ್ತಿದ್ದರೆ, ನತ್ತನ್ನು ತೋರಿಸದೇ ಅಲ್ಲಿಂದ ಮೆಟ್ಟು ಮಿಸುಕನೆಂದು ಆತನು ಕಡಾಸನ ಹಾಕಿ ಕೂತನಂತೆ.

ಇನ್ನಾದರೆ ತನ್ನ ಜೀವಕ್ಕೆ ಬಂತೆಂದು ಆಕೆ ತತ್ತರಿಸಿ, ಬೇರೆ ಹಂಚಿಕೆ ತೋರದೆ, ವಿಷವನ್ನು ಅರೆದು ಬಟ್ಟಲಲ್ಲಿ ಎರೆದು ಕುಡಿಯಲಿಕ್ಕೆ ಎತ್ತಿಕೊಂಡಾಗ ಆ ನತ್ತು ಆ ವಿಷದಲ್ಲಿ ತೇಲುತ್ತಿರುವುದನ್ನು ಕಂಡು,ಅದನ್ನು ಸಂತೋಷದಿಂದ ತಂದು ತನ್ನ ಗಂಡನಿಗೆ ಕೊಟ್ಟಳಂತೆ.

ಆಗ್ಗೆ ಆತನು ತನ್ನ ಅಂಗಿಯ ಚೀಲದಲ್ಲಿ ತಯ್ಯಿ ಕ್ಕಿದರೆ, ನತ್ತು ಅಲ್ಲಿ ಇಲ್ಲವಾಯಿತೋ? ಅಥವಾ ಅಲ್ಲಿಯೂ ಒಂದು ಇಲ್ಲಿಯೂ ಒಂದು ಹೀಗೆ ಎರಡು ನತ್ತುಗಳು ಇದ್ದವೋ?ಎಂದು ನೇರಾಗಿ ನನ್ನ ನೆನಪಿಗೆ ಬಾರದು. ಹೇಗೂ ಆ ನತ್ತನ್ನು ಕೊಂಡು ಆತನು ಮಳಿಗೆಗೆ ಬಂದರೆ ಅಲ್ಲಿ ಆ ಬ್ರಾಹ್ಮಣನಿಲ್ಲ.

ಒಡನೆಯೇ ಕೃಷ್ಣಪ್ಪ ನಾಯಕರಿಗೆ ಜ್ಞಾನೋದಯವಾಗಿ,ತನ್ನನ್ನು ಬೇಡಿ ಬಂದವನು ಸಾಕ್ಷಾತ್ ದೇವರು ತಾನೆ ಎಂಬ ತಿಳುವಳಿಕೆಯುಂಟಾಗಿ, ಆತನು ಹೆಗಲಿಗೆ ಜೋಳಿಗೆಯನ್ನು ಸುತ್ತಿಸಿಕೊಂಡು ಹಾದಿಯಲ್ಲಿ ಭಿಕ್ಷೆ ಬೇಡುತ್ತಾ, ಪ್ರಹ್ಲಾದನ ಅವತಾರವೆನಿಸುತ್ತಿದ್ದ ಮೈಸೂರು ಸೀಮೆಯ ಸೋಸಲೆಯ ವ್ಯಾಸರಾಯರ ಮಠದ ಸ್ವಾಮಿಗಳಾಗಿದ್ದ ಹಾಗೂ ದಾಸಕೂಟದ ಒಂದು ಉಜ್ವಲವಾದ ರತ್ನದಂತಿದ್ದ ಶ್ರೀವ್ಯಾಸರಾಯ ಸ್ವಾಮಿಗಳಿಗೆ (ಕ್ರಿ.ಶ. 1447 - 1540) ಹೋಗಿ, ಅವರ ಶಿಷ್ಯನಾಗಿ, ಅಲ್ಲಿಂದ ಮುಂದೆ ಪುರಂದರದಾಸ ಎಂದಾಗಿ, ಸಮಗ್ರ ದಕ್ಷಿಣ ಭಾರತದಲ್ಲಿಯ ತೀರ್ಥ ಕ್ಷೇತ್ರಗಳನ್ನೆಲ್ಲಾ ಸುತ್ತಾಡಿ ಆಗ್ಗೆ ಉಡುಪಿಗೂ ಬಂದು ಶ್ರೀ ಕೃಷ್ಣನ ದರ್ಶನವನ್ನು ಮಾಡಿ, ಶ್ರೀವಾದಿರಾಜ ಸ್ವಾಮಿಗಳ ಜೊತೆಯಲ್ಲಿ ಕೆಲ ಕಾಲವನ್ನು ಅಲ್ಲಿ ಕಳೆದು 4 3/4 ಲಕ್ಷ ಶ್ಲೋಕಗಳನ್ನು ರಚಿಸಿ, ಕೊನೆಗೆ ಶಾ.ಶ 1486 ನೆಯ ರಕ್ತಾಕ್ಷಿ ಸಂವತ್ಸರದ ಪುಷ್ಯಬಹುಳ ಅಮಾವಾಸ್ಯೆ, ಅಂದರೆ 1565 ನೆಯ ಇಸವಿಯ ಜನವರಿ 1 ನೇಯ ತಾರೀಖು ಸೋಮವಾರ (ತಾಳಿಕೋಟೆಯ ಕಾಳಗದ ಕೆಲವೇ ದಿನಗಳ ಮುಂಚೆ) ತಮ್ಮ 84ನೆಯ ವರ್ಷದಲ್ಲಿ ವಿಷ್ಣು ಸಾಯುಜ್ಯವನ್ನು ಪಡೆದರು.

ಅವರ ಕೃತಿಗಳಿಗೆಲ್ಲಾ ಪುರಂದರವಿಠಲ ಎಂಬ ಅಂಕಿತ ವಿದೆ ಅವರ 4 ಮಗಂದಿರೂ ಒಬ್ಬಳೇ ಮಗಳೂ ಹೆಂಡತಿಯೂ ಭೃತ್ಯನೂ ಅವರಂತೆಯೇ ಭಕ್ತಿ ಪರನಾದ ಕೀರ್ತನೆಗಳನ್ನು ರಚಿಸಿರುತ್ತಾರೆ.

ಅವರ ಮಗಂದಿರ ಅಂಕಿತ (1) ವರದಪುರಂದರ(2) ಗುರು ಪುರಂದರ ವಿಠಲ (3) ಮಧ್ವಪತಿ ಪುರಂದರ ವಿಠಲ ಮತ್ತು (4)ಅಭಿನವ ಪುರಂದರ ವಿಠಲ ಎಂದೂ ಮಗಳ ಅಂಕಿತ ತಂದೆ ಪುರಂದರವಿಠಲ ಎಂದೂ, ಹೆಂಡತಿಯದ್ದು ಶ್ರೀಪುರಂದರವಿಠಲ ಎಂದೂ, ಭೃತ್ಯನದು ಒಡೆಯ ಪುರಂದರವಿಠಲ ಎಂದು ಇದೆ. ಪುರಂದರದಾಸರ ಹಾಡುಗಳಲ್ಲಿ ಕೆಲಕೆಲವು ಜ್ಞಾನಪುರವಾಗಿ ಇವೆಯಾದರೂ, ಬಹುತರವಾಗಿ ಅವು ಭಕ್ತಪರವಾಗಿದೆ.


**ಸ್ವಾಮಿಯ ಆಲಯದಲ್ಲಿ ಸೆಲ್‌ಫೋನ್ ನಿಷೇಧ**

ತಿರುಮಲೆ ಸ್ವಾಮಿಯವರ ಆಲಯದಲ್ಲಿ ಸೆಲ್ ಫೋನ್,ಕೆಮರಾ, ಇತರ ಎಲೆಕ್ಟ್ರಾನಿಕ್ ವಸ್ತುಗಳನ್ನು ನಿಷೇಧಿಸಲಾಗಿದೆ. ನಿಷೇಧಿಸಿದ ವಸ್ತುಗಳೊಂದಿಗೆ ಭಕ್ತರು ಕಂಡು ಬಂದರೆ ಅಂತಹ ವ್ಯಕ್ತಿಯರನ್ನು ಆಲಯ ದೊಳಗೆ ಅನುಮತಿಸಲಾಗುವುದಿಲ್ಲ. ಆದ್ದರಿಂದ ಭಕ್ತರು ತಿ.ತಿ.ದೇ.ಯೊಂದಿಗೆ ಸಹಕರಿಸಬೇಕಾಗಿ ಕೋರ ಲಾಗಿದೆ.

- ಕಾರ್ಯನಿರ್ವಹಣಾಧಿಕಾರಿ

# ಭಾಗವತ ಧರ್ಮ ಪ್ರಚಾರಕ ಶ್ರೀ ಗೋಪಾಲದಾಸರು

ಡಾ|| ಗುರುರಾಜಪೋಶೆಟ್ಟಿಹಳ್ಳಿ
97393 69621



ಭಕ್ತಿಯಲ್ಲಿ ಭಾಗಣ್ಣರಾಗಿ, ವಿಜಯದಾಸರ ಶಿಷ್ಯರಲ್ಲಿ ಪ್ರಥಮ ದಾಸವರ್ಯರಾಗಿ ತ್ಯಾಗದಲ್ಲಿ ಶ್ರೀಜಗನ್ನಾಥದಾಸರಿಗೆ 40 ವರ್ಷ ಆಯುಷ್ಯ ದಾನಮಾಡಿದ ಮಹಾತ್ಮರು ಶ್ರೀಗೋಪಾಲದಾಸರು. ಬಿಂಬೋಪಾಸನಾಕ್ರಮವನ್ನು ಚಿತ್ರಪಟದಂತೆ ಬರೆದಿಟ್ಟು. ಭಕ್ತ ಜನರಿಗೆ ಉಪದೇಶ ಮಾಡಿದ ಅಪರೋಕ್ಷ ಜ್ಞಾನಿಗಳು! "ಗೋಪಾಲವಿಠಲ" ಎಂಬ ಅಂಕಿತನಾಮದಿಂದ, ಅನೇಕ ದೇವರ ನಾಮಗಳನ್ನು ಸುಳಾದಿಗಳನ್ನು ರಚಿಸಿ, ಹರಿಸರ್ವೋತ್ತಮತ್ವ, ವಾಯುಜೀವೋತ್ತಮತ್ವ ಪ್ರಚಾರ ಮಾಡಿದ ಗೋಪಾಲದಾಸರು, ದಾಸ ಚತುಷ್ಟಯದಲ್ಲಿ ಪ್ರಮುಖರು.

ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಮೊಸರುಕಲ್ಲು ಎಂಬ ಗ್ರಾಮದಲ್ಲಿ ಜನಿಸಿದ ಭಾಗಣ್ಣ ನಂತರ ಗೋಪಾಲದಾಸರಾಗಿ, ದಾಸಸಾಹಿತ್ಯಕ್ಕೆ ತಮ್ಮದೇ ಆದ ಕೀರ್ತನೆಗಳ, ಸುಳಾದಿಗಳ ಕೊಡುಗೆ ನೀಡಿ, ಪ್ರಖ್ಯಾತರಾದರು. ಮುರಾರಿರಾಯ ಮತ್ತು ವೆಂಕಮ್ಮ ದಂಪತಿಗಳಿಗೆ ಕ್ರಿ.ಶ. 1717ರಲ್ಲಿ ಹರಿತಸ ಗೋತ್ರದಲ್ಲಿ ಮೊಸರುಕಲ್ಲು ಗ್ರಾಮದಲ್ಲಿ ಜನಿಸಿದರು. ವೆಂಕಮ್ಮ ಕಷ್ಟಪಟ್ಟು ಭಾಗಣ್ಣನನ್ನು, ಸಾಕಿ, ಸಂಕಾಪುರ ಶಾನುಭೋಗ ಗುಂಡಪ್ಪನ ಸಹಾಯದಿಂದ ಧರ್ಮೋಪದೇಶ ಮಾಡಿಸಿದಳು. ಸಂಧ್ಯಾ ವಂದನೆ ಅಗ್ನಿಕಾರ್ಯ, ಮೊದಲಾದ ಮಂತ್ರಗಳನ್ನು ಶೀಘ್ರವಾಗಿ ಕಲಿತು ಕೊಂಡು, ವಿದ್ಯಾಗುರುಗಳಿಗೆ ಪ್ರೀತಿಪಾತ್ರನಾದ ಭಾಗಣ್ಣ. ತಾಯಿ ವೆಂಕಮ್ಮ ಮಗನ ವಿದ್ಯಾಭ್ಯಾಸದ ಪ್ರೌಢಿಮೆ ಕಂಡು, ತಾನು ಪಡುವ ಕಷ್ಟಗಳನ್ನು ದುಃಖವನ್ನು ಮರೆಯಲು ಪ್ರಾರಂಭಿಸಿದಳು. ಬಾವಿಯ ಹತ್ತಿರ ವಟ ವೃಕ್ಷದ ಹತ್ತಿರ ಕುಳಿತು, ಗಾಯತ್ರಿ ಮಂತ್ರ ಜಪ ಮಾಡುತ್ತಿದ್ದರು. ಭಾಗಣ್ಣನಿಗೆ ಅಪರೋಕ್ಷವಾದ ಸ್ಥಳವೆಂದು ವಟವೃಕ್ಷದ ಬಾವಿ ಸಾಕ್ಷಿಯಾಗಿದೆ.

ಗದ್ವಾಲ್ ವಿದ್ವತ್‌ಸಭೆಯಲ್ಲಿ ತ್ರಿಲಿಂಗ ದೇಶದ ಕವೀಶ್ವರನನ್ನು, ಕವಿತ್ವ ಸ್ಪರ್ಧೆಯಲ್ಲಿ ಭಾಗಣ್ಣ ಸೋಲಿಸಿ, ಜಯಶಾಲಿಯಾಗಿದ್ದು, ಇತಿಹಾಸ ವಾಯಿತು ! ಗದ್ವಾಲ್ ರಾಜಾರಾಮ ಭೂಪಾಲ, ಭಾಗಣ್ಣನನ್ನು ಅನೇಕ ರೀತಿಯಿಂದ ಸನ್ಮಾನಿಸಿ, ಗೌರವಿಸಿದನು. ಕೆಲವು ಜಮೀನುಗಳನ್ನು ಸಹ, ಅಶ್ವ ಸಹಿತ ನೀಡಿ, ಗುರು ಮರ್ಯಾದೆ ಮಾಡಿ, ಕೃತಾರ್ಥನಾದನು. ಭಾಗಣ್ಣನಿಗೆ, ದಾಸಪ್ಪ, ಸೀನಪ್ಪ, ರಂಗಪ್ಪ, ಎಂಬ ಮೂವರು ಸಹೋದರರಿದ್ದರು. ತಾಯಿ ವೆಂಕಮ್ಮನವರ ಜೊತೆಯಲ್ಲಿ ಸಹೋದರರೊಂದಿಗೆ ಭಾಗಣ್ಣ ಸುಂಕಾಪುರ ದಿಂದ ಉತ್ತನೂರಿಗೆ ಬಂದನು. ಉತ್ತನೂರಿನಲ್ಲಿ ಭವಿಷ್ಯ ಹೇಳುತ್ತಾ, ವೆಂಕಟೇಶನ ಗುಡಿಯಲ್ಲಿ ನರ್ತನ ಸೇವೆ ಮಾಡುತ್ತಿದ್ದರು. ಬಾಲ್ಯದಲ್ಲಿ "ವೆಂಕಟ ಕೃಷ್ಣ" ಎಂಬ ಅಂಕಿತದಿಂದ ಕವಿತೆಗಳನ್ನು ರಚಿಸಿ, ಹಾಡಿ ನರ್ತಿಸುತ್ತಿದ್ದರು. ಭಾಗಣ್ಣನ ಶ್ರದ್ಧಾಭಕ್ತಿಗೆ ವೆಂಕಟೇಶನೂ ಶ್ರೀಕೃಷ್ಣರೂಪದಿಂದ ನರ್ತಿಸುವ ದೃಶ್ಯ ಅಪೂರ್ವ ದೃಶ್ಯವಾಗಿತ್ತು! ಎಷ್ಟೆಂದರೂ ಅಪರೋಕ್ಷ ಜ್ಞಾನ ಸಂಪಾದಿಸಿದ ಭಾಗಣ್ಣ, ಸಣ್ಣ ವಯಸ್ಸಿನಲ್ಲೇ, ದೇವರ ಸಾಕ್ಷಾತ್ಕಾರ ಪಡೆದಿದ್ದು. ಅಸಾಮಾನ್ಯ ಪುಣ್ಯ ಕಾಲವಾಗಿತ್ತು! ಭಾಗಣ್ಣನ ಭವಿಷ್ಯ ನುಡಿ, ಸತ್ಯವಾಗುತ್ತಿದ್ದುದರಿಂದ ಅನೇಕ ಜನರು, ಭಾಗಣ್ಣನಿಗೆ ಧನ, ಕನಕ, ಸಮರ್ಪಿಸಿದರು. ಬಡತನದ ದುಃಖ ಮರೆತು, ಭಾಗಣ್ಣ ಬೇಗ ಶ್ರೀಮಂತನಾಗಿದ್ದುದು ವಿಶೇಷ! ಶ್ರೀಮಂತಿಕೆಯ ಜೊತೆಗೆ, ಭಾಗಣ್ಣ, ಅನೇಕ ಬಡವರಿಗೆ ದಾನ ಕಾರ್ಯಗಳನ್ನು ಮಾಡಿದರು.

ಹಸಿದವರಿಗೆ ಅನ್ನ ಕೊಡಿರಿ
ದೀನರಿಗೆ ದ್ರವ್ಯದಾನ ಮಾಡಿರಿ
ಶ್ರೀನಿವಾಸನ ಪಾದವನ್ನು ಭಜಿಸಿರಿ

ಎಂಬುದು ಭಾಗಣ್ಣನ ನಿತ್ಯ ಮಂತ್ರವಾಗಿತ್ತು ಭಾಗಣ್ಣನ ಮನೆಯೇ ದೊಡ್ಡ ಅನ್ನಛತ್ರವಾಗಿತ್ತು! ಕೆಲಕಾಲ, ಭಾಗಣ್ಣ ಆದವಾನಿಯಲ್ಲಿ ದಿವಾನಗಿರಿ ಮಾಡುತ್ತಿದ್ದ, ಪಂಗ ನಾಮದ ತಿಮ್ಮಣ್ಣಯ್ಯನವರ ಬಳಿ ವಾಸ ಮಾಡುತ್ತಿದ್ದರು. ಶ್ರೀಮಂತರಾಗಿದ್ದ ಭಾಗಣ್ಣ, ಕಾಶಿಯಾತ್ರೆ ಮಾಡಿ, ಅಲ್ಲಿಯೂ ತಮ್ಮ ಅದೃಷ್ಟ ಬಲದಿಂದ ಪ್ರಖ್ಯಾತರಾದರು, ಆ ಸಮಯದಲ್ಲೇ ಸುಳಾದಿಗಳ ದಾಸರೆಂದೇ ಪ್ರಖ್ಯಾತರಾಗಿದ್ದ ಈ ವಿಜಯದಾಸರ ದರ್ಶನ ಭಾಗಣ್ಣನಿಗೆ ಪ್ರಾಪ್ತ

ವಾಯಿತು. ಭಾಗಣ್ಣನ ಪಾಂಡಿತ್ಯ ಕಂಡು,ಸಂತೋಷದಿಂದ,ವಿಜಯ ದಾಸರು ಭಾಗಣ್ಣನಿಗೆ ಕೃಪೆ ಮಾಡಿ ಪ್ರೀತಿಯಿಂದ "ಗೋಪಾಲವಿಠಲ" ಎಂದು ಅಂಕಿತ ನೀಡಿ, ಅನುಗ್ರಹ ಮಾಡಿದರು. ಗೋಪಾಲದಾಸರಾಗಿ , ಸಹೋದರರಿಗೂ, ಕ್ರಮವಾಗಿ,ವರದ ಗೋಪಾಲವಿಠಲ,ಗುರು ಗೋಪಾಲವಿಠಲ, ತಂದೆ ಗೋಪಾಲವಿಠಲ ಎಂಬ ಅಂಕಿತಗಳನ್ನು ಅನುಗ್ರಹಿಸಿದರು. ಗೋಪಾಲದಾಸರಂತೆ ಇವರೂ, ಅಪರೋಕ್ಷ ಜ್ಞಾನಿಗಳಾಗಿ, ದಾಸಸಾಹಿತ್ಯದ ಮೆರುಗನ್ನು ಹೆಚ್ಚಿಸಿದರು. ವೆಂಕಟಸಿಂಹಾಚಾರ್ಯರೆಂಬ ಪ್ರಖ್ಯಾತ ಪಂಡಿತರ ಮನಸ್ಸನ್ನು ಪರಿವರ್ತಿಸಿ, ಜ್ಞಾನೋಪದೇಶ ಮಾಡಿ, ಒಂದು ಸುಳಾದಿಯನ್ನೇ ಗೋಪಾಲದಾಸರು ರಚಿಸಿದರು.

ವೈರಾಗ್ಯ ಮಾರ್ಗಕೇಳು ದಾರಿದ್ರ್ಯ ಮಾರ್ಗಕೇಳು
ಮಾರಮಣನ ಪಾದ ಆರಾಧಿಸುವುದಕ್ಕೆ
ಎಂಬ ಸುಳಾದಿ ಪ್ರಖ್ಯಾತವಾಯಿತು.

ವೆಂಕಟನರಸಿಂಹಾಚಾರ್ಯರು ತಮ್ಮ ಅಹಂ ತೊರೆದು ಗೋಪಾಲದಾಸರ ಮೊರೆ ಹೋದರು. ಗೋಪಾಲದಾಸರ ಮಾರ್ಗದರ್ಶನದಂತೆ ಮಂತ್ರಾಲಯಕ್ಕೆ ಹೊರಟು ಶ್ರೀರಾಘವೇಂದ್ರ ಸ್ವಾಮಿಗಳ ದರ್ಶನ ಮಾಡಿದರು. ಮಂತ್ರಾಲಯದಲ್ಲಿ ಭುವನೇಂದ್ರತೀರ್ಥರು, ಶ್ರೀರಾಘವೇಂದ್ರರ ಮಹಾಪೀಠಕ್ಕೆ ಯೋಗ್ಯರು ದೊರಕಿದರೆಂದು ನಿರ್ಧರಿಸಿ, ವೆಂಕಟ ನರಸಿಂಹಾಚಾರ್ಯರಿಗೆ "ವ್ಯಾಸತತ್ವಜ್ಞ" ಎಂದು ನಾಮಕರಣ ಮಾಡಿದರು. ವ್ಯಾಸತತ್ವಜ್ಞರು, ಗೋಪಾಲದಾಸರಿಂದ "ವಾಸುದೇವವಿಠಲ" ಎಂಬ ಅಂಕಿತ ಪಡೆದು, ಅನೇಕ ಕನ್ನಡ ದೇವರ ನಾಮಗಳನ್ನು ರಚಿಸಿದರು. ಗೋಪಾಲದಾಸರೊಂದಿಗೆ, ಕಾಲಿಗೆ ಗೆಜ್ಜೆ ಕಟ್ಟಿಕೊಂಡು, ನರ್ತಿಸುತ್ತಾ, ಕೈಯಲ್ಲಿ ತಂಬೂರಿ,ಹಿಡಿದುಕೊಂಡು ಕುಣಿಯುವ ಈರ್ವರ ದೃಶ್ಯ ಅಪೂರ್ವವಾಗಿತ್ತು! ವ್ಯಾಸತತ್ವಜ್ಞರು ವೇಣೀಸೋಮಪುರದಲ್ಲಿ ವಾಸ ಮಾಡುತ್ತಾ ಐ ಜಿ ಸ್ವಾಮಿ ಎಂದು ಕರೆಯಲ್ಪಟ್ಟರು.

ಗೋಪಾಲದಾಸರು, ಬದರಿಯಿಂದ, ರಾಮೇಶ್ವರದವರೆಗೆ, ತೀರ್ಥಕ್ಷೇತ್ರಗಳ, ಯಾತ್ರೆ ಮಾಡಿದರು. ಪ್ರತಿವರ್ಷ ಬ್ರಹ್ಮೋತ್ಸವದ ಕಾಲಕ್ಕೆ ತಿರುಪತಿಗೆ ಹೋಗಿ, ಶ್ರೀವೆಂಕಟೇಶನ ದರ್ಶನ ತಪ್ಪದೇ ಮಾಡುತ್ತಿದ್ದರು. ಬಹುಕಾಲ,ಉತ್ತನೂರು ಮತ್ತು ವೇಣೀಸೋಮಪುರದಲ್ಲಿ ದೇವತಾರ್ಚನೆಯಲ್ಲಿ ಕಾಲ ಕಳೆಯುತ್ತಿದ್ದರು.ಪಂಢರಾಪುರದ ಪಾಂಡುರಂಗನ ದರ್ಶನ ಮಾಡಿ, ಕೊಲ್ಹಾಪುರದ ಮಹಾಲಕ್ಷ್ಮೀ ದರ್ಶನ ಮಾಡಿ, ಶಿವಮೊಗ್ಗ ಮೂಲಕ, ಉಡುಪಿಗೆ ಬಂದರು. ಗೋಪಾಲದಾಸರು, ಉಡುಪಿಯಲ್ಲಿ ಅನೇಕ ದೇವರನಾಮಗಳನ್ನು ಸುಳಾದಿಗಳನ್ನು ರಚಿಸಿ ಶ್ರೀ ಕೃಷ್ಣನ ದರ್ಶನ ಮಾಡಿ,ಪುನಃ ಉತ್ತನೂರಿಗೆ ವಾಪಸ್ಸಾದರು. ಮಾನ್ವಿಯಲ್ಲಿ, ಶ್ರೀಜಗನ್ನಾಥ ದಾಸರ ಉದರಶೂಲಿಯನ್ನು, ಪರಿಹರಿಸಿ, ತಿರುಪತಿಯಲ್ಲಿ ಅವರಿಗೆ ತಮ್ಮ 40 ವರ್ಷ, ಆಯುಷ್ಯ ದಾನ ಮಾಡಿ, ಹರಿದಾಸ ಪದವಿಯ ದೀಕ್ಷೆಯನ್ನು ನೀಡಿ, ಅವರಿಗೆ ಗೋಪಾಲದಾಸರು, ಅನುಗ್ರಹಿಸಿದರು. ದಾಸತ್ರಯರಾದ. ಗೋಪಾಲದಾಸರು, ದಾಸಪ್ಪದಾಸರು, ಸೀನಪ್ಪ ದಾಸರು, ಒಮ್ಮೆ ಉತ್ತರಾಧಿ ಮಠದ. ಮಹಾನ್‌ಯತಿಗಳಾಗಿದ್ದ ಶ್ರೀ ಸತ್ಯಬೋಧರ ದರ್ಶನ ಮಾಡಿದರು. ದಾಸತ್ರಯರು ಮಹಾ ಅಪರೋಕ್ಷ ಜ್ಞಾನಿಗಳೆಂದು ಶ್ರೀಸತ್ಯಬೋಧ ತೀರ್ಥರು ಅರಿತಿದ್ದರು. ಶ್ರೀ ಸತ್ಯಬೋಧ ತೀರ್ಥರ ಕುರಿತು, ದಾಸತ್ರಯರು ಪದವನ್ನೇ ರಚಿಸಿ ದಾಖಲೆ ಮಾಡಿದರು.

ಮಾರಮದಘ್ನ ಸಮ್ಮೀರ ಮಧ್ವಾಮತೋ
ದ್ಧಾರ ಶುಭ ಗುಣಸಾಗರ ಪಾರಾ
ಧೀರ ಶ್ರೀ ಸತ್ಯಬೋಧಾರ್ಯ ಗುರು ಕರುಣದಲಿ
ವೈರಿವರ್ಗದ ಗೆಲಿದೆ ಧಾರುಣಿಯೊಳು ಮೆರೆದೆ
ಎಂಬ ಪದಗುರುಗಳಿಗೆ ಸಮರ್ಪಿಸಲಾಯಿತು.

ದಾಸತ್ರಯಗಳ ಕೃತಿಗಳನ್ನು ಕಂಡು,ಸಂತೋಷದಿಂದ ಶ್ರೀಸತ್ಯಬೋಧತೀರ್ಥರು, ಮೂವರಿಗೂ ಬೆಲೆ ಬಾಳುವ ಮುತ್ತಿನ ಹಾರವನ್ನು ನೀಡಿ, ಅನುಗ್ರಹಿಸಿದರು.

ಗೋಪಾಲದಾಸರು ವಿಜಯದಾಸರು ರಚಿಸಿದ ಕಂಕಣಾಕಾರ ಸುಳಾದಿಗಳನ್ನು, ಚಕ್ರಾಬ್ಜದಲ್ಲಿಟ್ಟು, ಬೀಜಾಕ್ಷರಗಳನ್ನು ಆಯಾ ಸ್ಥಳಗಳಲ್ಲಿ ಗುರುತಿಸಿ ಉಪಾಸಕರಿಗೆ ಸೌಲಭ್ಯ ನೀಡಿದ ಮಹಾತ್ಮರು. ಚಿತ್ರಗಳನ್ನು ಪೂಜಿಸಿ, ಅನೇಕ ಜನರು ತಮ್ಮ ಇಷ್ಟಾರ್ಥಗಳನ್ನು ಪಡೆಯುತ್ತಿದ್ದರು. ಗೋಪಾಲದಾಸರಿಗೆ ಮಹಾ ಹರಿಭಕ್ತೆ ಹೆಳವನಕಟ್ಟೆ ಗಿರಿಯಮ್ಮನವರು ಶಿಷ್ಯೆಯಾಗಿದ್ದರು. ಗೋಪಾಲದಾಸರು, ಹೆಳವನಕಟ್ಟೆ ಗಿರಿಯಮ್ಮನವರು ರಂಗೋಲಿಯಲ್ಲಿ ದೇವರ ಸಾಕ್ಷಾತ್ಕಾರ ಮಾಡಿಕೊಂಡು, ನರ್ತಿಸುತ್ತಿದ್ದುದು ಅಪೂರ್ವ ದೃಶ್ಯವಾಗಿತ್ತು.

ಗೋಪಾಲದಾಸರು, ಭಾಗವತ ಧರ್ಮ ಉಪದೇಶ ಮಾಡುತ್ತಾ, ಆಡಿದಂತೆ ನಡೆದು, ನಡೆದಂತೆ ಉಪದೇಶ ಮಾಡಿದ ಮಹನೀಯರು.

ಗೋಪಾಲದಾಸರು, ಹರಿದಾಸ ಸಾಹಿತ್ಯ ಪ್ರಚಾರ ಮಾಡಿ, ಉತ್ತನೂರಿನಲ್ಲಿ, ಚಿತ್ರಭಾನು ಸಂವತ್ಸರ, ಪುಷ್ಯಬಹುಳ, ಅಷ್ಟಮಿ ತಿಥಿ ಶನಿವಾರ, ದೇಹತ್ಯಾಗ ಮಾಡಿ, ವೈಕುಂಠವಾಸಿಯಾದರು.

ಅಗತಾದಿ ತ್ರಿಕಾಲಜ್ಞಂ ಆಗಮಾರ್ಥ ವಿಶಾರದಂ
ತ್ಯಾಗ ಭೋಗ ಸಮಾಯುಕ್ತಂ ಭಾಗಣ್ಣಾರ್ಯಗುರುಂ ಭಜೆ

# ಶ್ರೀ ನರಹರಿ ತೀರ್ಥರು

## - ಶ್ರೀಧರ ರಾಯಸಂ



ಶ್ರೀಮಧ್ವಾಚಾರ್ಯರಿಂದ ಮೂರನೆಯವರೆನಿಸಿದ ಯತಿಗಳಾದ ಶ್ರೀನರಹರಿತೀರ್ಥರು ಅದ್ಭುತಗೀರ್ವಾಣ ಭಾಷಾ ಪಾಂಡಿತ್ಯದಿಂದ ಧರ್ಮಪ್ರಚಾರ ಮಾಡಿ, ಭಾಗವತ ಧರ್ಮದ ಕೀರ್ತನೆ ಪದ್ಧತಿಯ ಅನುಸಾರ, ಮೊಟ್ಟ ಮೊದಲಿಗೆ ಕನ್ನಡ ದೇವರನಾಮಗಳನ್ನು ರಚಿಸಿದ ಮಹಾನುಭಾವರು! ಇವರ ಕೀರ್ತನೆಗಳು ಫಲಕಾರಿಯಾಗಿ ಸಮಾಜದ ಮೇಲೆ ವಿಶೇಷ ಪರಿಣಾಮ ಬೀರಿದವು.

ಇವರ ಕಾಲ ಕ್ರಿ.ಶ. 1242 ರಿಂದ 1334 ಎಂದು ಸುಮಾರು 91 ವರ್ಷ, ಜೀವಿಸಿ, ಅದರಲ್ಲಿ 1324 ರಿಂದ 1334 ಸರ್ವಜ್ಞಪೀಠ ಅಲಂಕರಿಸಿ,ಶಾಸ್ತ್ರ ಸಾಹಿತ್ಯದಲ್ಲೂ ಪಾಂಡಿತ್ಯ ಪಡೆದ ಮಹಾನ್ ಯತಿಗಳು. ಶ್ರೀ ಪದ್ಮನಾಭ ತೀರ್ಥರಿಂದ ಆಶ್ರಮ ಸ್ವೀಕರಿಸಿ,ಮಧ್ವಸಿದ್ಧಾಂತದ ಪ್ರಚಾರಕರಾಗಿ, ಅನೇಕ ಕನ್ನಡ ದೇವರ ನಾಮಗಳನ್ನು "ರಘುಪತಿ" ಎಂಬ ಅಂಕಿತನಾಮದಿಂದ ರಚಿಸಿದರು. ಆದರೆ ಕೇವಲ ಎರಡು ದೇವರನಾಮಗಳು ಲಭ್ಯವಾಗಿವೆ.

ಎಂತು ಮರುಳಾದೆ, ನಾನೆಂತು ಮರುಳಾದೆ
ಎಂತು ಮರುಳಾದೆ,ಭವದೊಳು
ಬಳಲಿದೆ ಸಂತತ ಪೊರೆ ರಘುಕುಲತಿಲಕ
ಮಾತಿನಲ್ಲಿ ಹರಿದಾಸತನ
ನೀತಿಯಲ್ಲಿ ಪ್ರಭು ದಾಸತನ
ಪ್ರೀತಿ ಧನಾದಿ ವಿಷಯದಲ್ಲಿ ನಿರ್ಭೀತಿ
ದೈವ ಗುರು ದ್ರೋಹದಲಿ...

ಹರಿಯೇ ಇದು ಸರಿಯೇ
ಚರಣ ಸೇವಕನಲ್ಲಿ ಕರುಣ ಬಾರದ್ಯಾಕೆ
ಪತಿತನೆಂದು ಶ್ರೀಪತಿ ರಕ್ಷಿಸದಿರೆ
ವಿತತವಾಹುದೆ ನಿನ್ನ ಪತಿತಪಾವನ ಕೀರ್ತಿ

ಎಂಬ ಪ್ರಖ್ಯಾತ ಎರಡು ಕನ್ನಡ ದೇವರ ನಾಮಗಳನ್ನು ರಚಿಸಿದ್ದು ಲಭ್ಯವಾಗಿದೆ.

ಪೂರ್ವಾಶ್ರಮದಲ್ಲಿ, ಶಾಮಶಾಸ್ತ್ರಿಗಳೆಂದು ಪ್ರಖ್ಯಾತರಾಗಿ, ಆಂಧ್ರ,ಒರಿಸ್ಸಾ ರಾಜ್ಯದ ಪ್ರದೇಶದವರೆಂದು,ಇತಿಹಾಸದಿಂದ ತಿಳಿದು ಬಂದಿದೆ.

ಮೊದಲು ಅದ್ವೈತ ಸಿದ್ಧಾಂತದಲ್ಲಿ ಪಾಂಡಿತ್ಯ ಪಡೆದು, ರಾಜಕಾರಣ, ಕತ್ತಿವರಸೆ, ಯುದ್ಧ ಕಲೆಗಳಲ್ಲಿ ನೈಪುಣ್ಯತೆ ಪಡೆದ ಮಹಾನುಭಾವರು!!! ಕಳಿಂಗ ರಾಜ್ಯದ ರಾಜನ ಅಕಾಲಿಕ ಮರಣದಿಂದ ಶಾಮಶಾಸ್ತ್ರಿಗಳು ಕಳಿಂಗ ರಾಜ್ಯ 12 ವರ್ಷ,ಆಳಿದರೆಂದು,ಇತಿಹಾಸದಿಂದ ತಿಳಿದು ಬಂದಿದೆ.

ಒಮ್ಮೆ ಶ್ರೀಮಧ್ವಾಚಾರ್ಯರು,ಸಂಚಾರ ಮಾಡುತ್ತಾ, ಒರಿಸ್ಸಾ ರಾಜ್ಯಕ್ಕೆ (ಕಳಿಂಗ) ದಿಗ್ವಿಜಯ ಮಾಡಿದಾಗ,ಶಾಮಶಾಸ್ತ್ರಿಗಳು ಆಚಾರ್ಯ ಮಧ್ವರೊಂದಿಗೆ ವಾಕ್ಯಾರ್ಥ ಮಾಡಿದರು. ಆಚಾರ್ಯ ಮಧ್ವರಪಾಂಡಿತ್ಯ, ಉಪದೇಶಕ್ಕೆ, ಮನಸೋತು,ಅವರ ಶಿಷ್ಯ

ರಾದರು. ಶಾಮಶಾಸ್ತ್ರಿಗಳ ಜೊತೆಗೆ ಅನೇಕ ಪಂಡಿತರು, ದ್ವೈತ ಮತದ ಶಿಷ್ಯರಾದರು.

ಶಾಮಶಾಸ್ತ್ರಿಗಳು,ಶ್ರೀಮಧ್ವಾಚಾರ್ಯರ ಶಿಷ್ಯರಾಗಿ ಸನ್ಯಾಸ ಆಶ್ರಮ ಸ್ವೀಕರಿಸಿ,"ನರಹರಿತೀರ್ಥರೆಂದೂ" ನಾಮಾಂಕಿತರಾಗಿ ಸರ್ವಜ್ಞಪೀಠ ಕ್ರಿ.ಶ. 1324 ರಿಂದ 1334 ರ ವರೆಗೆ ಅಲಂಕರಿಸಿದ್ದರು.

ಶ್ರೀಮಧ್ವಾಚಾರ್ಯರು ಕಳಿಂಗ ರಾಜನ ಭಂಡಾರ ದಲ್ಲಿದ್ದ ಮೂಲ ಸೀತಾರಾಮ ಪ್ರತಿಮೆಗಳನ್ನು, ಪೂಜಿಸಲು ಅಭಿ ಲಾಷೆ ವ್ಯಕ್ತಪಡಿಸಿದಾಗ, ನರಹರಿತೀರ್ಥರು, ಕೆಲವು ಕಾಲದ ನಂತರ ಕಳಿಂಗ ರಾಜ್ಯದ ಗಜಪತಿ ರಾಜವಂಶಜರಿಂದ, ಮೂಲ, ಸೀತಾರಾಮ,ದೇವರ,ಪ್ರತಿಮೆಗಳನ್ನು ಪಾರಿತೋಷಕ ವಾಗಿ ಪಡೆದು ಆಚಾರ್ಯರಿಗೆ ಉಡುಪಿಯಲ್ಲಿ ಒಪ್ಪಿಸಿದರೆಂದು ಶಾಸನದಿಂದ ತಿಳಿದು ಬಂದಿದೆ.

ಆಚಾರ್ಯಮಧ್ವರು 80 ದಿವಸ ಆರಾಧನೆ ಮಾಡಿ ತಮ್ಮ ಸಂಸ್ಥಾನವನ್ನು ಪದ್ಮನಾಭತೀರ್ಥರಿಗೆ ಒಪ್ಪಿಸಿ ಬದರಿ ಕಾಶ್ರಮಕ್ಕೆ ಸಂಚಾರ ಮಾಡಿದರು.

ಶ್ರೀ ನರಹರಿತೀರ್ಥರು ಕಳಿಂಗ ಆಂಧ್ರದ ಮನೆತನದ ವರಿಗೆ, ಮಾಧ್ವ ದೀಕ್ಷೆ, ನೀಡಿ ವೈಷ್ಣವರನ್ನಾಗಿ ಮಾಡಿದರು. ಈಗಲೂ, ಆಂಧ್ರದಲ್ಲಿ ಮತ್ತು ಅದರ ಕರಾವಳಿಯಲ್ಲಿ ಇವರು ವಾಸಿಸುತ್ತಿದ್ದಾರೆ. ಶ್ರೀನರಹರಿತೀರ್ಥರು,ಮಧ್ವಸಿದ್ಧಾಂತ ಪ್ರಚಾರ ಮಾಡುತ್ತಾ, ಆಂಧ್ರದ ಸಿಂಹಾಚಲದಲ್ಲಿ ವರಾಹನರ ಸಿಂಹಸ್ವಾಮಿ ಎದುರು ಪ್ರಾಣದೇವರನ್ನು ಪ್ರತಿಷ್ಠಾಪಿಸಿದರು.

ಶ್ರೀರಾಮಚಂದ್ರ,ಲಕ್ಷ್ಮಣ,ಸೀತಾ ಮತ್ತು ಪ್ರಾಣ ದೇವರ. ವಿಗ್ರಹಗಳನ್ನು ಶ್ರೀಕಾಕುಳಂನಲ್ಲಿಯ ಶ್ರೀಕೂರ್ಮನಲ್ಲಿ ಪ್ರತಿಷ್ಠಾಪಿಸಿದರು. ನಾರಾಯಣನ ವಿಗ್ರಹ,ಕರ್ನಾಟಕದ ವಿಜಯನಗರ ಜಿಲ್ಲೆಯ ಹೊಸಪೇಟೆ ಹತ್ತಿರ,ನಾರಾಯಣ ದೇವರ ಕೆರೆ ಗ್ರಾಮ ದಲ್ಲಿ ಪ್ರತಿಷ್ಠಾಪಿಸಿದರು.

ಆದರೆ ಈಗ ನಾರಾಯಣ ದೇವರ ಕೆರೆ, ತುಂಗಭದ್ರಾ ಅಣೆಕಟ್ಟಿನಲ್ಲಿ ಮುಳುಗಡೆಯಾಗಿದ್ದರಿಂದ ಅಲ್ಲಿಯ ದೇವರು ಗಳನ್ನು ತಂದು, ಮರಿಯಮ್ಮನ ಹಳ್ಳಿಯಲ್ಲಿ ಪುನರ್ ಪ್ರತಿಷ್ಠಾಪಿಸ ಲ್ಪಟ್ಟಿತು. ಶ್ರೀನರಹರಿತೀರ್ಥರು ಕರ್ನೂಲಿನಲ್ಲೂ ಪೇಟಾ ಆಂಜ ನೇಯ ಸ್ವಾಮಿ ದೇವರನ್ನು ಪ್ರತಿಷ್ಠಾಪಿಸಿದ್ದಾರೆ.

ಶ್ರೀನರಹರಿತೀರ್ಥರು 15 ಗ್ರಂಥಗಳನ್ನು ರಚಿಸಿದರೆಂದು, ಅನೇಕ ಕನ್ನಡ ದೇವರ ನಾಮಗಳನ್ನು "ರಘುಪತಿ" ಅಂಕಿತ ದಿಂದ ದಾಸಸಾಹಿತ್ಯದ ಆದ್ಯ ಪ್ರವರ್ತಕರೆಂದು,ಪ್ರಖ್ಯಾತ ರಾದರು.

ಶ್ರೀ ನರಹರಿತೀರ್ಥರು ಮಧ್ವಸಿದ್ಧಾಂತ ಪ್ರಚಾರ ಮಾಡಿ, ಸುಮಾರು 9 ವರ್ಷ ಸರ್ವಜ್ಞಪೀಠ ಅಲಂಕರಿಸಿ, ಆಚಾರ್ಯ ಮಧ್ವರ ನೇರ ಶಿಷ್ಯರಾಗಿದ್ದ ಶ್ರೀಮಾಧವತೀರ್ಥರಿಗೆ ಪೀಠವನ್ನು ಒಪ್ಪಿಸಿ, ಕ್ರಿ.ಶ. 1333 ರಲ್ಲಿ ಹಂಪೆಯ, ತುಂಗಭದ್ರಾ ನದೀ ತೀರ ದಲ್ಲಿ ಪುಷ್ಯ, ಶುದ್ಧ, ಸಪ್ತಮೀ ಬೃಂದಾವನಸ್ಥರಾದರು.

ಸಸೀತಾ ಮೂಲರಾಮಾಚಾರ್ಯ
ಕೋಶೇ ಗಜಪತೇಃ ಸ್ಥಿತಾ ।
ಯೇನಾನೀತಾ ನಮಸ್ತೆಸ್ಮೈ
ಶ್ರೀ ಮನ್ನೃಹರಿಭಿಕ್ಷವೇ ॥


# ಹೆಲ್ಮೆಟ್ ತಪ್ಪದೇ ಧರಿಸಬೇಕು



**ತಿರುಪತಿಯಿಂದ ತಿರುಮಲೆಗೆ, ತಿರುಮಲೆಯಿಂದ ತಿರುಪತಿಗೆ ದ್ವಿಚಕ್ರವಾಹನದಲ್ಲಿ ಹೋಗಬಯಸುವ ಪ್ರಯಾಣಿಕರು, ಭಕ್ತರು ತಪ್ಪದೇ ಹೆಲ್ಮೆಟ್‌ನ್ನು ಧರಿಸಬೇಕು. ಇದರಿಂದ ಅಪಘಾತಗಳನ್ನು ತಡೆಯಬಹುದು.**

**ಹೆಲ್ಮೆಟ್ ಧರಿಸಿ ವಾಹನ ನಡೆಸಿ**

# ಮಾತೃದೇವೋ ಭವ! ಪಿತೃ ದೇವೋ ಭವ!




- ವೆಂಕಟರಾಘವನ್ .ಎಸ್
98457 93917

ಮಾನವ ಜನ್ಮ ದುರ್ಲಭ. ಜೀವಕೋಟಿಯಲ್ಲಿ ಮಾನವರು ಸುಕೃತಾ,ಬುದ್ಧಿ,ವಿವೇಕ,ಸಂಸ್ಕಾರನ ಉಳ್ಳವರು. ಮನುವಿನಿಂದ ಮಾನವ ಸಂತತಿ. ಪ್ರಕೃತಿಯಲ್ಲಿ ಸಹಜೀವನ ನಡೆಸುವರು ಮಾನವರು. ಆಲೋಚನೆ,ಆಚಾರ,ಉಪಚಾರ, ಆನಂದಾನುಭೂತಿಯನ್ನು ಅನುಭವಿಸಲು,ಹಂಚಿಕೊಳ್ಳಲು ಭಾವನೆ ಉಳ್ಳವರು. ಮನುವುನಿಂದ ಮಾನವ ಸಂತತಿ ಪ್ರಕೃತಿಯನ್ನು ಆರಾಧಿಸುವರು.ಆಚಾರ ಮೂಲದಿಂದ ಇರುವ ಧರ್ಮವನ್ನು ಅನುಸರಿಸಬೇಕು.ಧರ್ಮದಿಂದ ಸಂಸಾರ ಸಾಗರವನ್ನು ದಾಟಬಹುದು. ಭುವಿಗೆ ಒಂಟಿಯಾಗಿ ಬಂದು, ಬದುಕನು ನಡೆಸಿ ಸಮಾಜದಲ್ಲಿ ಬಾಳಿ, ಸಮೈಕ್ಯ ಜೀವನದ ಅನುಭೂತಿ ಪಡೆದು ಅಂತ್ಯದಲ್ಲಿ ಒಬ್ಬಂಟಿಗನಾಗಿಯೇ ಮರಳಿ ಪರಲೋಕಕ್ಕೆ ತೆರಳುವನು.ಆದರೆ ಧರ್ಮ ಜೊತೆಯಾಗಿ ಪರಲೋಕದಲ್ಲೂ ನೆರಳಂತೆ ಇರುವುದು ವಿಶೇಷ. ಭಾರತೀಯ ಧಾರ್ಮಿಕ ವ್ಯವಸ್ಥೆ ಮಹಾಬಲೋಪೇತ! ಬ್ರಹ್ಮಚರ್ಯ,ಗೃಹಸ್ಥ,ವಾನಪ್ರಸ್ಥ. ಸನ್ಯಾಸ ಎಂದು ಚತುರ್ವಿಧ ಆಶ್ರಮ ವಾಸ ಮತ್ತು ಅದರಲ್ಲಿ ಆಚರಿಸುವ ವಿಧಿ ವಿಧಾನವನ್ನು, ಪಾಲಿಸುವ ಸದಾಚಾರ ಸಂಪತ್ತನ್ನು ವಿವರಿಸಿದ್ದಾರೆ. ಗೃಹಸ್ಥ ಆಶ್ರಮದಲ್ಲಿ ತನ್ನ ಧರ್ಮಾಚರಣೆಯಿಂದ ಋಣ ವಿಮುಕ್ತಿ. ಕೈವಲ್ಯ ಮುಕ್ತಿಯನ್ನು ಸಾಧಿಸಿಕೊಳ್ಳುವನು. ವೇದ ಪಠಣ ಮಾಡುವುದರಿಂದ ಬ್ರಹ್ಮಯಜ್ಞ,ತರ್ಪಣದಿಂದ ಪಿತೃಯಜ್ಞ ಈ ರೀತಿಯಾಗಿ ಪಂಚ ಮಹಾಯಜ್ಞಗಳನ್ನು ಮಾಡುವ ಅವಕಾಶ, ಮಾನವರು ಪಡೆದಿದ್ದಾರೆ. ಈ ಕ್ರಮದಲ್ಲಿ ತ್ರಿವಿಧ ಋಣಗಳನ್ನು ಸೂಚಿಸಿದ್ದಾರೆ. ಮೂರು ಋಣಗಳು ದೇವಋಣ, ಋಷಿಋಣ, ಪಿತೃಋಣ. ಈ ಮೂರು ಋಣಗಳನ್ನು ವಿಧಿಯಿಂದ ತೀರಿಸಿಕೊಳ್ಳಲು ಸೂಚಿಸಿದ್ದಾರೆ. ಮಾನವ ಜನ್ಮ ಸಫಲವಾಗಲು, ಮಾನವ ಕೃತ ಕರ್ಮ ಫಲಿಸಲು ಮಹೋನ್ನತವಾದ ಋಣ ವಿಮುಕ್ತಿಯಿಂದ ಕೈವಲ್ಯ ಮುಕ್ತಿ ಜೀವನ ಪ್ರಾಪ್ತಿ ಆಗುವುದು ಎಂಬುವ ವಿಶ್ವಾಸ. ಧರ್ಮಪಾಲನೆ ಮತ್ತು ಸದಾಚಾರ ಆಚಾರಃ ಪರಮೋ ಧರ್ಮಃಆಚಾರಃ ಪರಮಂ ತಪಃ ಆಚಾರಾತ್ ವರ್ಧತೇ ಹ್ಯಾಯಃ ಚಾರಾ ತಪ ಸಂಕ್ಷಯಃ ಆಚಾರವೇ ಪರಮ ಧರ್ಮ ಆಚಾರವೇ ಹೆಮ್ಮೆ. ಆಚಾರದಿಂದ ಆಯುಷ್ ವೃದ್ಧಿ ಮತ್ತು ಪಾಪ ಕ್ಷಯ ಆಗುವುದು. “ಸದಾಚಾರಂ ಧರ್ಮ ಮೂಲಮ್” ಸದಾಚಾರವೇ ಧರ್ಮಕ್ಕೆ ಮೂಲ ಎನ್ನುವುದು ಹಿತ ಬೋಧೆ.ಹಿಂದೂ ಧರ್ಮದಲ್ಲಿ ತಾಯಿ, ತಂದೆ, ಗುರು ಮತ್ತು ದೈವ ಎಂಬುವ ಗೌರವ ಸಂಪ್ರದಾಯವಿದೆ. ಮಾನವನಾಗಿ ಭುವಿಗೆ ಬರುವುದು ತಾಯಿ ಕೊಟ್ಟ ಜನ್ಮ. ತಾಯಿ ಮಗುವಿಗೆ ಮೊದಲ ಗುರು ಮತ್ತು ದೈವ ಸಮಾನ ವಂಶವ ಬೆಳಗಲು ಮಗುವಿಗೆ ಪ್ರಾಣ ಕೊಟ್ಟು ಸಂಸಾರದಲ್ಲಿ ಸಂಘದಲ್ಲಿ ಸ್ಥಾನ ನೀಡುವ ತಂದೆ ಎರಡನೆಯ ಗುರುವು ಮತ್ತು ಪಿತೃದೇವರಾಗುವರು. ಪುಂಡಲೀಕ ತನ್ನ ತಂದೆ ತಾಯಿ ಸೇವೆಯಲ್ಲಿ ಜೀವನ ಸಲ್ಲಿಸಿ ದೇವರನ್ನು ತಂದೆ ತಾಯಿಯಲ್ಲಿ ಕಂಡು ಹಗಲಿರುಳು ಸೇವೆ ಮಾಡಿ ಹರಿಯನ್ನು ಸಂತೋಷಪಡಿಸಿರುವ ಕಥೆ ಪುಂಡಲೀಕ ಚರಿತೆಯಲ್ಲಿ ಕಾಣಬಹುದು “ಪುಂಡಲೀಕ ವರದಗೋವಿಂದ”ಎಂದು ಶ್ರೀಹರಿಯನ್ನು ನಮಸ್ಕರಿಸುವುದು. ಶ್ರೀ ಹರಿಯ ಕೃಪೆಗೆ ಪುಂಡಲೀಕ ಪಾತ್ರರಾಗಿರುವುದು ಗಮನಿಸಬಹುದು. ತೈತ್ತಿರೀಯ ಉಪನಿಷತ್ ಕೃಷ್ಣ ಯಜುರ್ವೇದದ ತೈತ್ತಿ ರೀಯ ಅರಣ್ಯಕಕ್ಕೆ ಸೇರಿದ್ದು. ಶಿಕ್ಷಾ ವಲ್ಲಿ, ಬ್ರಹ್ಮಾನಂದ ವಲ್ಲಿ, ಭೃಗುವಲ್ಲಿ ಎಂಬ ಮೂರು ಅಧ್ಯಾಯಗಳಿವೆ.ತೈತ್ತಿರೀಯ ಉಪನಿಷತ್ತು ಮೂರು ಅಧ್ಯಾಯಗಳ ಮೂಲಕ. ಸಾಧಕನಿಗೆ “ಸತ್ಯಂ ಜ್ಞಾನ ಅನಂತಂಬ್ರಹ್ಮ” ಎಂಬ ಆತ್ಮದ ಸ್ವರೂಪವನ್ನು ಅಂತಿಮವಾಗಿ ಅರಿತುಕೊಳ್ಳಲು ಸಹಾಯ ಮಾಡುತ್ತದೆ. ಮೊದಲ

ಅಧ್ಯಾಯವು ಸಾಧಕನಿಗೆ ಸೂಚಿಸಲಾದ ಆದೇಶಗಳನ್ನು ಒಳಗೊಳ್ಳುತ್ತದೆ ಮತ್ತು ಎರಡನೆಯ ಅಧ್ಯಾಯದಲ್ಲಿ ವಿವರಿಸಿರುವ ನಿರ್ದಿಷ್ಟ ವಿಧಾನದ ಮೂಲಕ ಆತ್ಮ-ವಿಚಾರದೊಂದಿಗೆ ಮುಂದುವರಿಯುತ್ತದೆ. ಅಂತಿಮ ಅಧ್ಯಾಯದಲ್ಲಿ ಗುರು ಮತ್ತು ಶಿಷ್ಯರ ನಡುವಿನ ಪರಸ್ಪರ ಕ್ರಿಯೆಯ ಮೂಲಕ. ಉಪನಿಷತ್ತು ಸಂಪೂರ್ಣ ಸತ್ಯದ ಅಂತಿಮಜ್ಞಾನವನ್ನು ನೀಡುತ್ತದೆ. ಹರಿಃ ಓಂ॥ ಶಂ ನೋ ಮಿತ್ರ ಃ ಶಂ ವರುಣಃ ಶಂ ನೋ ಭವತ್ವರ್ಯಮಾ। ಶಂ ನ ಇಂದ್ರೋ ಬೃಹಸ್ಪತಿಃ ಶಂ ನೋ ವಿಷ್ಣುರುರು ಕ್ರಮಃ ನಮೋ ಬ್ರಹ್ಮಣೇ ನಮಸ್ತೇ ವಾಯೋ ತ್ವಮೇವ ಪ್ರತ್ಯಕ್ಷಂ ಬ್ರಹ್ಮಾಸಿ ತ್ವಾಮೇವ ಪ್ರತ್ಯಕ್ಷಂ ಬ್ರಹ್ಮವದಿಷ್ಯಾಮಿ॥ ಋತಂ ವದಿಷ್ಯಾಮಿ।ಸತ್ಯಂ ವದಿಷ್ಯಾಮಿ।ತನ್ಮಾಮವತು।ತದ್ವ ಕ್ತಾರಮವತು ಅವತು ಮಾಮ್ ಅವತು ವಕ್ತಾರಮ್ ಓಂ ಶಾಂತಿಃ ಶಾಂತಿಃ ಶಾಂತಿಃ॥

ಹೇ ಭಗವಂತನೇ!ಪರಮಾತ್ಮನೇ! ಸೂರ್ಯ ದೇವನು ನಮಗೆ ಶುಭಕರನಾಗಲಿ. ವರುಣದೇವನು ಶಾಂತಿಯನ್ನು ಒದಗಿಸಲಿ ಪಿತೃದೇವತೆಯಾದ ಅರ್ಯಮನು,ನಮಗೆ ಮಂಗಳಪ್ರದವಾಗಲಿ.ದೇವತೆಗಳ ಒಡನೆಯನಾದ ಇಂದ್ರನೂ ದೇವ ಗುರುಗಳಾದ ಬೃಹಸ್ಪತಿಯೂ ನಮಗೆ ಶುಭ ಉಂಟು ಮಾಡಲಿ. ವಿಸ್ತೀರ್ಣವಾದ ಪಾದಗಳ ಸ್ಥಿತಿಕರ್ತನಾದ ವಿಷ್ಣುವು ನಮಗೆ ಸುಖವನ್ನು ನೀಡಲಿ. ಮೂಲ ಪರಬ್ರಹ್ಮನಿಗೆ ನಮಸ್ಕಾರ! ಹೇ ವಾಯುದೇವನೇ! ನಮನಗಳು. ನೀನೇ ಪ್ರತ್ಯಕ್ಷ ಸ್ವಯಂ ಗಾಳಿಯ ರೂಪದಲ್ಲಿ ಸೋಕಿ ಪರಬ್ರಹ್ಮವೇ ಆಗಿರುವಿ.ನಿನ್ನನ್ನೇ ಪ್ರತ್ಯಕ್ಷ ಪರಬ್ರಹ್ಮವೆಂದು ಹೇಳುವೆನು.ಪಾರಮಾರ್ಥಿಕ ಸತ್ಯವಾದ ಋತವೇ ನೀನಾಗಿರುವೆ ಎಂದು ಹೇಳುವೆನು. ಲೌಕಿಕ ಸತ್ಯವೂ ನೀನಾಗಿರುವೆ ಎಂದೂ ನುಡಿಯುವೆನು. ಆಚಾರ್ಯನನ್ನು ಕಾಪಾಡಲಿ! ನನ್ನನ್ನು ಕಾಪಾಡಲಿ.ಹೇ ದೇವದೇವನೇ! ಆಧಿದೈವಿಕ, ಆಧಿಭೌತಿಕ ಹಾಗೂ ಆಧ್ಯಾತ್ಮಿಕ ತಾಪತ್ರಯಗಳು ಶಾಂತವಾಗಲಿ.ಈ ಮಂತ್ರದಲ್ಲಿ ಮಿತ್ರ.ವರುಣ,ಅರ್ಯಮ. ಇಂದ್ರ, ಬೃಹಸ್ಪತಿ.ವಿಷ್ಣು, ಪರಬ್ರಹ್ಮ, ಪ್ರಜಾಪತಿ ಬ್ರಹ್ಮ.ವಾಯು ರೂಪ-ಗುಣಗಳಿರುವ ಭಗವಂತನನ್ನು ಪ್ರಾರ್ಥಿಸಲಾಗಿದೆ.

ದೇವಪಿತೃಕಾರ್ಯಾಭ್ಯಾಂ ಪ್ರಮದಿತವ್ಯಮ್।
ಮಾತೃದೇವೋ ಭವ ।
ಪಿತೃದೇವೋ ಭವ । ಆಚಾರ್ಯದೇವೋ ಭವ ।
ಅತಿಥಿದೇವೋ ಭವ ।
ಯಾನ್ಯನವದ್ಯಾನಿ ಕರ್ಮಾಣಿ।ತಾನಿ ಸೇವಿತವ್ಯಾನಿ।
ನೋ ಇತರಾಣಿ
ಯಾನ್ಯಸ್ಮಾಕಂದಳಸುಚರಿತಾನಿ ।
ತಾನಿ ತ್ವಯೋಪಾಸ್ಯಾನಿ ॥

ದೇವರ ಮತ್ತು ಪಿತೃ ದೇವತೆಗಳ ಸೇವೆ ಮರೆಯದಿರು! ನಿರ್ಲಕ್ಷ್ಯ ಬೇಡ. ಮಾತೃದೇವೋ ಭವ ಪಿತೃದೇವೋ ಭವ ಎಂದು ತಂದೆ ತಾಯಿಗಳನ್ನು ದೇವರಾಗಿ ಆರಾಧಿಸಬೇಕು. ಶಂಕೆ ಇಲ್ಲದ ಕಾರ್ಯ ಅಥವಾ ಕರ್ಮ ಮಾಡಬೇಕು. ಸುಚರಿತವಾದ ಸತ್ಕರ್ಮ ಮಾಡಬೇಕು ಬೇರೊಂದು ಅಲ್ಲ ಕೊಡುವುದನ್ನು ಶ್ರದ್ಧೆಯಿಂದ ಕೊಡು. ಅಶ್ರದ್ಧೆಯಿಂದ ಎಂದೂ ಕೊಡಬೇಡ. ಜನ್ಮ ಕೊಟ್ಟ ತಂದೆ ತಾಯಿ ದೈವ ಸಮಾನ. ಮಾತೃದೇವೋ ಭವ ! ಪಿತೃದೇವೋ ಭವ! ಎಂದು ತಂದೆ ತಾಯಿಯರನ್ನು ದೈವಸಮಾನವಾಗಿ ನೋಡಲು ಬೋಧನೆ ಮಾಡಿರುವುದು ತೈತ್ತೀರೋಪನಿಷತ್.

ಜನ್ಮ ಕೊಟ್ಟು, ವಿದ್ಯಾ ಬುದ್ಧಿಕಲಿಸಿದ ತಂದೆ ತಾಯಿಯ ಋಣ ತೀರಿಸಬೇಕು. ತಂದೆ ತಾಯಿಯ ಪೋಷಣೆ,ಸೇವೆ, ಗೌರವ, ವೃದ್ಧಾಪ್ಯದಲ್ಲಿ ಸೇವೆ, ಮರಣಾನಂತರ ವಿಧಿಯಿಂದ ಶ್ರಾದ್ಧ ಕರ್ಮ, ತರ್ಪಣ ಕಾರ್ಯಗಳನ್ನು ನಿರ್ವಹಿಸಿ ಪಿತೃಋಣವನ್ನು ತೀರಿಸಬೇಕು.

**ಪುಂಡರೀಕರ ಮಾತಾ ಪಿತಾ ಸೇವೆ :**

ಪುಂಡರೀಕನ ತಂದೆ ಜನುದೇವ ಹಾಗೂ ತಾಯಿ ಸತ್ಯವತಿ. ಬಾಲ್ಯದಲ್ಲಿ ಮುದ್ದಾಗಿ ಬೆಳೆದು ಯುಕ್ತವಯಸ್ಸಲ್ಲಿ ಮದುವೆ ಆದರು ಪುಂಡಲೀಕರು. ಮದುವೆಯ ನಂತರ ಪತ್ನಿಯೊಡನೆ ಮೋಹಿತರಾಗಿ ಕಾಲ ಕಳೆಯುತಾ ತಂದೆ ತಾಯಿಗಳ ನಿರ್ಲಕ್ಷ್ಯ ಮಾಡಿ ಅವಮಾನ ಮಾಡಿದರು. ಪುಂಡಲೀಕರ ವೃದ್ಧ ತಂದೆ ತಾಯಿ ಕಾಶಿ ಯಾತ್ರೆಗೆ ಹೊರಟರು ಕಾಲ ಕಳೆಯಿತು. ಪುಂಡಲೀಕ ವ್ಯಾಮೋಹ ಅರಿತು ಪಶ್ಚಾತ್ತಾಪ ಪಟ್ಟು ಕಾಶಿಯಾತ್ರೆಗೆ ಹೊರಟರು. ದಾರಿಯಲ್ಲಿ ಕುಕ್ಕುಟ ಋಷಿಗಳ ಆಶ್ರಮ ಕಂಡು ಅಲ್ಲಿ ಸ್ವಲ್ಪ ಸಮಯ ಆಶ್ರಮದಲ್ಲಿ ಇದ್ದರು.ತಂದೆ-ತಾಯಿ ಸೇವೆಯನ್ನು ಋಷಿ ಭಕ್ತಿಯಿಂದ ಮಾಡುವುದು ಕಂಡು,ಗಂಗಾ, ಯಮುನಾ,ಸರಸ್ವತೀ ನದಿಗಳ ದೇವತೆಯರು ಆಶ್ರಮಕೆ ಬಂದು ಋಷಿಗೆ ಸ್ನಾನ ಮಾಡಿಸುವುದನ್ನೂ ವೀಕ್ಷಿಸಿ ಆಶ್ಚರ್ಯಪಟ್ಟು ಆ ಬಗ್ಗೆ ಋಷಿಯನ್ನು ಕೇಳಲಾಗಿ ಆತ ಮಾತಾಪಿತೃಗಳ ಸೇವೆಯಿಂದ ಆ ಸೌಭಾಗ್ಯವುಂಟಾಗಿದೆಯೆಂದು ತಿಳಿಸಿ ಪುತ್ರ ಧರ್ಮವನ್ನು ಉಪದೇಶಿಸಿದರು.ಪುಂಡಲೀಕ ತಾನು ಮಾಡಿದ ಅಪರಾಧ ಅರಿತು ತಂದೆ ತಾಯಿಯನ್ನು ಹುಡುಕುತಾ ಒಂದೆಡೆ ದೇವಸ್ಥಾನದಲ್ಲಿ ದೀನ ಸ್ಥಿತಿಯಲ್ಲಿ ಇದ್ದ ಅವರನ್ನು ಕಂಡು ತಂದೆ

ತಾಯಿಗಿಂತ ದೇವರು ಬೇರೆ ಯಾರೂ ಇಲ್ಲ! ಎನ್ನುತ ವ್ರತ ದೀಕ್ಷೆಯಲ್ಲಿ ಇದ್ದರು. ಪುಂಡಲೀಕನ ಭಕ್ತಿ, ನಿಷ್ಠೆ ಮೆಚ್ಚಿದ ಶ್ರೀ ಕೃಷ್ಣ ಪರಮಾತ್ಮ ಪುಂಡಲೀಕರ ಮನೆ ಮುಂದೆ ಬಂದು ಪುಂಡ ಲೀಕ ಇಗೋ ನಾ ಬಂದಿರುವೆ ಎಂದು ದರ್ಶನ ಕೊಟ್ಟರು. ಪುಂಡಲೀಕ ತನ್ನ ತಂದೆ ಮಲಗುತ್ತಿದ್ದಾರೆ. ಸೇವೆಯಲ್ಲಿ ಭಂಗ ಆಗಬಾರದು.ಸ್ವಲ್ಪ ಅಲ್ಲೇ ನಿಲ್ಲಿ ಎಂದು ಶ್ರೀಹರಿಯನ್ನು ಬೇಡಿ ಕೊಂಡರು. ಶ್ರೀಹರಿ ನಿಂತು ನಿಂತು ನೋವಾಗುತ್ತಿದೆ ಇನ್ನು ಎಷ್ಟು ಹೊತ್ತು?ಎಂದು ಪ್ರಶ್ನೆ ಮಾಡಿದರು. ಪುಂಡಲೀಕ ಅಲ್ಲಿರುವ ಇಟ್ಟಿಗೆ ಎಸೆದು ಇದರ ಮೇಲೆ ನಿಲ್ಲಲು ಬೇಡಿಕೊಂಡರು. ನಂತರ ಶ್ರೀಹರಿಗೆ ಪಾದಾಭಿವಂದನೆ ಮಾಡಿದರು.ಜಗನ್ಮಾತೆ ರುಕ್ಮಿಣಿದೇವಿ ಕೂಡ ಬಂದರು. ಪುಂಡಲೀಕನ ಭಕ್ತಿಗೆ ವರ ಕೇಳಲು ಪುಂಡಲೀಕ ಶ್ರೀಹರಿಯನ್ನು ಇದೇ ರೂಪದಲ್ಲಿ ನೆಲಸಿ ಭಕ್ತರಿಗೆ ಅಭೀಷ್ಟ ನೆರವೇರಿಸಲು ಬೇಡಿಕೊಂಡರು. ಹೀಗಾಗಿ ಶ್ರೀಹರಿವಿಠ್ಠಲ ರೂಪದಲ್ಲಿ, ಶ್ರೀಮಹಾಲಕ್ಷ್ಮೀ-ರುಕ್ಮಿಣಿ ರೂಪದಲಿ ಪಂಢರಾಪುರದಲ್ಲಿ ಇದ್ದು ಭಕ್ತ ಕೋಟಿಗೆ ದರುಶನ ಭಾಗ್ಯ, ತಮ್ಮ ಬೇಡಿಕೆಗಳನ್ನು ಪೂರೈಸುವ ಹಾಗೆ ನೆಲೆಸಿದರು. ಪುಂಡ ಲೀಕನ ಭಕ್ತಿ ತಂದೆ ತಾಯಿಯ ಸೇವೆ ಅಮೋಘ! ಶ್ರೀಹರಿ ಯನ್ನೇ ಕಾದಿರಿಸಿ ಪಿತೃ ಭಕ್ತಿ ಮತ್ತು ದೈವ ಭಕ್ತಿಯನ್ನು ತೋರಿದ ಮಹಾನುಭಾವ ಪುಂಡಲೀಕ.

**ಶ್ರವಣ ಕುಮಾರರ ಮಾತಾಪಿತೃಸೇವೆ:**

ತ್ರೇತಾಯುಗದ ಸಮಯದಲ್ಲಿ ಶಂತನು ಮತ್ತು ಜ್ಞಾನ ವತಿ ಪುಣ್ಯ ದಂಪತಿಗಳು ಸಂತಾನಕ್ಕಾಗಿ ಭಗವಂತನ ಸೇವೆ ಮತ್ತು ಜಪ ಮಾಡುತ್ತಿದ್ದರು. ಭಗವಂತನ ಕೃಪೆಯಿಂದ ಅವರಿಗೆ ಪುತ್ರ ಜನ್ಮಿಸಿದ. ಸಂತೋಷ ತನ್ಮಯದಿಂದ ಕುಮಾರನಿಗೆ ಶ್ರವಣಕುಮಾರ ಎಂದು ನಾಮಕರಣ ಮಾಡಿದರು.

ಶ್ರವಣಕುಮಾರನ ತಂದೆ ತಾಯಿಗಳಾದ ಶಂತನು ಮತ್ತು ಜ್ಞಾನವತಿ ವೃದ್ಧಾಪ್ಯದಿಂದ ಬಳಲುತ್ತಿದ್ದಾಗ ದೃಷ್ಟಿ ಲೋಪವೂ ಆಯಿತು. ಅಂಧತ್ವದಿಂದ ಬಳಲುತ್ತಿದ್ದ ತಂದೆ ತಾಯಿಯನ್ನು ಶ್ರವಣಕುಮಾರರು ಪ್ರತಿನಿತ್ಯ ಅವರ ಸೇವೆಯೇ ಪ್ರಥಮ ಕರ್ತವ್ಯ ! ತಂದೆ ತಾಯಿ ದೇವರು ಮತ್ತು ಸರ್ವಸ್ವ ಎಂದು ತಿಳಿದು ಭಕ್ತಿಯಿಂದ ಅವರ ಸೇವೆ ಮಾಡುತ್ತಲಿದ್ದರು ಸತ್ಪುರುಷ ರಾದ ಶ್ರವಣಕುಮಾರರು. ಶ್ರವಣಕುಮಾರರ ತಂದೆ ತಾಯಿ ದೈವ ಭಕ್ತರು. ಶ್ರವಣಕುಮಾರ ಅವರ ಇಚ್ಛೆಯಂತೆ ತಂದೆ ತಾಯಿ ಜೊತೆ ತೀರ್ಥಯಾತ್ರೆ ಮಾಡುವ ಸಂಕಲ್ಪ ಮಾಡಿದರು.

ದೃಷ್ಟಿಲೋಪ ಮತ್ತು ವೃದ್ಧಾಪ್ಯ ಇರುವುದರಿಂದ ತಂದೆ ತಾಯಿ ಜೊತೆ ತೀರ್ಥಯಾತ್ರೆ ಮಾಡುವ ಸಂಕಲ್ಪ ಮಾಡಿದರು. ದೃಷ್ಟಿ ಲೋಪ ಮತ್ತು ವೃದ್ಧಾಪ್ಯ ಇರುವುದರಿಂದ ಬಿದಿರಿನ ದಂಡಕೆ ಎರಡು ಬುತ್ತಿ ಜೋಡಿಸಿ ತಮ್ಮ ತೀರ್ಥಯಾತ್ರೆಯ ಸಮಯದಲ್ಲಿ ಅದನ್ನು ತನ್ನ ಭುಜದ ಮೇಲೆ ಹೊತ್ತುಕೊಳ್ಳುತ್ತಾನೆ.

ತೀರ್ಥಯಾತ್ರೆ ಮಾಡುತ್ತಾ ಅಯೋಧ್ಯಾನಗರದ ಪ್ರದೇ ಶಕ್ಕೆ ಬಂದರು. ಅದೇ ಸಮಯದಲ್ಲಿ ದಶರಥ ಮಹಾರಾಜರು ಬೇಟೆಗಾಗಿ ಸರಯೂ ನದಿ ತೀರದಲ್ಲಿ ನೀರಿನ ಶಬ್ದ ಕೇಳಿ ಶಬ್ದ ವೇದಿ ವಿದ್ಯೆ ಪ್ರಾವೀಣ್ಯರಾದ ರಾಜರು ಆ ದಿಶೆಯಲ್ಲಿ ಬಾಣ ಪ್ರಯೋಗ ಮಾಡಿದರು.ರಾಜರ ಬಾಣ ಶ್ರವಣಕುಮಾರರ ದೇಹಕ್ಕೆ ತಗುಲಿ ಗಾಯವಾಗಿ ಏನು ನಡೆದಿದೆ? ಎಂದು ಆಶ್ಚರ್ಯ ಚಕಿತರಾದರು. ದಶರಥ ಮಹಾರಾಜರು ಅಲ್ಲಿ ಬಂದು ನೋಡಲು ಶ್ರವಣಕುಮಾರ ನೋವಿನಿಂದ ಬಳಲುತ್ತಿದ್ದರು.

ಅಯ್ಯೋ ಪ್ರಾಣಿ ಬೇಟೆಯಾಡಲು ಹೋಗಿ ಮನುಜನಿಗೆ ಹಾನಿ ಆಗಿದೆ ಎಂದು ಪಶ್ಚಾತ್ತಾಪಪಟ್ಟರು. ಶ್ರವಣಕುಮಾರ ರಾಜ ರಿಗೆ ತನ್ನ ತಂದೆ ತಾಯಿಯರ ಬಗ್ಗೆ ತಿಳಿಸಿ ಅವರಿಗೆ ನೀರಿನ ಅವಶ್ಯಕತೆ ಇದೆ!ದಯವಿಟ್ಟು ಅವರಿಗೆ ಉಪಚಾರ ಮಾಡಿ ಎಂದು ಬೇಡಿಕೊಂಡು ಪ್ರಾಣವ ಬಿಟ್ಟರು. ಕೊನೆ ಉಸಿರಿರುವವರೆಗೂ ತನ್ನ ನಿಷ್ಠೆ. ಮಾತೃ-ಪಿತೃ ಭಕ್ತಿ ,ಧರ್ಮನಿಷ್ಠೆ ಉಳ್ಳ ಶ್ರವಣ ಕುಮಾರರು ಧನ್ಯರು.

ಗಾಯತ್ರ್ಯಾಃ ನ ಪರಂ ಮಂತ್ರಃ, ನಾಮತುಃ ಪರದೈವ ತಮ್- ಗಾಯತ್ರಿ ಮಂತ್ರ ಮೀರಿದ ಮಂತ್ರ ಇಲ್ಲ ತಾಯಿಯನ್ನು ಮೀರಿದ ದೇವರಿಲ್ಲ. ಅನುದಿನ ಕಣ್ಣಿಗೆ ಕಾಣುವ ದೇವತೆಗಳು ಜನ್ಮ ಕೊಟ್ಟ ತಂದೆ-ತಾಯಿಗಿಂತ ದೇವರಿಲ್ಲ,ಉಪ್ಪಿಗಿಂತ ರುಚಿ ಇಲ್ಲ. ಜನ್ಮ ಕೊಟ್ಟ ತಂದೆ ತಾಯಿಯ ಸೇವೆ ಮಾಡಿ ಜಗತ್ತಿನ ತಂದೆ-ತಾಯಿಯಾದ ಉಮಾಮಹೇಶ್ವರರನ್ನು ಶರಣು ಬೇಡೋಣ !

ವಾಗರ್ಥಾವಿವ ಸಂಪೃಕ್ತೌ ವಾಗರ್ಥಃ
ಪ್ರತಿಪತ್ತಯೇ, ಜಗತಃ ಪಿತರೌ ವಂದೇ
ಪಾರ್ವತೀ ಪರಮೇಶ್ವರೌ॥

**ಶ್ರೀ ಕೃಷ್ಣಾರ್ಪಣಮಸ್ತು**





ಧಾರಾವಾಹಿ

# ಶ್ರೀ ವೇಂಕಟೇಶ್ವರಸ್ವಾಮಿ ಆಲಯ

## ಪ್ರಾಚೀನ ಕಾಲದ ಸಾಹಿತ್ಯದಲ್ಲಿ ಶ್ರೀವೇಂಕಟೇಶ್ವರಸ್ವಾಮಿ ಆಲಯ (ಕ್ರಿ.ಶ. ಮೊದಲ ಶತಮಾನದಿಂದ 9ನೇ ಶತಮಾನದವರೆಗೆ)

ಹೈಂದವ ಧರ್ಮಕ್ಕೆ ಈ ರೀತಿಯ ಸೇವೆಯನ್ನು ಸಲ್ಲಿಸಿದ್ದೇ ಅಲ್ಲದೆ ಅಚ್ಯುತ ರಾಯನು ತನ್ನ ರಾಜಧಾನಿಯಾದ ವಿಜಯ ನಗರದಿಂದ ಸ್ವಾಮಿಯ ಸೇವೆಯನ್ನು ಮಾಡಲು ನರ್ತಕಿಯರನ್ನು ಕಳುಹಿಸಿ,ಅವರು ಆಲಯದಿಂದ ದೊರೆಯುವ ಪ್ರಸಾದಗಳಿಂದ ಜೀವನವನ್ನು ನಡೆಸುವಂತೆ ಏರ್ಪಾಡು ಮಾಡಿದ.

ಹೀಗೆ ಅಚ್ಯುತರಾಯನಿಂದ ಶಕ 1453 ರ ಖರ ಸಂವತ್ಸರದಲ್ಲಿ (ಕ್ರಿ.ಶ,6-6-1531) ಕಳುಹಿಸಲ್ಪಟ್ಟವರಲ್ಲಿ ವಿದ್ವತ್ ಸಭಾ ರಾಯ ರಂಜಕ ಬಿರುದಾಂಕಿತ ಶ್ರೀರಂಗ ರಾಜನ ಮಗಳು ಕುಪ್ಪಾಯಿಯ ಮಗಳು ಮುದ್ದು ಕುಪ್ಪಾಯಿಯೂ ಒಬ್ಬಳು. (ಜಿ.ಟಿ-1) ಈಕೆ ತಿರುಪತಿಯಲ್ಲಿ ಶಾಶ್ವತವಾಗಿ ಇರುವಂತೆಯೂ,ಇವಳಿಗೆ ಗೋವಿಂದರಾಜಸ್ವಾಮಿ ಆಲಯದಿಂದ ದಿನವೂ ಒಂದು ತಳಿಗೆ ಪ್ರಸಾದ ನೀಡಬೇಕೆಂದೂ ಆಜ್ಞೆ ಹೊರಟಿದ್ದಿತು. ಆಕೆಯ ವಂಶಸ್ಥರು ಈ ರೀತಿಯಲ್ಲಿಯೇ ತಮ್ಮ ಸೇವೆಯನ್ನು ಮುಂದುವರಿಸಬೇಕೆಂದು ತಿಳಿಸಲಾಗಿದ್ದಿತು.

ಉತ್ತಿಡ ತಿಮ್ಮಯ್ಯನ ಮಗಳು ಹನುಮಾಸಾನಿ ಇಂತಹ ನರ್ತಕಿಯರಲ್ಲಿ ಇನ್ನೊಬ್ಬಳು. ತಿ.ತಿ.820 ನರ್ಪಣಗಳ ದಾನವನ್ನು ನೀಡಿದಳೆಂದೂ,ತಿರುಪತಿಯ ನಿವಾಸಿಯಾದ ಈಕೆಯು ದೇವರ ಸೇವೆಗಾಗಿ ಅಚ್ಯುತರಾಯನಿಂದ ಕಳುಹಿಸಲ್ಪಟ್ಟವಳೆಂದೂ ತಿಳಿಸುತ್ತದೆ.

ಕ್ರಿ.ಶ.1561 ರ ಒಂದು ಶಾಸನವು ಅರವೀಡು ತಿರುಮಲರಾಯನು ಆಲಯದ ಸಂಪಂಗಿ ಪ್ರದಕ್ಷಿಣೆಯಲ್ಲಿ ಒಂದು ಊಂಜಲ್ ಮಂಟಪವನ್ನು ನಿರ್ಮಿಸಿದ ಎಂದೂ (ಇಲ್ಲಿ ಮೊದಲೇ ಸಾಳುವನರಸಿಂಹನು ಊಂಜಲ್ ಸೇವೆಯನ್ನು ಆರಂಭಿಸಿದ್ದ) ತಿಳಿಸುತ್ತದೆ. (ತಿ.ತಿ. 633) ಆ ಕಾಲದಲ್ಲಿ ಆಲಯದಲ್ಲಿ ನಡೆಯುತ್ತಿದ್ದ ಉತ್ಸವಗಳನ್ನು ಈ ಶಾಸನವು ಹೆಸರಿಸುತ್ತದೆ. ಅವುಗಳೆಂದರೆ- ಪವಿತ್ರೋತ್ಸವ, ಸಹಸ್ರನಾಮಾರ್ಚನೆ, ಸಹಸ್ರ ಕಲಶಾಭಿಷೇಕ, ಅಧ್ಯಯನೋತ್ಸವ,ವಸಂತೋತ್ಸವ,ಊಂಜಲ್ಉತ್ಸವ, ಪೆಂಡ್ಲಿತಿರುನಾಳ್, ಲಕ್ಷ್ಮೀದೇವಿ ಉತ್ಸವ, ಕೋಡೈತಿರುನಾಳ್,ಪ್ಲವೋತ್ಸವ,ಪಲ್ಲವೋತ್ಸವ, ಫಲೋತ್ಸವ,ಮೇಷ ಸಂಕ್ರಮಣ,ಅಮಾವಾಸ್ಯೆ, ಪೂರ್ಣಿಮೆ,ಉತ್ತರ,ಮೂಲ,ಪೂರ್ವಾಷಾಢ, ಉತ್ತರಾಷಾಢ-ನಕ್ಷತ್ರ ದಿನಗಳೂ,ಶ್ರೀ ಜಯಂತಿ, ಉರಿ ಅಡಿ,ಉತ್ಥಾನದ್ವಾದಶಿ, ಅಲ್ಪಸಿ ಪುರಾಢಂ, ದೀಪಾವಳಿ,ಯುಗಾದಿ,ಕಾರ್ತೀಕ,ಮಕರ ಸಂಕ್ರಮಣ,ಪಡಿಯವೇಟ್ಟು,ತೈಪೂಸಂ,ತನ್ನೀರಮುದು. (ತಿ.ತಿ.633)ಕ್ರಿ.ಶ.1564ರ ಒಂದು ಶಾಸನವು ರಥಸಪ್ತಮಿ ಉತ್ಸವವನ್ನು (ಜಿ.ಟಿ.376) ಹೆಸರಿಸುತ್ತದೆ.

ಕ್ರಿ.ಶ.1586ರ ಒಂದು ಶಾಸನವು ಹೇಳುವಂತೆ ಒಬ್ಬಾನೊಬ್ಬ ಅವಸರದ ಚೆನ್ನಪ್ಪನೆಂಬುವವನು ಕಲ್ಯಾಣ ಮಂಟಪವನ್ನು ನಿರ್ಮಿಸಿದನು.(ತಿ.ತಿ.150)ಕ್ರಿ.ಶ.1614ಒಂದು ದಾಖಲೆಯು ಶ್ರೀರಾಮನವಮಿಯ ನಂತರದ ದಿನದಲ್ಲಿ ತಿರುಮಲೆಯ ವೆನ್ರುಮಲೈಯಿಟ್ಟಾನ್ ಮಂಟಪದಲ್ಲಿ ರಾಮ ಪಟ್ಟಾಭಿಷೇಕ ಮಹೋತ್ಸವವು ನಡೆಯುತ್ತಿತ್ತೆಂದು ತಿಳಿಸುತ್ತದೆ. ಉತ್ಸವದಲ್ಲಿ ವಾಯುಪುರಾಣ ಪಠಣ ಸಂಪ್ರದಾಯ ಇದ್ದಿತು. (ತಿ.ತಿ.686) ಕ್ರಿ.ಶ.1623ರ ಎರಡು ದಾಖಲೆಗಳು ಮಲ್ಲ ಅನಂತ ರಾಜನು ಸ್ವರ್ಣಾಶ್ವ, ಗಜ,

ಸಮರ ಭೂಪಾಲವಾಹನಗಳು,ಪದ್ಮಪೀಠ,ಉನ್ನತ ಕೇಳಿ ಮಂಟಪಗಳನ್ನು ನಿರ್ಮಿಸಿ ನೀಡಿದನೆಂದೂ ಮೆಟ್ಟಿಲ ಮಾರ್ಗದಲ್ಲಿನ ಗಾಳಿಗೋಪುರವನ್ನು ನಿರ್ಮಿಸಿದನೆಂದೂ ತಿಳಿಸುತ್ತವೆ. (6-25-26)ಇದೇ ರಾಜನು ಅಲಿಪಿರಿಯ ಬಳಿಯ ಕೊತ್ತ ಗೋಪುರವನ್ನೂ ನಿರ್ಮಿಸಿದ. (ಜಿ.ಟಿ. 279)

(ಮೇಲಿನ ಎರಡು ಪ್ಯಾರಾಗಳಲ್ಲಿನ ವಿಷಯ ಸದಾಶಿವ ರಾಯನ ಹಾಗೂ ನಂತರದ ಅರವೀಡು ಮನೆತನದ ಕಾಲದವು. ಶಾಸನ ಸಂಪುಟ - 5,6ಗಳಲ್ಲಿ ದಾಖಲಾಗಿರುವ ಅನುಕ್ರಮವಾಗಿ 168 (ಪುಟ-445)173 ಪು(459) ಹಾಗೂ 7 (ಪುಟ 45)18(ಪುಟ 103)ಹಾಗೂ 25,26(ಪುಟ 151)ರ. ಸಂಖ್ಯೆಯವುಗಳು- ಅನುವಾದಕ)

**ಸದಾಶಿವರಾಯನ ಕಾಲದ ತಿರುಮಲೆ**

ನಂತರದ ರಾಜನಾದ ಸದಾಶಿವರಾಯನ ಕಾಲದಲ್ಲಿ ತಿರುಮಲೆಯ ಆಲಯದ ಗೋಡೆಗಳ ಮೇಲೆ ಸುಮಾರು ನೂರ ಐವತ್ತು ಶಾಸನಗಳನ್ನು ಕೆತ್ತಿಸಲಾಗಿದೆ. ಇಲ್ಲಿನ ಪ್ರಶಸ್ತಿಗಳ ಒಂದು ವೈಶಿಷ್ಟ್ಯವೆಂದರೆ ಪೂರ್ವಪಶ್ಚಿಮ ದಕ್ಷಿಣ ಸಮುದ್ರಗಳ ವರೆಗಿನ ರಾಜನೆಂದು ಇವನನ್ನು ಕರೆದಿರುವುದು. ಭೂಭಾಗದ ದೃಷ್ಟಿಯಿಂದ ಸರಿಯಿರಬಹುದಾದರೂ ಇಂಡಿಯಾದ ಮೇಲ್ಮೈ ಲಕ್ಷಣದಲ್ಲಿಯೇ ಇಲ್ಲದ ಉತ್ತರ ಸಮುದ್ರದವರೆಗಿನ ಭೂಮಿಯನ್ನೂ ಇವನ ಆಳ್ವಿಕೆಗೆ ಸೇರಿಸಲಾಗಿರುವುದು.

ಈತನ ಶಾಸನಗಳಲ್ಲಿ ಕಂಡು ಬರುವ ಅತಿ ಹಿಂದಿನ ದಿನಾಂಕವೆಂದರೆ ಶಕ ವರ್ಷ 1463ರ ಪ್ಲವನಾಮ ಸಂವತ್ಸರದ ಕರ್ಕಾಟಕ ಮಾಸದ ಬಹುಳ ದ್ವಾದಶಿಯ ಪುನರ್ವಸು ನಕ್ಷತ್ರವಿದ್ದ ಗುರುವಾರದ್ದು.(ಕ್ರಿ.ಶ.21-7-1541) ಇದು (ತಿ.ತಿ. 659) ರಲ್ಲಿದ್ದು-ತಿರುಮಲೈ ಜೋಯಿಸರ ಮಗ ಶ್ರೀ ರಾಮ ಭಟ್ಟರ್ ಆಲಯಕ್ಕೆ ಮುತ್ತೂರು ಮತ್ತು ಇನ್ನೊಂದು ಗ್ರಾಮವನ್ನು ನೀಡಿದ್ದನ್ನು ಗುರುತಿಸುತ್ತದೆ.ಇದು ತಿ.ತಿ.504 ರಲ್ಲಿ ಇವನ ಪೂರ್ವಿಕನಾದ ಅಚ್ಯುತರಾಯನಿಗೆ ನೀಡಿದ ಈಚಿನ ದಿನಕ್ಕಿಂತ ಎಂದರೆ ಶಕವರ್ಷ 1463 ರ ಪ್ಲವ ಸಂವತ್ಸರದ ಮೀನ ಮಾಸದ ಶುದ್ಧ ಸಪ್ತಮಿ ಆರ್ದ್ರಾನಕ್ಷತ್ರದ ಗುರುವಾರಕ್ಕಿಂತ ಎಂಟು ತಿಂಗಳು ಹಿಂದಿನದು. (ಕ್ರಿ.ಶ. 1537-ಮಾರ್ಚ್ 23) ಸುಮಾರು ಐದು ವರ್ಷಗಳ ಮೊದಲೇ ಎಂದರೆ ಶಕವರ್ಷ 1459 ಹೇವಿಳಂಬಿ ನಾಮಸಂವತ್ಸರದಲ್ಲಿ (ಕ್ರಿ.ಶ.1537-ರಲ್ಲಿ) ಈತನನ್ನು ಯುವರಾಜನಾಗಿ ಘೋಷಿಸಲಾಯಿತು ಎಂದು ಹೇಳಲಾಗಿದೆ.

ಈ ಹೇಳಿಕೆಯು ದೇವರಾಯಪುರಕ್ಕೆ ಸದಾಶಿವಪುರ ವೆಂಬ ಹೆಸರು ನೀಡಿದ ಶಾಸನದಿಂದ (ಶಕ-1460) ಸಮರ್ಥಿತವಾಗುತ್ತದೆ.ಅರವೀಡು ವಂಶದವರೊಬ್ಬರ ದತ್ತಿಯನ್ನು ದಾಖಲಿಸುವ ಜಿ.ಟಿ 133 ರ ಶಾಸನವು ಸದಾಶಿವರಾಯನ ಇಲ್ಲಿನ ತೀರ ಈಚಿನ ಶಾಸನದ ವರ್ಷವನ್ನು ಶಕವರ್ಷ 1495 ಶ್ರೀಮುಖ ಸಂವತ್ಸರದ ಕುಂಭಮಾಸದ್ದು (ಕ್ರಿ.ಶ.1574 ಜನವರಿ 20). ಆದರೆ ಬೇರೆ ಕಡೆ ದೊರೆಯುವ ಒಂದು ಇತ್ತೀಚಿನ ಶಾಸನವು ಕ್ರಿ.ಶ.1575ಕ್ಕೆ ಸಮನಾದ ಶಕವರ್ಷ 1497ರ ಯುವನಾಮ ಸಂವತ್ಸರದ್ದು ಎಂದು ಗುರುತಿಸಿದ್ದು ಇದರಿಂದಾಗಿ ಒಂದನೇ ತಿರುಮಲನು ಮಹಾಮಂಡಲೇಶ್ವರ ಮೊದಲಾದ ಚಕ್ರವರ್ತಿಯ ಬಿರುದುಗಳನ್ನು ಪಡೆದ ಮೇಲೂ ಎಂದರೆ ಶಕ ವರ್ಷ 1492 ರ ನಂತರವೂ ಸದಾಶಿವರಾಯನು ನಾಮ ಮಾತ್ರ ರಾಜನಾಗಿದ್ದನೆಂಬುದನ್ನು ತಿಳಿಯಬಹುದು. ಹೀಗಾಗಿ ಸದಾಶಿವರಾಯನ ಆಳ್ವಿಕೆಯು ಅಚ್ಯುತರಾಯನ ಕೊನೆಯ ದಿನಗಳನ್ನೂ ಸೇರಿದಂತೆ ಶಕ 1459ರಿಂದ ಶಕ 1497 ರ ವರೆಗೆ ಸುಮಾರು 40 ವರ್ಷಕಾಲ ವಿಸ್ತರಿಸಿದ್ದಿತು ಎನ್ನಬರುತ್ತದೆ.

ಶ್ರೀ ವೆಂಕಟೇಶ್ವರಸ್ವಾಮಿ ಆಲಯಕ್ಕೆ ಸದಾಶಿವರಾಯನು ಎರಡು ಬಾರಿ ಭೇಟಿ ನೀಡಿದ ಎನ್ನಲಾಗಿದೆ. ಪ್ರಮಾದೀಚ ಸಂವತ್ಸರದ ಕುಂಭ ಮಾಸದಲ್ಲಿ ಎಂದರೆ ಶಕವರ್ಷ 1475ರಲ್ಲಿ (ಕ್ರಿ.ಶ. 1554-ಫೆಬ್ರವರಿ 3) ಈ ಹಿಂದೆ ಅಚ್ಯುತರಾಯನಿಂದ ತಿರುವೆಂಕಟ ಮುಡೈಯಾನನ ಸೇವೆಯಲ್ಲಿ ನಿವೇದನೆಯಾದ ಪ್ರಸಾದದ ದಾಯ ಭಾಗವು ಅನ್ನ ಸತ್ರದಲ್ಲಿ ಬಳಕೆಯಾಗುತ್ತಿದ್ದು ಅದರ ಒಂದು ಭಾಗವನ್ನು ಈಗ ಸದಾಶಿವರಾಯನು ಶ್ರೀನಿವಾಸನ್ ಮತ್ತಿತರಿಗೆ ಧಾರಾಪೂರ್ವಕವಾಗಿ ದಾನಮಾಡಿದ. ಈ ದಾನವು ಅಳಿಯ ರಾಮರಾಜದೇವನ ಹೆಸರಿನಲ್ಲಿಯೇ ನಡೆಯಿತು. (ತಿ.ತಿ. 393) ಶಕವರ್ಷ 1476 ರಲ್ಲಿನ ಆನಂದ ಸಂವತ್ಸರಕ್ಕೆ ಮೊದಲು ಪ್ರಮಾದೀಚ ಸಂವತ್ಸರದಲ್ಲಿನ ಮಕರ ಸಂಕ್ರಮಣ (ಕ್ರಿ.ಶ.1553 ಡಿಸೆಂಬರ್ 28 ರಂದು) ಸದಾಶಿವರಾಯನು ಎರಡನೆ ಬಾರಿಗೆ ತಿರುಮಲೆಗೆ ಬಂದಿರಬೇಕು.

ಪಡೈವೀಡು ರಾಜ್ಯ,ಜಿಂಜಿ,ತಿರುವಾಡಿ,ಚೋಳಮಂಡಲಂ, ತಿರುವಣ್ಣಾಮಲೈ,ಕಾಂಚಿಪುರಂ,ಚಂದ್ರಗಿರಿ ರಾಜ್ಯಂ, ಪಳೈಯಂ, ಪಾಲವೇರ್ಕಾಡು, ಪೊನಗಿರಿ (ಭುವನಗಿರಿ), ಮುದುಪನಕರ್ರೈ, ಪಟ್ಟಣ (ಕಾವೇರಿ ಪಟ್ಟಣ) ಪೆರುಂಕೋಡಿ ಸೀಮೈಗಳಿಂದ ತಿರುಪತಿಗೆ ಬಂದ 200 ಎತ್ತುಗಳು ಹೊತ್ತು ತಂದ ವಸ್ತುಗಳ ಮೇಲಣ ಉಳ್ಳಾಯಂ,ಪೇರಾಯಂ,ಮಕಮೈ,ಕೊಂಡೈ ಮೊದಲಾದ ಎಲ್ಲ ರೀತಿಯ ತೆರಿಗೆಗಳನ್ನೂ,ಜೊತೆಗೇ ಇತರ ಸೀಮೆಗಳಿಂದ ಬರುವ ವಸ್ತುಗಳ ಮೇಲಿನ ಆಯಂ,ಅರುಪ್ಪು ಉಳ್ಳಾಯಂ, ಪೇರಾಯಂ, ಮಕಮೈ ಮೂಲೈ ವೀಸಂ ಹಾಗೂ ತರಕು ಸುಂಕಗಳನ್ನೂ ಆತ್ರೇಯ ಗೋತ್ರದವನೂ ಆಪಸ್ಥಂಭ ಸೂತ್ರದವನೂ, ಯಜುರ್ವೇದ ಶಾಖೆಯವನೂ ಆದ ರಾಮರಾಜ-ಕೋನೇಟಯ್ಯನ ಮಗನಾದ ಶ್ರೀಮನ್ಮಮಹಾ ಮಂಡಲೇಶ್ವರ ಕೊಂಡರಾಜ ಕಟ್ಟಿಸಿದ ನಮ್ಮಾಳ್ವಾರ್ ರಾಮಾನುಜ ಕೂಟದ ಬಳಿಕೆಗೆಂದು ಧಾರಾಪೂರ್ವಕವಾಗಿ ಸರ್ವಮಾನ್ಯ ದತ್ತಿಯನ್ನಾಗಿ ಬಿಟ್ಟು ಕೊಟ್ಟನು. ಜೊತೆಗೇ ಈ ರಾಯಸದ ಸಂಗತಿಯನ್ನು ತಿರುಪತಿಯ ಸ್ಥಾನತ್ತಾರರಿಗೂ,ಎಲ್ಲ ಸೀಮೆಗಳ ಮುಖ್ಯಸ್ಥರಿಗೂ ತಿಳಿಸಲಾಯಿತು.ಈ ಸೀಮೆಗಳು ವಿಜಯನಗರದ ಮಧ್ಯಭಾಗದಲ್ಲಿದ್ದು ವಿಜಯನಗರ ಸಾಮ್ರಾಜ್ಯ ಇನ್ನೂ ಉತ್ತರಕ್ಕೆ ಕೃಷ್ಣಾನದಿಯ ವರೆಗೆ ದಕ್ಷಿಣಕ್ಕೆ ಸಮುದ್ರದವರೆಗೆ ಹರಡಿದ್ದಿತು.

- ಮುಂದುವರೆಯುತ್ತದೆ.

# ಸೂರ್ಯಾಷ್ಟಕಮ್

ಆದಿದೇವ ನಮಸ್ತುಭ್ಯಂ ಪ್ರಸೀದ ಮಮ ಭಾಸ್ಕರ।
ದಿವಾಕರ ನಮಸ್ತುಭ್ಯಂ ಪ್ರಭಾಕರ ನಮೋಸ್ತುತೇ ॥೧॥

ಸಪ್ತಾಶ್ವರಥಮಾರೂಢಂ ಪ್ರಚಂಡಂ ಕಶ್ಯಪಾತ್ಮಜಮ್।
ಶ್ವೇತಪದ್ಮಧರಂ ದೇವಂ ತಂ ಸೂರ್ಯಂ ಪ್ರಣಮಾಮ್ಯಹಮ್ ॥೨॥

ಲೋಹಿತಂ ರಥಮಾರೂಢಂ ಸರ್ವಲೋಕಪಿತಾಮಹಮ್।
ಮಹಾಪಾಪಹರಂ ದೇವಂ ತಂ ಸೂರ್ಯಂ ಪ್ರಣಮಾಮ್ಯಹಮ್ ॥೩॥

ತ್ರೈಗುಣ್ಯಂ ಚ ಮಹಾಶೂರಂ ಬ್ರಹ್ಮ ವಿಷ್ಣುಮಹೇಶ್ವರಮ್।
ಮಹಾಪಾಪಹರಂ ದೇವಂ ತಂ ಸೂರ್ಯಂ ಪ್ರಣಮಾಮ್ಯಹಮ್ ॥೪॥

ಬೃಂಹಿತಂ ತೇಜಸಾಂ ಪುಂಜಂ ವಾಯುಮಾಕಾಶಮೇವ ಚ।
ಪ್ರಭುಂ ಚ ಸರ್ವಲೋಕಾನಾಂ ತಂ ಸೂರ್ಯಂ ಪ್ರಣಮಾಮ್ಯಹಮ್ ॥೫॥

ಬಂಧೂಕಪುಷ್ಪ ಸಂಕಾಶಂ ಹಾರಕುಂಡಲ ಭೂಷಿತಮ್।
ಏಕಚಕ್ರಧರಂ ದೇವಂ ತಂ ಸೂರ್ಯಂ ಪ್ರಣಮಾಮ್ಯಹಮ್ ॥೬॥

ತಂ ಸೂರ್ಯಂ ಜಗತ್ಕರ್ತಾರಂ ಮಹಾತೇಜಃಪ್ರದೀಪನಮ್।
ಮಹಾಪಾಪಹರಂ ದೇವಂ ತಂ ಸೂರ್ಯಂ ಪ್ರಣಮಾಮ್ಯಹಮ್ ॥೭॥

ತಂ ಸೂರ್ಯಂ ಜಗತಾಂ ನಾಥಂ ಜ್ಞಾನ ವಿಜ್ಞಾನಮೋಕ್ಷದಮ್।
ಮಹಾಪಾಪಹರಂ ದೇವಂ ತಂ ಸೂರ್ಯಂ ಪ್ರಣಮಾಮ್ಯಹಮ್ ॥೮॥

ಸೂರ್ಯಾಷ್ಟಕಂ ಪಠೇನ್ನಿತ್ಯಂ ಗ್ರಹಪೀಡಾಪ್ರಣಾಶನಮ್।
ಅಪುತ್ರೋ ಲಭತೇ ಪುತ್ರಂ ದರಿದ್ರೋ ಧನವಾನ್ಭವೇತ್ ॥೯॥

ಆಮಿಷಂ ಮಧುಪಾನಂ ಚ ಯಃ ಕರೋತಿ ರವೇರ್ದಿನೇ।
ಸಪ್ತಜನ್ಮ ಭವೇದ್ರೋಗೀ ಜನ್ಮಜನ್ಮ ದರಿದ್ರತಾ ॥೧೦॥

ಸ್ತ್ರೀತೈಲಮಧುಮಾಂಸಾನಿ ಯೇ ತ್ಯಜಂತಿ ರವೇರ್ದಿನೇ।
ನ ವ್ಯಾಧಿಃ ಶೋಕದಾರಿದ್ರ್ಯಂ ಸೂರ್ಯಲೋಕಂ ಸ ಗಚ್ಛತಿ ॥೧೧॥

## ಇತಿ ಶ್ರೀ ಸೂರ್ಯಾಷ್ಟಕಮ್



ಇದು ಶಿವನು ಉಪದೇಶಿಸಿದ ಸೂರ್ಯಾಷ್ಟಕಮ್ ಈ ಸ್ತೋತ್ರವು ಸೂರ್ಯನೇ ಸೃಷ್ಟಿಕರ್ತ ಎಂದು ಪ್ರತಿಪಾದಿಸುತ್ತದೆ. ಸೂರ್ಯನಿಗೆ ಅಭಿಮುಖವಾಗಿ ನಿಂತು ಪ್ರತಿದಿನ ಬೆಳಗ್ಗೆ ಈ ಸ್ತೋತ್ರವನ್ನು ಪಠಿಸಿ, ಈ ಸ್ತೋತ್ರವನ್ನು ಪಠಿಸುವುದರಿಂದ ಗ್ರಹಪೀಡೆಗಳು ಹೊರಡುತ್ತವೆ. ಸಂಪತ್ತು ಮತ್ತು ಸಂತಾನ ಪ್ರಾಪ್ತಿಯಾಗಲಿದೆ. ರೋಗಗಳು ಕಡಿಮೆಯಾಗುತ್ತವೆ. ದುಃಖಗಳು ಮಾಯವಾಗುತ್ತವೆ. ವಿಶೇಷವಾಗಿ ಭಾನುವಾರದಂದು ಸೂರ್ಯನನ್ನು ಈ ಸ್ತೋತ್ರದಿಂದ ಪ್ರಾರ್ಥಿಸಿದರೆ ನಿಮಗೆ ಎಲ್ಲಾ ಫಲವು ಸಿಗುತ್ತದೆ.

# ಆದಿತ್ಯ ಹೃದಯಮ್

## ಧ್ಯಾನಂ:

**ನಮಸ್ಸವಿತ್ರೇ ಜಗದೇಕಚಕ್ಷುಷೇ**
**ಜಗತ್ಪ್ರಸೂತಿ - ಸ್ಥಿತಿ -ನಾಶ- ಹೇತವೇ।**
**ತ್ರಯಿಮಯಾಯ ತ್ರಿಗುಣಾತ್ಮಧಾರಿಣೇ**
**ವಿರಿಂಚಿ - ನಾರಾಯಣ - ಶಂಕರಾತ್ಮನೇ ॥**



ತತೋ ಯುದ್ಧ ಪರಿಶ್ರಾಂತಂ ಸಮರೇ ಚಿಂತಯಾ ಸ್ಥಿತಮ್ ।
ರಾವಣಂ ಚಾಗ್ರತೋ ದೃಷ್ಟ್ವಾ ಯುದ್ಧಾಯ ಸಮುಪಸ್ಥಿತಮ್ ॥೧॥
ದೈವತೈಶ್ಚ ಸಮಾಗಮ್ಯ ದ್ರಷ್ಟುಮಭ್ಯಾಗತೋ ರಣಮ್ ।
ಉಪಾಗಮ್ಯಾಬ್ರವೀದ್ರಾಮಮಗಸ್ತ್ಯೋ ಭಗವಾನೃಷಿಃ ॥೨॥
ರಾಮ ರಾಮ ಮಹಾಬಾಹೋ ಶೃಣು ಗುಹ್ಯಂ ಸನಾತನಮ್ ।
ಯೇನ ಸರ್ವಾನರೀನ್ ವತ್ಸ ಸಮರೇ ವಿಜಯಿಷ್ಯಸಿ ॥೩॥
ಆದಿತ್ಯಹೃದಯಂ ಪುಣ್ಯಂ ಸರ್ವಶತ್ರುವಿನಾಶನಮ್ ।
ಜಯಾವಹಂ ಜಪೇನ್ನಿತ್ಯಮಕ್ಷಯ್ಯಂ ಪರಮಂ ಶಿವಮ್ ॥೪॥
ಸರ್ವಮಂಗಳಮಾಂಗಳ್ಯಂ ಸರ್ವಪಾಪಪ್ರಣಾಶನಮ್ ।
ಚಿಂತಾಶೋಕಪ್ರಶಮನಮಾಯುರ್ವರ್ಧನಮ ॥೫॥
ರಶ್ಮಿ ಮಂತಂ ಸಮುದ್ಯಂತಂ ದೇವಾಸುರನಮಸ್ಕೃತಮ್ ।
ಪೂಜಯಸ್ವ ವಿವಸ್ವಂತಂ ಭಾಸ್ಕರಂ ಭುವನೇಶ್ವರಮ್ ॥೬॥
ಸರ್ವದೇವಾತ್ಮಕೋ ಹ್ಯೇಷ ತೇಜಸ್ವೀ ರಶ್ಮಿಭಾವನಃ
ಏಷ ದೇವಾಸುರಗಣಾಂಲ್ಲೋಕಾನ್ ಪಾತಿ ಗಭಸ್ತಿಭಿಃ ॥೭॥
ಏಷ ಬ್ರಹ್ಮಾ ಚ ವಿಷ್ಣುಶ್ಚ ಶಿವಃ ಸ್ಕಂದಃ ಪ್ರಜಾಪತಿಃ ।
ಮಹೇಂದ್ರೋ ಧನದಃ ಕಾಲೋ ಯಮಃ ಸೋಮೋ ಹ್ಯಪಾಂ ಪತಿಃ ॥೮॥
ಪಿತರೋ ವಸವಃ ಸಾಧ್ಯಾ ಹ್ಯಶ್ವಿನೌ ಮರುತೋ ಮನುಃ ।
ವಾಯುರ್ವಹ್ನಿಃ ಪ್ರಜಾಪ್ರಾಣ ಋತುಕರ್ತಾ ಪ್ರಭಾಕರಃ ॥೯॥
ಆದಿತ್ಯಃ ಸವಿತಾ ಸೂರ್ಯಃಖಗಃ ಪೂಷಾ ಗಭಸ್ತಿಮಾನ್ ।
ಸುವರ್ಣ ಸದೃಶೋ ಭಾನುರ್ಹಿರಣ್ಯರೇತಾ ದಿವಾಕರಃ ॥೧೦॥
ಹರಿದಶ್ವಃ ಸಹಸ್ರಾರ್ಚಿಃ ಸಪ್ತಸಪ್ತಿರ್ಮರೀಚಿಮಾನ್ ।
ತಿಮಿರೋನ್ಮಥನಃ ಶಂಭುಸ್ತ್ವಷ್ಟಾ ಮಾರ್ತಾಂಡ ಅಂಶುಮಾನ್ ॥೧೧॥
ಹಿರಣ್ಯಗರ್ಭಃ ಶಿಶಿರಸ್ತಪನೋ ಭಾಸ್ಕರೋ ರವಿಃ।
ಅಗ್ನಿಗರ್ಭೋಽದಿತೇಃ ಪುತ್ರಃ ಶಂಖಃ ಶಿಶಿರನಾಶನಃ ॥೧೨॥
ವ್ಯೋಮನಾಥಸ್ತಮೋಭೇದೀ ಋಗ್ಯಜುಃಸಾಮಪಾರಗಃ ।
ಘನವೃಷ್ಟಿರಪಾಂ ಮಿತ್ರೋ ವಿಂಧ್ಯವೀಥೀಪ್ಲವಂಗಮಃ ॥೧೩॥
ಆತಪೀ ಮಂಡಲೀ ಮೃತ್ಯುಃ ಪಿಂಗಳಃ ಸರ್ವತಾಪನಃ ।
ಕವಿರ್ವಿಶ್ವೋ ಮಹಾತೇಜಾ ರಕ್ತಃ ಸರ್ವಭವೋದ್ಭವಃ ॥೧೪॥
ನಕ್ಷತ್ರಗ್ರಹತಾರಾಣಾಮಧಿಪೋ ವಿಶ್ವಭಾವನಃ ।
ತೇಜಸಾಮಪಿ ತೇಜಸ್ವೀ ದ್ವಾದಶಾತ್ಮನ್ನಮೋಽಸ್ತುತೇ ॥೧೫॥
ನಮಃ ಪೂರ್ವಾಯ ಗಿರಯೇ ಪಶ್ಚಿಮಾಯಾದ್ರಯೇ ನಮಃ ।
ಜ್ಯೋತಿರ್ಗಣಾನಾಂ ಪತಯೇ ದಿನಾಧಿಪತಯೇ ನಮಃ ॥೧೬॥
ಜಯಾಯ ಜಯಭದ್ರಾಯ ಹರ್ಯಶ್ವಾಯ ನಮೋ ನಮಃ ।



ನಮೋ ನಮಃ ಸಹಸ್ರಾಂಶೋ ಆದಿತ್ಯಾಯ ನಮೋ ನಮಃ ॥೧೭॥
ನಮ ಉಗ್ರಾಯ ವೀರಾಯ ಸಾರಂಗಾಯ ನಮೋ ನಮಃ ।
ನಮಃಪದ್ಮ ಪ್ರಬೋಧಾಯ ಮಾರ್ತಾಂಡಾಯ ನಮೋ ನಮಃ ॥೧೮॥
ಬ್ರಹ್ಮೇಶಾನಾಚ್ಯುತೇಶಾಯ ಸೂರ್ಯಾಯಾದಿತ್ಯವರ್ಚಸೇ ।
ಭಾಸ್ವತೇ ಸರ್ವಭಕ್ಷಾಯ ರೌದ್ರಾಯ ವಪುಷೇ ನಮಃ ॥೧೯॥
ತಮೋಘ್ನಾಯ ಹಿಮಘ್ನಾಯ ಶತ್ರುಘ್ನಾಯಾಮಿತಾತ್ಮನೇ ।
ಕೃತಘ್ನಘ್ನಾಯ ದೇವಾಯ ಜ್ಯೋತಿಷಾಂ ಪತಯೇ ನಮಃ ॥೨೦॥
ತಪ್ತಚಾಮೀಕರಾಭಾಯ ವಹ್ನಯೇ ವಿಶ್ವಕರ್ಮಣೇ ।
ನಮಸ್ತಮೋಽಭಿನಿಘ್ನಾಯ ರುಚಯೇ ಲೋಕಸಾಕ್ಷಿಣೇ ॥೨೧॥
ನಾಶಯತ್ಯೇಷ ವೈ ಭೂತಂ ತದೇವ ಸೃಜತಿ ಪ್ರಭುಃ।
ಪಾಯತ್ಯೇಷ ತಪತ್ಯೇಷ ವರ್ಷತ್ಯೇಷ ಗಭಸ್ತಿಭಿಃ ॥೨೨॥
ಏಷ ಸುಪ್ತೇಷು ಜಾಗರ್ತಿ ಭೂತೇಷು ಪರಿನಿಷ್ಠಿತಃ ।
ಏಷ ಏವಾಗ್ನಿಹೋತ್ರಂ ಚ ಫಲಂ ಚೈವಾಗ್ನಿಹೋತ್ರಿಣಾಮ್ ॥೨೩॥
ವೇದಾಶ್ಚ ಕ್ರತವಶ್ಚೈವ ಕ್ರತೂನಾಂ ಫಲಮೇವ ಚ ।
ಯಾನಿ ಕೃತ್ಯಾನಿ ಲೋಕೇಷು ಸರ್ವ ಏಷ ರವಿಃ ಪ್ರಭುಃ ॥೨೪॥

## ಫಲಶ್ರುತಿ

ಏನಮಾಪತ್ಸು ಕೃಚ್ಛ್ರೇಷು ಕಾಂತಾರೇಷು ಭಯೇಷು ಚ ।
ಕೀರ್ತಯನ್ ಪುರುಷಃ ಕಶ್ಚಿನ್ನಾವಸೀದತಿ ರಾಘವ ॥೨೫॥
ಪೂಜಯಸ್ವೈನಮೇಕಾಗ್ರೋ ದೇವದೇವಂ ಜಗತ್ಪತಿಮ್ ।
ಏತತ್ತ್ರಿ ಗುಣಿತಂ ಜಪ್ತ್ವಾ ಯುದ್ಧೇಷು ವಿಜಯಿಷ್ಯಸಿ ॥೨೬॥
ಅಸ್ಮಿನ್ ಕ್ಷಣೇ ಮಹಾಬಾಹೋ ರಾವಣಂ ತ್ವಂ ವಧಿಷ್ಯಸಿ ।
ಏವಮುಕ್ತ್ವಾ ತದಾಽಗಸ್ತ್ಯೋ ಜಗಾಮ ಚ ಯಥಾಗತಮ್ ॥೨೭॥
ಏತಚ್ಛ್ರುತ್ವಾ ಮಹಾತೇಜಾ ನಷ್ಟಶೋಕೋಽಭವತ್ತದಾ ।
ಧಾರಯಾಮಾಸ ಸುಪ್ರೀತೋ ರಾಘವಃ ಪ್ರಯತಾತ್ಮವಾನ್ ॥೨೮॥
ಆದಿತ್ಯಂ ಪ್ರೇಕ್ಷ್ಯ ಜಪ್ತ್ವಾತು ಪರಂ ಹರ್ಷಮವಾಪ್ತವಾನ್ ।
ತ್ರಿರಾಚಮ್ಯ ಶುಚಿರ್ಭೂತ್ವಾ ಧನುರಾದಾಯ ವೀರ್ಯವಾನ್ ॥೨೯॥
ರಾವಣಂ ಪ್ರೇಕ್ಷ್ಯ ಹೃಷ್ಟಾತ್ಮಾ ಯುದ್ಧಾಯ ಸಮುಪಾಗಮತ್ ।
ಸರ್ವಯತ್ನೇನ ಮಹತಾ ವಧೇ ತಸ್ಯ ಧೃತೋಽಭವತ್ ॥೩೦॥
ಅಥ ರವಿರವದನ್ನಿರೀಕ್ಷ್ಯ ರಾಮಂ ಮುದಿತಮನಾಃಪರಮಂಪ್ರಹೃಷ್ಯಮಾಣಃ।
ನಿಶಿಚರಪತಿಸಂಕ್ಷಯಂ ವಿದಿತ್ವಾ ಸುರಗಣಮಧ್ಯಗತೋ ವಚಸ್ತ್ವ ರೇತಿ ॥ ೩೧॥

# ಇತಿ ಆದಿತ್ಯ ಹೃದಯಮ್

ಈ ಸ್ತೋತ್ರವು ಎಲ್ಲಾ ಶತ್ರುಗಳನ್ನು ನಾಶಮಾಡುತ್ತದೆ. ಆದಿತ್ಯನ ಹೃದಯವು ಆಂತರಿಕ ಶತ್ರುಗಳನ್ನು, ಬಾಹ್ಯ ಶತ್ರುಗಳನ್ನು ಮತ್ತು ನಕಾರಾತ್ಮಕತೆಯನ್ನು ನಾಶ ಮಾಡುವ ಶಕ್ತಿಯನ್ನು ಹೊಂದಿದೆ. ಧರ್ಮಾರ್ಥ ಆದಿತ್ಯ ಹೃದಯ ಕಾಮ ಮೋಕ್ಷವನ್ನು ಕೊಡುತ್ತಾನೆ. ಗಾಯತ್ರಿ ಮಂತ್ರದ ಸಾಕಾರವು ಆದಿತ್ಯನ ಹೃದಯವಾಗಿದೆ, ಮತ್ತು ಸಂಜೆಯ ಸಮಯದಲ್ಲಿ ಆದಿತ್ಯನ ಈ ಹೃದಯವನ್ನು ಜಪಿಸುವವರು ಗಾಯತ್ರಿ ಮಂತ್ರದ ಜಪಮಾಲೆಯನ್ನು ಪಡೆಯುತ್ತಾರೆ. ಆದಿತ್ಯನ ಹೃದಯವನ್ನು ಪಠಿಸುವವರು ಜಗತ್ತಿನಲ್ಲಿ ಶಾಶ್ವತ ಸಂಪತ್ತನ್ನು ಪಡೆಯುತ್ತಾರೆ ಮತ್ತು ಜೀವನದ ಅಂತ್ಯದಲ್ಲಿ ಮುಕ್ತಿಯನ್ನು ಪಡೆಯುತ್ತಾರೆ.

ಶ್ರೀಮತೇ ರಾಮಾನುಜಾಯನಮಃ



# ಶ್ರೀ ದೇವರಾಜಾಷ್ಟಕಮ್

ಶ್ರೀ ಮತ್ಕಾಞ್ಚೀಮುನಿಂವನ್ದೇ ಕಮಲಾಪತಿನನ್ದನಮ್।
ವರದಾಙ್ಘ್ರಸದಾಸಙ್ಗರಸಾಯನಪರಾಯಣಮ್।

ದೇವರಾಜದಯಾಪಾತ್ರಂಶ್ರೀಕಾಞ್ಚೀಪೂರ್ಣಮುತ್ತಮಮ್।
ರಾಮಾನುಜಮುನೇರ್ಮಾನ್ಯಂವನ್ದೇಽಹಂಸಜ್ಜನಾಶ್ರಯಮ್

ನಮಸ್ತೇ ಹಸ್ತಿಶೈಲೇಶ ಶ್ರೀಮನ್ನಮ್ಬುಜಲೋಚನಃ।
ಶರಣಂ ತ್ವಾಂ ಪ್ರಪನ್ನೋಽಸ್ಮಿ ಪ್ರಣತಾರ್ತಿಹರಾಚ್ಯುತ ॥೧॥

ಸಮಸ್ತಪ್ರಾಣಿಸನ್ತ್ರಾಣ ಪ್ರವೀಣ ಕರುಣೋಲ್ಬಣ।
ವಿಲಸನ್ತು ಕಟಾಕ್ಷಸ್ತೇ ಮಯ್ಯಸ್ಮಿನ್ ಜಗತಾಂಪತೇ ॥೨॥

ನಿನ್ದಿತಾಚಾರಕರಣಂ ನಿವೃತ್ತಂ ಕೃತ್ಯಕರ್ಮಣಃ।
ಪಾಪೀಯಾಂಸ ಮಮರ್ಯಾದಂ ಪಾಹಿಮಾಂ ವರದಪ್ರಭೋ ॥೩॥

ಸಂಸಾರಮರುಕಾನ್ತಾರೇ ದುರ್ವ್ಯಾಧಿವ್ಯಾಘ್ರಭೀಷಣೇ
ವಿಷಯಕ್ಷುದ್ರಗುಲ್ಮಾಢ್ಯೇ ತೃಷಾಪಾದಪಶಾಲಿನಿ ॥೪॥

ಪುತ್ರದಾರಗೃಹಕ್ಷೇತ್ರಮೃಗತೃಷ್ಣಾಮ್ಬುಪುಷ್ಕಲೇ।
ಕೃತ್ಯಾಕೃತ್ಯವಿವೇಕಾನ್ಧಂ ಪರಿಭ್ರಾನ್ತಮಿತಸ್ತತಃ ॥೫॥

ಅಜಸ್ರಂ ಜಾತತೃಷ್ಣಾರ್ತಮವಸನ್ನಾಙ್ಗಮಕ್ಷಮಮ್।
ಕ್ಷೀಣಶಕ್ತಿಬಲಾರೋಗ್ಯಂ ಕೇವಲಂ ಕ್ಲೇಶಸಂಶ್ರಯಮ್ ॥೬॥

ಸನ್ತಪ್ತಂ ವಿವಿಧೈರ್ದುಃಖೈರ್ದುರ್ವಚೈ ರೇವಮಾದಿಭಿಃ।
ದೇವರಾಜ ದಯಾಸಿನ್ಧೋ ದೇವದೇವ ಜಗತ್ಪತೇ ॥೭॥

ತ್ವದೀಕ್ಷಣಸುಧಾಸಿನ್ಧುವೀಚಿವಿಕ್ಷೇಪಶೀಕರೈಃ।
ಕಾರುಣ್ಯಮಾರುತಾನೀತೈಃ ಶೀತಲೈರಭಿಷಿಞ್ಚಮಾಮ್ ॥೮॥



ಈ ವರದರಾಜಾಷ್ಟಕಂ ಸ್ತೋತ್ರವನ್ನು ಓದಿದವರಿಗೆ ಶ್ರೀ ವರದರಾಜ ಸ್ವಾಮಿಯ ಕೃಪೆಯಿಂದ ಮಾನಸಿಕ ನೆಮ್ಮದಿ ದೊರೆಯುತ್ತದೆ. ಅವರು ಈ ಜಗತ್ತಿನಲ್ಲಿ ಇರುವವರೆಗೂ ಅವರು ಬಯಸಿದ ಲೌಕಿಕ ಸುಖಗಳನ್ನು ಪಡೆಯುತ್ತಾರೆ. ದೇಹವನ್ನು ತೊರೆದ ನಂತರ ಉತ್ತಮ ಪುರುಷಾರ್ಥವಾದ ಪರಮಾನಂದ ಪ್ರಾಪ್ತಿ ಪಡೆಯುತ್ತಾರೆ.



# ರಥಸಪ್ತಮಿ



- ನಾರಾಯಣ್ ಸತ್ಯೇಂದ್ರ ಕುಮಾರ್
9845672946

ಮಹಾನ್ ಭಾಸ್ಕರಾಯ ವಿದ್ಮಹೇ !
ದ್ಯುತಿಕರಾಯ ಧೀಮಹಿ !
ತನ್ನೋ ಆದಿತ್ಯಃ ಪ್ರಚೋದಯಾತ್ ॥

ಸೂರ್ಯಭಗವಾನನನ್ನು ವೇದೋಕ್ತವಾಗಿ ಈ ರೀತಿ ಸ್ತುತಿಸುತ್ತಾರೆ. ರಥ ಸಪ್ತಮಿಯ ಮೂಲ ಆರಾಧ್ಯ ದೇವರೇ ಭಗವಾನ್ ಭಾಸ್ಕರ. ಜಗತ್ತಿನ ಅಂಧ ಕಾರವನ್ನು ಕಳೆದು ಬೆಳಕನ್ನು ನೀಡಲು ಬಾನಲ್ಲಿ ಬೆಳಗುತ್ತಿರುವ ಭಾಸ್ಕರನ ಆರಾಧನೆಯ ಪುಣ್ಯ ದಿನವೇ ರಥಸಪ್ತಮಿ. ಮಕರಸಂಕ್ರಮಣ ಮತ್ತು ರಥ ಸಪ್ತಮಿ ಸೂರ್ಯನನ್ನು ಆರಾಧಿಸುವ ಹಬ್ಬಗಳು. ಅಂದರೆ ಮಾಘ ಮಾಸದ ಶುಕ್ಲಪಕ್ಷದ ಏಳನೆಯ ತಿಥಿಯ ದಿವಸ ಅರ್ಥಾತ್ ಸಪ್ತಮಿ ದಿನವೇ ರಥ ಸಪ್ತಮಿ. ರಥಸಪ್ತಮಿಗೆ 'ಮಾಘಸಪ್ತಮಿ'ಎಂದೂ ಕರೆಯುತ್ತಾರೆ. ಈ ದಿನ ವನ್ನೇ ಸೂರ್ಯಜಯಂತಿ ಎಂದೂ ಆಚರಿಸುತ್ತಾರೆ.ರಥಸಪ್ತಮಿಯಂದು ಮೊದಲ ಸೂರ್ಯಕಿರಣ ಭೂಸ್ಪರ್ಶವಾದ ಕೂಡಲೇ ಬ್ರಹ್ಮ ಮಾನಸಪುತ್ರರು ಅರುಣ ಸೂಕ್ತವನ್ನು ಹೇಳುತ್ತಾರೆ. ಸತ್ಯ ಲೋಕದಲ್ಲಿ ಮಹಾ ತಾಯಿ ಶಾರದೆ ವೀಣೆಯ ಝೇಂಕಾರ ಮಾಡುತ್ತಾಳೆ.ಅಂತೆಯೇ ಸಾಗರದ ಅಲೆಗಳು ಉಕ್ಕೇ ರುವುದರ ಮೂಲಕ ಹರ್ಷವನ್ನು ವ್ಯಕ್ತಪಡಿಸುತ್ತವೆ.ಈ ದಿನವನ್ನು ಸೂರ್ಯಾ ರಾಧನೆಗೆ ವಿಶೇಷ ಪರ್ವದಿನವೆಂದು ಪರಿಗಣಿಸಿದ್ದಾರೆ. ಅಂದು ಸೂರ್ಯನು ಸಮಭಾಜಕ ರೇಖೆಯನ್ನು ಉತ್ತರಾಭಿಮುಖವಾಗಿ ಹಾದು ಹೋಗುವ ಸಮಯವಾಗಿರುತ್ತದೆ. ಅಂದರೆ ಇಂದಿನಿಂದ ಹಗಲು ಮತ್ತು ರಾತ್ರಿಗಳೆರಡು ಸಮ ಪ್ರಮಾಣದಲ್ಲಿ ಇರುತ್ತದೆ. ಇನ್ನು ಸ್ವಲ್ಪ ವಿವರವಾಗಿ ಹೇಳಬೇಕೆಂದರೆ, ರಥಸಪ್ತಮಿ ಎಂದರೆ ಸೂರ್ಯ ಭಗವಾನನು ಚಾಂದ್ರ ಮಾನ ಸಂವತ್ಸರ ಹನ್ನೊಂದನೆಯ ಮಾಸದಲ್ಲಿ ಅಂದರೆ ಮಾಘ ಉತ್ತರ ದಿಕ್ಕಿನಲ್ಲಿ ಮಾಸದ ಶುಕ್ಲ ಪಕ್ಷದ ಸಪ್ತಮಿ ತಿಥಿಯ ದಿನದಂದು ಸಪ್ತಾಶ್ವಗಳಿಂದ ಸಜ್ಜಾದ ರಥ ವನ್ನೇರುವ ದಿವಸಕ್ಕೆ ರಥಸಪ್ತಮಿ ಎಂದು ಕರೆಯುತ್ತಾರೆ.

ಹೇಗೆ ಮಹಾವಿಷ್ಣುವಿಗೆ ತುಳಸಿಯು ಪ್ರಿಯವಾದುದಾಗಿದೆಯೋ ಹಾಗೆ ಸೂರ್ಯ ಭಗವಾನನಿಗೆ ಎಕ್ಕ(ಅರ್ಕ) ಸಸ್ಯವು ಪ್ರಿಯವಾದುದಾಗಿದೆ. ರಥ ಸಪ್ತಮಿ ದಿನದಂದು ಸೂರ್ಯೋದಯಕ್ಕೆ ಮುನ್ನವೇ ಸ್ನಾನ ಮಾಡುವಾಗ ಏಳು ಎಕ್ಕದ ಎಲೆಗಳನ್ನು ದೇಹದ ಅಂಗಗಳ ಮೇಲೆ ಇಟ್ಟುಕೊಂಡು ಸೂರ್ಯನನ್ನು ಧ್ಯಾನ ಮಾಡುತ್ತಾ ಸ್ನಾನವನ್ನು ಮಾಡಬೇಕು. ಸ್ನಾನವನ್ನು ಮಾಡುವಾಗ ಮಂತ್ರವನ್ನು ಹೇಳಿಕೊಳ್ಳಬೇಕು.ಸೂರ್ಯ ಉದಯಿಸುವು ದಕ್ಕೂ ಮುನ್ನವೇ ತಲೆ, ಭುಜ, ಕತ್ತು, ಕಂಕುಳ, ತೊಡೆ ಪಾದಗಳ ಮೇಲೆ ಬಿಳಿ ಎಕ್ಕದ ಎಲೆಯನ್ನು(ಶ್ವೇತಾರ್ಕ) ಇಟ್ಟುಕೊಂಡು ಅಭ್ಯಂಜನ ಸ್ನಾನವನ್ನು ಮಾಡಬೇಕು. ರಥಸಪ್ತಮಿಯ ದಿವಸ ಎಕ್ಕದ ಎಲೆ ಗಳ ಸ್ನಾನ ಸಮಯದಲ್ಲಿ ಹೇಳಿಕೊಳ್ಳಬೇಕಾದ ಶ್ಲೋಕ "ಸಪ್ತ ಸಪ್ತ ಮಹಾ ಸಪ್ತ ಸಪ್ತ ದ್ವೀಪಾ ವಸುಂಧರಾ। ಸಪ್ತಾರ್ಕ ಪರ್ಣ ಮಾದಾಯ ಸಪ್ತಮ್ಯಾಂ ಸ್ನಾನಂ ಮಾಚರೇತ್॥" ಅದೇ ರೀತಿ ಮತ್ತೊಂದು ಮಂತ್ರ "ಯದ್ಯಜ್ಜನ್ಮ ಕೃತಂ ಪಾಪಂ ಮಯಾ ಸ ಪ್ತಸು ಜನ್ಮ ಸುತನ್ಮೇ। ರೋಗಂ ಚ ಶೋಕಂ ಚ ಮಾಕರೀ ಹಂತು ಸಪ್ತಮೀ॥"ಈ ರೀತಿ ಮಂತ್ರ ಜಪ ಮಾಡಿ ಸ್ನಾನ ವನ್ನು ಮಾಡುವು ದರಿಂದ ಏಳು ಜನ್ಮದ ಕಾಯ ಕಾದಿ ಏಳು ವಿಧ ವಾದ ಪಾಪ ನಿವೃತ್ತಿಯಾಗುತ್ತದೆ. ಸ್ನಾನ ನಂತರ ಶುದ್ಧ ವಸ್ತ್ರಗಳನ್ನು ಧರಿಸಿ ಪೂರ್ವಾ ಭಿಮುಖವಾಗಿ ಪ್ರತ್ಯಕ್ಷ ದೈವವಾದ ಸೂರ್ಯದೇವನಿಗೆ ನಮ ಸ್ಕರಿಸಿ ಪ್ರಾರ್ಥನೆಯನ್ನು ಸಲ್ಲಿಸುತ್ತಾರೆ."ಸಪ್ತಮೀ ಸಹಿತೋ ದೇವಾಗೃಹಾಣಾರ್ಘ್ಯಂ ದಿವಾಕರಃ" ಎನ್ನುವ ಈ ಶ್ಲೋಕವನ್ನು ಶ್ರದ್ಧಾಭಕ್ತಿಯಿಂದ ಜಪಿಸುತ್ತಾ ಶ್ರೀಸೂರ್ಯನಾರಾಯಣ ಅರ್ಘ್ಯ ವನ್ನು ಪ್ರದಾನಿಸಬೇಕು. ರಥಸಪ್ತಮಿ ವ್ರತಾ ಚರಣೆಯ ಸಮಯದಲ್ಲಿ ಶ್ರೀಕೃಷ್ಣ ಭಗವಾನ



ಯುಧಿಷ್ಠಿರನಿಗೆ ಹೇಳಿ ಕೊಟ್ಟ ಸೂಕ್ತಗಳನ್ನು ಭಕ್ತಿಯಿಂದ ಜಪಿಸ ಬೇಕು. ಅರ್ಥಾತ್ ಸೂರ್ಯ ಸೂಕ್ತ, ಪುರುಷಸೂಕ್ತ,ಅರುಣ ಸೂಕ್ತ, ಭಾಸ್ಕರ ಶತಪದಿ,ನಾರಾಯಣ ಸೂಕ್ತ,ಆದಿತ್ಯ ಹೃದಯ ಪಾರಾಯಣೆ,ಗಾಯತ್ರಿ ಸೂರ್ಯ ಶತಕಮ್,ಸಹಸ್ರನಾಮ ಜಪವನ್ನು ಜಪಿಸಿ ಸೂರ್ಯಭಗವಾನನ ಉಪಾಸನೆಯನ್ನು ಮಾಡುತ್ತಾರೆ.

ಇನ್ನು ಸೂರ್ಯನ ರಥದ ಕುರಿತಾಗಿ ಹೇಳುವುದಾದರೆ ಧರ್ಮ ದೀಪಿಕೆಯಲ್ಲಿ ಸೂರ್ಯನ ರಥವನ್ನು 'ರಥವರ' (ಶ್ರೇಷ್ಠ ರಥ) ಎಂದು ಕರೆಯಲಾಗಿದೆ.ಈ ರಥವರ ಉತ್ತರ ದಿಕ್ಕಿನಲ್ಲಿ ಸಾಗುವುದರಿಂದ, ಈ ರಥದ ಒಡೆಯನಾದ ಸೂರ್ಯಭಗ ವಾನ ನನ್ನು ಆರಾಧಿಸುವ ದಿನವಾದ ಸಪ್ತಮೀ ಎನ್ನುವುದು 'ರಥಸಪ್ತಮಿ' ಎಂದರ್ಥವಾಗುತ್ತದೆ. ಈ ದಿನಕ್ಕೆ ಭಾನು ಸಪ್ತಮಿ, ಅರ್ಕ ಸಪ್ತಮಿ ಎಂದೂ ಕರೆಯುತ್ತಾರೆ, ಮತ್ಸ್ಯ ಪುರಾಣದಲ್ಲಿ ಈ ದಿನವನ್ನು 'ಮಹತೀ' ಎಂದು ಸಂಬೋಧಿಸಲಾಗಿದೆ. ಅದೇ ರೀತಿ ಪುತ್ರ ಸಪ್ತಮಿ, ಸಪ್ತ ಸಪ್ತಮೀ ಎಂದು ಕರೆಯುತ್ತಾರೆ ಈ ಪರ್ವದಿನಕ್ಕೆ ಇನ್ನೊಂದು ಹೆಸರು 'ಅಚಲಾಸಪ್ತಮಿ'ಎಂದು ಕರೆಯುತ್ತಾರೆ ಎಂದರೆ ಇದು ಅಚಲವಾದ ಅಂದು ಸೂರ್ಯಭಗವಾನನನ್ನು ಆರಾಧಿಸುವವರಿಗೆ ಸ್ಥಿರವಾದ ಫಲವು ಪ್ರಾಪ್ತಿಯಾಗುತ್ತದೆ.

ರಥ ಸಪ್ತಮಿಯ ದಿನದಂದು ಸೂರ್ಯಭಗವಾನನು ತನ್ನ ರಥಕ್ಕೆ ಅರುಣನನ್ನು ಸಾರಥಿಯನ್ನಾಗಿಸಿಕೊಂಡು,ಗಾಯತ್ರಿ, ಬೃಹತಿ, ಉಷ್ಣಿಕ್, ಜಗತೀ, ತ್ರಿಷ್ಟುಪ್, ಅನುಷ್ಟುಪ್ ಮತ್ತು ಪಂಕ್ತಿ ಗಳನೆನ್ನುವ ಏಳು ಛಂದಸ್ಸುಗಳ ನಾಮಾಂಕಿತವನ್ನು ಹೊಂದಿ ರುವ ಅಶ್ವಗಳನ್ನು ಹೂಡಿ ಸಂಚಾರಕ್ಕೆ ಹೊರಡುತ್ತಾನೆ. ಈ ಸಪ್ತ ಅಶ್ವಗಳನ್ನು ಸಪ್ತ ಕಾಮನ ಬಿಲ್ಲಿಗೆ ಹೋಲಿಸಲಾಗಿದೆ ಹಾಗೂ ವಾರದ ಏಳು ದಿನಗಳನ್ನು ಸೂಚಿಸುತ್ತದೆ. ಸೂರ್ಯರಥದ ಹನ್ನೆ ರಡು ಗಾಲಿಗಳು ಹನ್ನೆರಡು ರಾಶಿಗಳಿಗೆ ಹೋಲಿಸಲಾಗಿದೆ. ಉತ್ತರಾ ಯಣದಲ್ಲಿ ಸೂರ್ಯಭಗವಾನನು ದಿಕ್ಕು ಬದಲಾಯಿಸುತ್ತಾನೆ. ರಥಸಪ್ತಮಿ ಎನ್ನುವುದು ವಸಂತ ಕಾಲದ ಮುನ್ಸೂಚನೆಯೇ ಆಗಿದೆ. ರಥಸಪ್ತಮಿ ದಿನದಂದು ದೇಶದ ಅನೇಕ ದೇವ ಸ್ಥಾನಗಳಲ್ಲಿ ಭಗವಂತನಿಗೆ ವಿಶೇಷ ಪೂಜೆಯನ್ನು ಮಾಡಿ ಭಗವಂತನ ಉತ್ಸವ ಮೂರ್ತಿಗಳನ್ನು ರಥದಲ್ಲಿಟ್ಟು ವಿಶೇಷ ಮೆರವಣಿಗೆ ಮಾಡಿ ಸಂಭ್ರಮಿಸುತ್ತಾರೆ. ಅದರಲ್ಲೂ ಶ್ರೀರಂಗ ಪಟ್ಟಣ, ಮೇಲುಕೋಟೆ, ಶ್ರೀರಂಗಂ, ತಿರುಮಲೆ ತಿರುಪತಿ ದೇವಸ್ಥಾನಗಳಲ್ಲಿ ರಥಸಪ್ತಮಿಯನ್ನು ವಿಶೇಷ ಹಬ್ಬವಾಗಿ ಆಚರಿಸುತ್ತಾರೆ.

ಸೂರ್ಯ ಭಗವಾನ ಕುದುರೆಯನ್ನೇರಿ ಪ್ರತಿ ದಿನವೂ ಹಗಲು 7 ಲೋಕವನ್ನು ರಾತ್ರಿ 7 ಲೋಕವನ್ನು ಸುತ್ತುತ್ತಿರು ವನು. ಹೀಗೆ ಎಡಬಿಡದೆ ಲೋಕಗಳನ್ನು ಇಂದಿಗೂ ಸುತ್ತುತ್ತಿ ರುವ ಪರಿಪಾಠವಿದೆ.ರಥಸಪ್ತಮಿ ದಿನದಂದು ಸೂರ್ಯ ನನ್ನು ಆರಾಧಿಸಿ ದೇವತೆಗಳು ಪಾಯಸವನ್ನು ನೈವೇದ್ಯ ಮಾಡಿ ಪ್ರಾರ್ಥಿಸಿದರು. (ಈ ರೀತಿಯಾಗಿ ನೈವೇದ್ಯ ಮಾಡಿದ ದಿನ ಮೇಷ ಸಂಕ್ರಮಣ, ಚೈತ್ರಮಾಸ, ಚಿಗುರುವ ಕಾಲ. ಆಗ ತಾನೇ ಚಿಗುರಿದ ಗೋಧಿಯ ಧಾನ್ಯದ ತೆನೆಯಿಂದ ಮಾಡಿದ ಪಾಯಸವನ್ನೇ ನೈವೇದ್ಯ ಮಾಡಿದ್ದರು) ಇದರಿಂದ ಸಂತುಷ್ಟನಾದ ಸೂರ್ಯ ಭಗವಾನ ಗೋಧಿಯನ್ನೇ ತನ್ನ ಧಾನ್ಯವನ್ನಾಗಿ ಸ್ವೀಕರಿಸಿ ಅದರಲ್ಲಿ ತನ್ನ ಪ್ರಭಾವವನ್ನು ಬೀರಿದನು. ಇಂದಿಗೂ ಯಾರದಾದರೂ ಮನೆಯಲ್ಲಿ ಅನಾ ರೋಗ್ಯ ಪೀಡಿತರಾಗಿ ಬಳಲುತ್ತಿದ್ದರೆ.ರವಿವಾರದಂದು ಮುಂಜಾನೆ ಗೋಧಿಯ ಪಾಯಸವನ್ನು ತಯಾರು ಮಾಡಿ ಶ್ರದ್ಧಾ ಭಕ್ತಿಯಿಂದ ಪೂಜಿಸಿ ಅರ್ಪಿಸಿ ನಂತರ ರೋಗಿಗೆ ಹಾಗೂ ಮನೆಯವರೆಲ್ಲರೂ ಸೇವಿಸುವುದರಿಂದ ಆರೋಗ್ಯ ಸುಧಾರಿಸುತ್ತದೆ ಎನ್ನುವುದು ಅಂದಿನ ಕಾಲದಿಂದಲೂ ಬಂದಿ ರುವ ವಾಡಿಕೆ ಇದು ಸತ್ಯ. ವಾಚಕರೆ ನೀವು ಕೂಡ ಪ್ರತಿ ದಿನವೂ ಸೂರ್ಯನ ಆರಾಧನೆ ಮಾಡಿ ಮತ್ತು ಸೂರ್ಯ ಭಗವಾನರಿಗೆ ಅರ್ಘ್ಯವನ್ನು ನೀಡಿ ಅನುಗ್ರಹವನ್ನು ಹೊಂದಿರಿ.



## ಶ್ರೀನಿವಾಸಮಂಗಾಪುರಂ ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು

**2024, ಫೆಬ್ರವರಿ 29 ರಿಂದ ಮಾರ್ಚ್ 08 ರ ವರೆಗೆ**

**29-02-2024 ಗುರುವಾರ**
ಹಗಲು: ಧ್ವಜಾರೋಹಣ,
ರಾತ್ರಿ: ದೊಡ್ಡಶೇಷವಾಹನ

**01-03-2024 ಶುಕ್ರವಾರ**
ಹಗಲು: ಚಿಕ್ಕಶೇಷವಾಹನ
ರಾತ್ರಿ: ಹಂಸವಾಹನ

**02-03-2024 ಶನಿವಾರ**
ಹಗಲು: ಸಿಂಹವಾಹನ
ರಾತ್ರಿ: ಮುತ್ತಿನಚಪ್ಪರವಾಹನ

**03-03-2024 ಭಾನುವಾರ**
ಹಗಲು: ಕಲ್ಪವೃಕ್ಷವಾಹನ
ರಾತ್ರಿ: ಸರ್ವಭೂಪಾಲವಾಹನ

**04-03-2024 ಸೋಮವಾರ**
ಹಗಲು: ಪಲ್ಲಕ್ಕಿಯಲ್ಲಿ ಮೋಹಿನೀ ಅವತಾರೋತ್ಸವ
ರಾತ್ರಿ: ಗರುಡವಾಹನ

**05-03-2024 ಮಂಗಳವಾರ**
ಹಗಲು: ಹನುಮದ್ವಾಹನ,
ರಾತ್ರಿ: ಗಜವಾಹನ

**06-03-2024 ಬುಧವಾರ**
ಹಗಲು: ಸೂರ್ಯಪ್ರಭವಾಹನ
ರಾತ್ರಿ: ಚಂದ್ರಪ್ರಭವಾಹನ

**07-03-2024 ಗುರುವಾರ**
ಹಗಲು: ರಥೋತ್ಸವ
ರಾತ್ರಿ: ಅಶ್ವವಾಹನ

**08-03-2024 ಶುಕ್ರವಾರ**
ಹಗಲು: ಚಕ್ರಸ್ನಾನ,
ರಾತ್ರಿ: ಧ್ವಜಾವರೋಹಣ.



## ತಿರುಪತಿ ಶ್ರೀ ಕಪಿಲೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು

**2024, ಮಾರ್ಚ್ 01 ರಿಂದ ಮಾರ್ಚ್ 10 ರ ವರೆಗೆ**

**01-03-2024 ಶುಕ್ರವಾರ**
ಹಗಲು: ಧ್ವಜಾರೋಹಣ,
ರಾತ್ರಿ: ಹಂಸ ವಾಹನ

**02-03-2024 ಶನಿವಾರ**
ಹಗಲು: ಸೂರ್ಯಪ್ರಭವಾಹನ
ರಾತ್ರಿ: ಚಂದ್ರಪ್ರಭವಾಹನ.

**03-03-2024 ಭಾನುವಾರ**
ಹಗಲು: ಭೂತವಾಹನ
ರಾತ್ರಿ: ಸಿಂಹವಾಹನ

**04-03-2024 ಸೋಮವಾರ**
ಹಗಲು : ಮಕರವಾಹನ
ರಾತ್ರಿ : ಶೇಷವಾಹನ

**05-03-2024 ಮಂಗಳವಾರ**
ಹಗಲು: ತಿರುಚ್ಚಿ ಉತ್ಸವ
ರಾತ್ರಿ: ಅಧಿಕಾರನಂದಿ ವಾಹನ

**06-03-2024 ಬುಧವಾರ**
ಹಗಲು: ವ್ಯಾಘ್ರವಾಹನ
ರಾತ್ರಿ: ಗಜವಾಹನ

**07-03-2024 ಗುರುವಾರ**
ಹಗಲು: ಕಲ್ಪವೃಕ್ಷವಾಹನ
ರಾತ್ರಿ: ಅಶ್ವವಾಹನ

**08-03-2024 ಶುಕ್ರವಾರ**
ಹಗಲು: ರಥೋತ್ಸವ
ರಾತ್ರಿ: ನಂದಿವಾಹನ (ಮಹಾಶಿವರಾತ್ರಿ)

**09-03-2024 ಶನಿವಾರ**
ಹಗಲು: ಪುರುಷಾಮೃಗ ವಾಹನ
ರಾತ್ರಿ: ಕಲ್ಯಾಣೋತ್ಸವ,ತಿರುಚ್ಚಿಉತ್ಸವ

**10-03-2024 ಭಾನುವಾರ**
ಹಗಲು: ಸೂರ್ಯಪ್ರಭವಾಹನದಲ್ಲಿ
ನಟರಾಜಸ್ವಾಮಿ,ತ್ರಿಶೂಲಸ್ನಾನ
ರಾತ್ರಿ: ಧ್ವಜಾವರೋಹಣ
ರಾವಣಾಸುರ ವಾಹನ

ತಿರುಮಲ ತಿರುಪತಿ ದೇವಸ್ಥಾನಗಳು

# ಶ್ರೀ ವೆಂಕಟೇಶ್ವರ ಅನ್ನಪ್ರಸಾದ ಟ್ರಸ್ಟ್

## (ಒಂದು ದಿನದ ದೇಣಿಗೆ ಕೊಡುವ ಯೋಜನೆ)





ಅನ್ನವೇ ಪರಬ್ರಹ್ಮ ಸ್ವರೂಪ, ಹಸಿದವನಿಗೆ ಅನ್ನ ನೀಡುವುದಕ್ಕಿಂತ ಉತ್ತಮವಾದ ಪುಣ್ಯ ಮತ್ತೊಂದಿಲ್ಲ. ತಿರುಮಲೆ ತಿರುಪತಿ ದೇವಸ್ಥಾನವು ತಿರುಮಲೆ ಮತ್ತು ತಿರುಚಾನೂರಿನಲ್ಲಿ ನಿತ್ಯವೂ ಅನ್ನಪ್ರಸಾದ ವಿತರಣೆಯನ್ನು ನಡೆಸುತ್ತಿದೆ. ಈ ಕಾರ್ಯಕ್ಕೆ ಅನೇಕ ದಾನಿಗಳು ಉದಾರವಾಗಿ ದೇಣಿಗೆ ನೀಡುತ್ತಾರೆ, ಎಂಬುದು ತಿಳಿದಿರುವ ವಿಷಯ! ಪ್ರತಿಯೊಬ್ಬರಿಗೂ ಭೂಮಿಯನ್ನು ದಾನ ಮಾಡಲು ಸಾಧ್ಯವಿಲ್ಲ. ಇದನ್ನು ಗಮನಿಸಿದ ತಿ.ತಿ.ದೇ., ಒಂದು ದಿನದ ಅನ್ನಪ್ರಸಾದದ ವೆಚ್ಚವನ್ನು ಭಕ್ತರಿಂದ ಕಾಣಿಕೆಯಾಗಿ ಸ್ವೀಕರಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಭಕ್ತರು ಸ್ಪಂದಿಸಿ ! ಮತ್ತೊಬ್ಬರ ಹಸವನ್ನು ತೀರಿಸಿ! ಮಾಧವನ ಕೃಪೆಗೆ ಪಾತ್ರರಾಗಿ !!!

ದೇಣಿಗೆಯನ್ನು ವ್ಯಕ್ತಿಗಳು ಮಾತ್ರವಲ್ಲದೆ ಕಂಪನಿಗಳು, ಸಂಸ್ಥೆಗಳು ಮತ್ತು ಟ್ರಸ್ಟ್‌ಗಳು ಸಂಯುಕ್ತವಾಗಿಯೂ ಸಹ ವಿರಾಳವನ್ನು ನೀಡಬಹುದು.

ದಾನಿಗಳು ದೈನಂದಿನ ಮೊತ್ತವನ್ನು (ರೂ. 38 ಲಕ್ಷಗಳು ) ಅಲ್ಪಾಹಾರ - (ರೂ. 8 ಲಕ್ಷಗಳು) ಮಧ್ಯಾಹ್ನ ಭೋಜನ (ರೂ. 15 ಲಕ್ಷಗಳು ) ಅಥವಾ ರಾತ್ರಿ ಭೋಜನ (ರೂ. 15 ಲಕ್ಷಗಳು) ವಿತರಿಸಲು ಆಯ್ಕೆ ಮಾಡಬಹುದು. ದಾತರಿಗೆ ತಿ.ತಿ.ದೇ., ದೇವಸ್ಥಾನದವರು ಕಲ್ಪಿಸುವ ಸೌಕರ್ಯಗಳು ಒಂದೇ ಮಾದರಿಯಲ್ಲಿ ಇರುತ್ತದೆ.


**ಹೆಚ್ಚಿನ ವಿವರಗಳಿಗಾಗಿ :**

ಉಪಕಾರ್ಯನಿರ್ವಹಣಾಧಿಕಾರಿ (ಡೋನಾರ್‌ಸೆಲ್) ಎಫ್.ಎ.ಸಿ.,

ತಿ.ತಿ.ದೇ., ತಿರುಮಲೆ. ಫೋನ್ : -

0877 - 2263001, 2263472.

ಈ ಮೇಲ್ ಐ.ಡಿ. :-

cdmc.ttd@tirumala.org


ಇದರಲ್ಲಿ ಪಾಲ್ಗೊಂಡ ಭಕ್ತದಾತರು ಭಕ್ತರಿಗೆ ತಾವೇ ಸೇವೆ ಸಲ್ಲಿಸುವ ಅವಕಾಶವಿರುತ್ತದೆ. ಮಾತೃಶ್ರೀ ತರಿಗೊಂಡ ವೆಂಗಮಾಂಬ ಅನ್ನ ಪ್ರಸಾದ ವಿತರಣಾ ಕೇಂದ್ರದಲ್ಲಿ ಅವರ ಹೆಸರನ್ನು ಪ್ರದರ್ಶಿಸಲಾಗುತ್ತದೆ.

### ದೈನಂದಿನ ವೆಚ್ಚಗಳು

| | |
|---|---|
| 1. ಅಲ್ಪಹಾರ (ಟಿಫಿನ್ ) | - 08 ಲಕ್ಷಗಳು |
| 2.ಮಧ್ಯಾಹ್ನ ಭೋಜನ | - 15 ಲಕ್ಷಗಳು |
| 3. ರಾತ್ರಿ ಭೋಜನ | - 15 ಲಕ್ಷಗಳು |
| ಒಟ್ಟು ಮೊತ್ತ | - 38 ಲಕ್ಷಗಳು |

**ಈ ಮೊತ್ತವನ್ನು ದಾನಿಗಳು ತಿ.ತಿ.ದೇ., ಅನ್ನಪ್ರಸಾದ ಟ್ರಸ್ಟ್‌ನಲ್ಲಿ ನೀಡಬಹುದು.**

# त्रिंशः पाठः

ರಚನೆ:-ಕೆ. ಸೂರ್ಯನಾರಾಯಣ
ಅನುವಾದ: ವಿ. ಪ್ರದೀಪ್ ಕುಮಾರ್

## ಪಾಠ : 30

मया = ನನ್ನಿಂದ,ನನ್ನ ಜೊತೆ
इतः पूर्वम् = ಇದುವರೆಗೆ
अस्माभिः = ನಮ್ಮಿಂದ, ನಮ್ಮ ಜೊತೆ
इतः परम् =ಇನ್ಮೇಲೆ,ಇನ್ಮುಂದೆ
त्वया = ನಿನ್ನಿಂದ,ನಿನ್ನ ಜೊತೆ
इति = ಎಂದು
पश्यति = ನೋಡುತ್ತಿದ್ದಾನೆ
द्रक्ष्यति = ನೋಡುತ್ತಾನೆ
दर्शयति = ತೋರಿಸುತ್ತಿದ್ದಾನೆ

### ಪ್ರಶ್ನೆ

1. यूयं मया आगच्छत।
2. वृक्षे फलानि न सन्ति।
3. सर्वाणि फलानि अपतन्।
4. तत्र गोविन्दः अस्ति किं वा? पश्य।
5. मम मञ्चं दर्शय।
6. तव जनकः श्वः अस्माभिः आगमिष्यति।
7. पाकः कथमस्ति न द्रक्ष्यसि किम्?
8. झटिति पाकं कुरुत। इति वद।
9. एतत् क्षीरं पातुं सम्यक् नास्ति।
10. एतत्क्षीरे लवणम् अपतत्।

### ಉತ್ತರ

1. ಈ ಹುಡುಗನ ಮನೆ ನನಗೆ ತೋರಿಸು.
2. ಅವನು ನಿನ್ನ ಮನೆಗೆ ಹೋಗಿದ್ದಾನೆ ಏಕೇ?
3. ಸ್ವಲ್ಪ ದೂರ ಸರಿ (ಹೋಗು).
4. ನಿನ್ನೆ ನಮ್ಮ ಮಂಚವನ್ನು ನಿನ್ನ ಮನೆಯಲ್ಲಿ ನಾನು ನೋಡಿದೆನು.
5. ಆದರೇ ನಮ್ಮ ಜೊತೆ ಬರುವಿಯಾ?
6. ನಾನು ಬಂದರೇ ಇಲ್ಲಿ ನಮ್ಮ ಮನೆ ಯಾರು ನೋಡುವರು?
7. ನಿಮ್ಮ ತಮ್ಮಂದಿರು ಮನೆಯಲ್ಲೆ ಇದ್ದಾರಲ್ಲವೇ.
8. ಅವರು ಬೆಟ್ಟಗಳಲ್ಲಿ ನಡೆಯುತ್ತಿದ್ದಾರೆ.
9. ನೀನು ಅಲ್ಲಿ ಏಕೆ ನಡೆಯುತ್ತಿದ್ದೆ?
10. ಸುಮ್ಮನೆ.

### ಪ್ರಶ್ನೆ

1. ನೀವು ನನ್ನಜೊತೆ ಬನ್ನಿ.
2. ಮರದಲ್ಲಿ ಹಣ್ಣುಗಳು ಇಲ್ಲ.
3. ಎಲ್ಲಾ ಹಣ್ಣುಗಳು ಉದಿರಿವೆ
4. ಅಲ್ಲಿ ಗೋವಿಂದನಿದ್ದಾನೋ ಎಂದು ನೋಡು?
5. ನನ್ನ ಮಂಚ ತೋರಿಸು.
6. ನಿಮ್ಮ ತಂದೆ ನಾಳೆ ನಮ್ಮ ಜೊತೆ ಬರುತ್ತಾರೆ.
7. ಅಡುಗೆ ಹೇಗಿದೇ ಎಂದು ನೋಡುವುದಿಲ್ಲವೇ?
8. ಬೇಗನೆ ಅಡುಗೆ ಮಾಡು ಎಂದು ಹೇಳಿ.
9. ಈ ಹಾಲು ಕುಡಿಯಲು ಚೆನ್ನಾಗಿಲ್ಲ.
10. ಈ ಹಾಲಿನಲ್ಲಿ ಉಪ್ಪು ಬಿದ್ದಿದೆ.

### ಉತ್ತರ

1. एतस्य बालकस्य गृहं मम दर्शय।
2. सः तव गृहं किमर्थं गतवान्। (अगच्छत्)
3. किञ्चित् दूरं गच्छ।
4. ह्यः अस्माकं मञ्चं युष्माकं गृहे अहं अपश्यम्।
5. तर्हि अस्माभिः आगच्छसि किम्?
6. अहम् आगच्छामि चेत् अत्र मम गृहं के पश्यन्ति?
7. तव अनुजाः गृहे सन्ति खलु।
8. ते पर्वतेषु चलन्ति।
9. त्वं तत्र किमर्थं चलसि?
10. तूष्णीमेव।

# ಮಹಾದೇವಿ ಕುಂತಿಯ ಉದಾತ್ತ ಚರಿತ್ರೆ

- ಶ್ರೀಮತಿ. ಎಸ್. ಕಲ್ಯಾಣಿ ಮೂರ್ತಿ





ವಿಪದಃ ಸಂತುನಃ ಶಶ್ವತ್
ತತ್ರತತ್ರ ಜಗದ್ಗುರೋ।
ಭವತೋ ದರ್ಶನಂ
ಯತ್ಸ್ಯಾದ ಪುನರ್ಭವ ದರ್ಶನಮ್॥

ಕುಂತೀದೇವಿ ಭಗವಂತನಿಗೆ ಪ್ರಾರ್ಥಿಸುತ್ತಾಳೆ."ಹೇ ಜಗದ್ಗುರೋ! ನಮ್ಮ ಮೇಲೆ ತೊಂದರೆಗಳು ಸದಾ ಬರುತ್ತಿರಲಿ. ಏಕೆಂದರೆ, ನಿಮ್ಮ ದರ್ಶನ ವಿಪತ್ತಿನಲ್ಲಿಯೇ ಸಿಗುವುದು. ನಿಮ್ಮ ದರ್ಶನವಾದ ಮೇಲೆ ಮತ್ತೆ ಈ ಜಗತ್ತಿನ ದರ್ಶನವಾಗುವುದಿಲ್ಲ. ಅಂದರೆ ಮನುಷ್ಯ ಆವಾಗಮನದಿಂದ ರಹಿತನಾಗುತ್ತಾನೆ."

ನಮ್ಮಲ್ಲಿನ ಶಾಸ್ತ್ರಗಳಲ್ಲಿ ಐದು (ಕನ್ಯೆಯರು) ಜಗದೇವಿಯರು ನಿತ್ಯ ಕನ್ಯೆಯರೆಂದು ಮಾನ್ಯವಾಗಿದ್ದಾರೆ, ಅವರಲ್ಲಿ ಮಹಾರಾಣಿ ಕುಂತಿಯೂ ಇದ್ದಾಳೆ. ಇವಳು ವಸುದೇವನ ಸಹೋದರಿ. ಭಗವಾನ್ ಶ್ರೀಕೃಷ್ಣ ಚಂದ್ರನ ಸೋದರತ್ತೆ, ಮಹಾರಾಜ ಕುಂತಿ ಭೋಜನಿಗೆ ಇವರ ತಂದೆಯ ಗೆಳೆತನವಿತ್ತು. ಅವರಿಗೆ ಮಕ್ಕಳಿರಲಿಲ್ಲ ಹಾಗಾಗಿ ಇವಳು ಕುಂತೀಭೋಜನಿಗೆ ದತ್ತುವಾಗಿ ಬಂದಳು. ಅವರ ಮಗಳೇ ಆಗಿದ್ದರಿಂದ ಇವಳಿಗೆ ಕುಂತಿ ಎಂದು ಹೆಸರು ಬಂದಿತು. ಬಾಲ್ಯದಲ್ಲಿ ಈಕೆ ಸಾಧು ಮಹಾತ್ಮರಿಗೆ ಬಹಳ ಸೇವೆ ಮಾಡುತ್ತಿದ್ದಳು. ಮನೆಗೆ ಯಾರೇ ಅತಿಥಿಗಳು, ಸಾಧುಗಳು ಬಂದರೂ ಅವರಿಗೆ ಎಲ್ಲ ರೀತಿಯ ಸೇವೆ ಶುಶ್ರೂಷೆ ಮಾಡುತ್ತಿದ್ದಳು.ಒಮ್ಮೆ ಮಹರ್ಷಿ ದುರ್ವಾಸರು ಇವರ ಬಳಿ ಬಂದರು. ಮಳೆಗಾಲದ ನಾಲ್ಕು ತಿಂಗಳೂ ಇವರಲ್ಲಿಯೇ ತಂಗಿದ್ದರು. ಕುಂತೀ ಅವರಿಗೆ ಮನಸಾರೆ ಸೇವೆ ಮಾಡಿದಳು. ಹೊರಡುವಾಗ ಮಹರ್ಷಿಗಳು ಇವಳಿಗೆ ಒಂದು ಮಂತ್ರವನ್ನು ಉಪದೇಶಿಸಿದರು. ಸಂತಾನ ಕಾಮನೆಯಿಂದ ನೀನು ಯಾವ ದೇವತೆಯನ್ನು ಸ್ಮರಿಸುತ್ತೀಯೋ, ಅವನು ಅದೇ ಸಮಯಕ್ಕೆ ತನ್ನ ದಿವ್ಯ ತೇಜಸ್ಸಿನಿಂದ ಬರುತ್ತಾನೆ. ಇದರಿಂದ ನಿನ್ನ ಕನ್ಯತ್ವ (ಕನ್ಯಾಭಾವ) ಹಾಳಾಗುವುದಿಲ್ಲ.

ಋಷಿಗಳು ಹೊರಟುಹೋದ ಮೇಲೆ ಇವಳು ಹುಡುಗು ತನದ ಕುತೂಹಲದಿಂದ ಭಗವಾನ್ ಸೂರ್ಯದೇವನನ್ನು ಆವಾಹನೆ ಮಾಡಿದಳು. ಸೂರ್ಯದೇವ ಪ್ರತ್ಯಕ್ಷನಾದ, ಇವಳು ಹೆದರಿದಳು. ಅವನು ಆಶ್ವಾಸನೆ ನೀಡಿದ. ಅವನಿಂದಲೇ ದಾನಶೂರಕರ್ಣ ಹುಟ್ಟಿದ್ದು. ಇವನನ್ನು ಲೋಕಾಪವಾದದ ಕಾರಣದಿಂದ ಕುಂತಿ ನದಿಯಲ್ಲಿ ಬಿಟ್ಟಳು. ಇವನನ್ನು ಸಾರಥಿಯೊಬ್ಬ ತನ್ನ ಮಗನನ್ನಾಗಿ ಸಾಕಿದ. ಮಹಾರಾಜ ಪಾಂಡುವಿನೊಂದಿಗೆ ಇವಳ ವಿವಾಹವಾಯಿತು. ಅವನು ರಾಜ್ಯ, ಆಡಳಿತ ಬಿಟ್ಟು ಕಾಡಿಗೆ ಹೋಗಬೇಕಾಯಿತು. ಕಾಡಿನಲ್ಲಿಯೇ ಅವನಿಗೆ ಧರ್ಮ,ಇಂದ್ರ, ವಾಯುವಿನ ಅಂಶದಿಂದ ಯುಧಿಷ್ಠಿರ,ಅರ್ಜುನ, ಭೀಮ ಹುಟ್ಟಿದರು.ಮಾದ್ರಿಯಲ್ಲಿ ಅಶ್ವಿನೀ ಕುಮಾರರ ಅಂಶದಿಂದ ನಕುಲ

ಸಹದೇವರು ಹುಟ್ಟಿದರು. ಮಹಾರಾಜ ಪಾಂಡುವಿನ ಶರೀರಾಂತ್ಯವಾದಾಗ ಮಾದ್ರಿ ಅವ ನೊಂದಿಗೇ ಸತಿಯಾದಳು. ಕುಂತಿ ಮಕ್ಕಳ ರಕ್ಷಣೆಗೆ ಉಳಿದು ಕೊಂಡಳು. ಕುಂತಿ ಐವರನ್ನು ತನ್ನ ಹೊಟ್ಟೆಯಲ್ಲಿ ಹುಟ್ಟಿದವರೆಂದೇ ತಿಳಿದಳು. ಕನಸಿನಲ್ಲಿಯೂ ಅವರಲ್ಲಿ ಭೇದ ಭಾವ ಎಣಿಸಲಿಲ್ಲ.

ಪಾಂಡವರು ರಾಜ್ಯ ಭ್ರಷ್ಟರಾಗಿ ಕಾಡಿಗೆ ಹೋದಾಗ ಇವಳು ದುಃಖದಿಂದ ವಿದುರನ ಮನೆಯಲ್ಲಿದ್ದಳು.ಭಗವಂತನಲ್ಲಿ ಮಕ್ಕಳ ಒಳಿತಿಗಾಗಿ ಪ್ರಾರ್ಥಿಸುತ್ತಿದ್ದಳು.ಇದಕ್ಕೆ ಮುನ್ನ ದುರ್ಯೋಧನ ಲಾಕ್ಷಾಗೃಹದಲ್ಲಿ ಪಾಂಡವರೈವರನ್ನೂ ಸುಡಲು ಷಡ್ಯಂತ್ರ ರಚಿಸಿದಾಗ, ತಾಯಿ ಕುಂತಿ ಜತೆಯಲ್ಲಿದ್ದಳು.ನಂತರ ಅವರೊಂದಿಗೇ ಅಲ್ಲಿಂದ ರಹಸ್ಯವಾಗಿ ಓಡಿದರು. ಆಗ ಪಾಂಡವರ ಮೇಲೆ ಬಹಳ ವಿಪತ್ತು ಆವರಿಸಿತ್ತು. ಅವರು ಭಿಕ್ಷೆ ಬೇಡಿ ಊಟ ಮಾಡುತ್ತಿದ್ದರು.ತಾಯಿ ಅವರಿಗೆ ಎಲ್ಲ ತರಹದ ರಕ್ಷಣೆ ನೀಡುತ್ತಿದ್ದಳು. ಎಲ್ಲರಿಗೂ ಯಥಾಯೋಗ್ಯ ಆಹಾರ ನೀಡುತ್ತಿದ್ದಳು. ಕುಂತೀ ಬಹಳ ದಯಾಶೀಲಳು ಇವರಿದ್ದ ಬ್ರಾಹ್ಮಣರ ಮನೆಯ ಒಬ್ಬ ಮಗ ಅಂದು ರಾಕ್ಷಸನಿಗೆ ಆಹಾರವಾಗಿ ಹೊರಟ್ಟಿದ್ದ.ಆ ಬಾಲಕನ ತಾಯಿ ಒಬ್ಬಂಟಿ ಮಗನನ್ನು ಕಳುಹಿಸಲು ರೋದಿಸುತ್ತಿದ್ದಳು. ದಯಾಶೀಲಳಾದ ಕುಂತಿ“ತಾಯಿ ಅಂಜಬೇಡ. ನನಗೆ 5 ಮಕ್ಕಳಿದ್ದಾರೆ. ಒಬ್ಬನನ್ನು ಕಳುಹಿಸಿ ಕೊಡುತ್ತೇನೆ” ಎಂದಳು. ಆದರೆ ಆ ಹೆಂಗಸು ಬೇಡವೆಂದಾಗ “ಹೆದರಬೇಡತಾಯಿ ನನ್ನ ಮಗ ಆ ರಾಕ್ಷಸನನ್ನು ಕೊಂದು ಬರುತ್ತಾನೆ.” ಎಂದಳು ಹಾಗೆಯೇ ಆಯಿತು. ಭೀಮ ಆ ರಾಕ್ಷಸನನ್ನು ಕೊಂದು ಆ ನಗರ ಸದಾ ನೆಮ್ಮದಿಯಿಂದಿರುವಂತೆ ಮಾಡಿದ.

ಕುಂತಿ ದಯಾಳುವಾಗಿದ್ದಳಲ್ಲದೆ ವೀರಮಾತೆಯೂ ಆಗಿದ್ದಳು. ಜೂಜಿನಲ್ಲಿ ಯುಧಿಷ್ಠಿರ ಸೋತು ಹದಿಮೂರು ವರ್ಷಗಳು ವನವಾಸ, ಅಜ್ಞಾತವಾಸ ಅನುಭವಿಸಿ ಬಂದ ಮೇಲು ದುರ್ಯೋಧನ ಪಾಂಡವರಿಗೆ ಏನನ್ನೂ ಕೊಡಲು ಒಪ್ಪಲಿಲ್ಲ. ಆಗ ಭಗವಾನ್ ಕೃಷ್ಣನೇ ರಾಯಬಾರಿಯಾಗಿ ಹಸ್ತಿನಾಪುರಕ್ಕೆ ಬಂದ. ದುರ್ಯೋಧನನಿಗೆ ಬಹಳವಾಗಿ ತಿಳಿ ಹೇಳಿದ. ಆದರೆ ಆತ ಸುತರಾಂ ಒಪ್ಪಲೇ ಇಲ್ಲ. ಆತ ಸ್ಪಷ್ಟವಾಗಿ ಹೇಳಿಬಿಟ್ಟ.

“ಸೂಚ್ಯಾಗ್ರಂ ನೈವ ದಾಸ್ಯಾಮಿ ವಿನಾಯುದ್ಧೇನ ಕೇಶವ”।

‘ಹೇ ಮಾಧವ ! ಯುದ್ಧವಿಲ್ಲದೆ ಸೂಜಿಯ ಮೊನೆಯಷ್ಟೂ ಭೂಭಾಗವನ್ನು ನಾನು ಕೊಡಲಾರೆ’, ಆಗ ಭಗವಂತ ಕುಂತಿಯ ಬಳಿ ಬಂದು “ಇಂತಹ ಸ್ಥಿತಿಯಲ್ಲಿ ನೀನು ನಿನ್ನ ಮಕ್ಕಳಿಗೆ ಕೊಡುವ ಸಂದೇಶವಾದರೂ ಏನು?” ಎಂದು ಕೇಳಿದ ಅದಕ್ಕೆ ಆಕೆ-ಯದರ್ಥಂ



ಕ್ಷತ್ರಿಯಾ ಸೂತೇ ತಸ್ಯ ಕಾಲೋಯ ಮಾಗತಃ॥ ಅಂದಳು. “ಕ್ಷತ್ರಿಯಳಾ ದವಳು ಯಾವ ಸಂದರ್ಭಕ್ಕಾಗಿ ತನ್ನ ಮಕ್ಕಳನ್ನು ಹೆತ್ತಿದ್ದಾಳೋ,ಆ ಸಮಯ ಈಗ ಬಂದಿದೆ. ಅಂದರೆ ಯುದ್ಧದ ಸಂದರ್ಭ ಒದಗಿ ಬಂದಿದೆ. ಹೋರಾಡಿ ತಮ್ಮ ಮಕ್ಕಳು ಅಧಿಕಾರ ಪಡೆಯುವಂತೆ ನೀವೇ ಹೇಳಿಬಿಡಿ “ಇದು ವೀರ ಮಾತೆಯಾದವಳು ಮಕ್ಕಳಿಗೆ ಕೊಡುವ ಆದೇಶ! ಸಂದೇಶ!”

ಯಾವುದು ಆಗಬೇಕಿತ್ತೋ ಅದು ಆಯಿತು. ಮಹಾಭಾರತದ ಯುದ್ಧವಾಯಿತು.18ಅಕ್ಷೋಹಿಣಿ ಸೈನ್ಯ ಸಂಹಾರವಾಯಿತು. ಧೃತರಾಷ್ಟ್ರನ ನೂರುಮಂದಿ ಮಕ್ಕಳು ಹತರಾದರು.

ಗಾಂಧಾರಿ ಪುತ್ರಹೀನಳಾದಳು,ರೋದಿಸುತ್ತಾ ರಣರಂಗಕ್ಕೆ ಹೋದಳು. ಕುಂತಿ ಅವಳನ್ನು ಹಿಡಿದು ಕೊಂಡು ಹೋಗುವಾಗ ವಿಧವಿಧವಾಗಿ ಸಮಾಧಾನ, ಧೈರ್ಯ ತುಂಬಿದಳು.ತಾಯಿ ಕುಂತಿಯಾದರೋ ಪ್ರಾಮಾಣಿಕ ಮನಸ್ಸಿನಿಂದ ಆ ಪತಿವ್ರತೆ ಸ್ತ್ರೀಗಾಂಧಾರಿಗೆ ಎಲ್ಲ ರೀತಿಯ ಸೇವೆ ಮಾಡಿದಳು.ತಾಯಿ ಕುಂತಿ ಎಂದೂ ಶಾರೀರಕ ಸುಖವನ್ನು ಅನುಭವಿಸಲಿಲ್ಲ. ಮದುವೆಯಾಗಿ ಬಂದಾಗಿನಿಂದ ಬರೀ ಸಂಕಷ್ಟಗಳನ್ನೇ ಎದುರಿಸಬೇಕಾ

ಯಿತು. ಪತಿ ರೋಗಿಷ್ಠನಾಗಿದ್ದ, ಅವನೊಂದಿಗೆ ಕಾಡಿ ನಲ್ಲಿ ಅಲೆಯುತ್ತಿದ್ದಳು. ಅಲ್ಲಿಯೇ ಮಕ್ಕಳು ಹುಟ್ಟಿದರು. ಅವರನ್ನು ಸಾಕಿದ್ದಾಯಿತು. ಸ್ವಲ್ಪ ದಿನ ಹಸ್ತಿನಾಪುರದಲ್ಲಿ ಮಕ್ಕಳೊಂದಿಗೆ ಇದ್ದಳು. ಅದು ಸಹ ಬೇರೆಯವರ ಆಶ್ರಯದಲ್ಲಿ.

ನಂತರ ಲಾಕ್ಷಾಗೃಹದಿಂದ ಹೇಗೋ ತನ್ನ ಮಕ್ಕ ಳೊಂದಿಗೆ ಹೊರಗೋಡಿದಳು. ಭಿಕ್ಷೆಯ ಅನ್ನದಿಂದ ಬದುಕು ಸಾಗಿಸಿದಳು. ಸ್ವಲ್ಪದಿನ ರಾಜ್ಯ ಸುಖವನ್ನು ಅನುಭವಿಸುವ ಕಾಲಬಂದಿತು. ಆದರೆ ಧರ್ಮರಾಜ ಯುಧಿಷ್ಠಿರ ಕಪಟದ ಜೂಜಿನಲ್ಲಿ ಎಲ್ಲವನ್ನು ಸೋತು ವನವಾಸಕ್ಕೆ ಹೋಗಬೇಕಾ ಯಿತು. ಆಗ ವಿದುರನ ಮನೆಯಲ್ಲಿದ್ದು ಹೇಗೋ ಜೀವನ ಸಾಗಿ ಸಿದಳು ಯುದ್ಧವಾಯಿತು. ಪರಿವಾರದವರೆಲ್ಲಾ ಸಂಹಾರವಾ ದರು, ಇದರಿಂದ ಕುಂತಿಗೇನುತ್ತಾನೆಸುಖ? ತನ್ನ ಸುಖಕ್ಕಾಗಿ ಯುದ್ಧಕ್ಕೆ ಸಮ್ಮತಿ ಕೊಟ್ಟಿದ್ದಳಷ್ಟೆ. ಅದೂ ಆಕೆ ಕ್ಷತ್ರೀಯ ಧರ್ಮ ವನ್ನು ಪರಿಪಾಲಿಸಿದಳು.

ಪಾಂಡವರಿಗೆ ವಿಜಯಲಭಿಸಿದ್ದರಿಂದ ಏನಾಯಿತು? ಆಕೆ ಪಾಂಡವರೊಂದಿಗೆ ರಾಜ್ಯ ಭೋಗದಲ್ಲಿ ಸೇರಲಿಲ್ಲ. ಆಕೆ ತನ್ನ ಬದುಕನ್ನೆಲ್ಲಾ ಆ ಅಂಧಜ್ಯೇಷ್ಠ ಧೃತರಾಷ್ಟ್ರ ಮತ್ತು ಗಾಂಧಾ ರಿಯರ ಸೇವೆಗಾಗಿಯೇ ಅರ್ಪಿಸಿದಳು. ಅವರ ಮಕ್ಕಳು ಅದೆಷ್ಟು ಕಷ್ಟ ಕೊಟ್ಟಿದ್ದರೋ ಅದು ಲೆಕ್ಕಕ್ಕೆ ಬರಲಿಲ್ಲ. ಈ ಇಬ್ಬರೂ ಪುತ್ರವಿಯೋಗದಿಂದ ದುಃಖಿತರಾಗಿ ಕಾಡಿನತ್ತ ಹೊರ ಟಾಗ ಅವರ ಊರು ಗೋಲು ಹಿಡಿದು ಮಕ್ಕಳ ವ್ಯಾಮೋಹ ತೊರೆದ ಕುಂತಿದೇವಿ ಅವರ ಜತೆಗೇ ಇದ್ದಳು. ಹೀಗೆ ಅವಳ ಜೀವನ ಸದಾ ವಿಪತ್ತಿನಲ್ಲಿಯೇ ಕಳೆಯಿತು. ಈ ವಿಪತ್ತಿನ ಲ್ಲಿಯೂ ಸಹ ಅವಳಿಗೆ ಸುಖವಿತ್ತು ಆಕೆ ಈ ತೊಂದರೆಗಳನ್ನು ಭಗವಂತನ ಪ್ರೀತಿಯೆಂದು ತಿಳಿದಿದ್ದಳು. ತಾನೆಂದೂ ಹೃದಯ ಪೂರ್ವಕ ಇವುಗಳನ್ನು ವಿಪತ್ತುಗಳೆಂದು ಒಪ್ಪುತ್ತಲೇ ಇರಲಿಲ್ಲ.

ವಿಪದೋ ನೈವ ವಿಪದಃ ಸಂಪದೋ ನೈವ ಸಂಪದಃ।
ವಿಪದ್ವಿಸ್ಮರಣಂ ವಿಷ್ಣೋಃ ಸಂಪನ್ನಾರಾಯಣಸ್ಮೃತಿಃ॥

"ವಿಪತ್ತು ಯಥಾರ್ಥ ವಿಪತ್ತಲ್ಲ.ಸಂಪತ್ತು ಸಹ ಸಂಪ ತ್ತಲ್ಲ. ಭಗವಂತನ ಸ್ಮರಣೆ ಕಳಚುವುದೇ ವಿಪತ್ತು. ಅವನ ಸ್ಮರಣೆಯುಂಟಾಗುವುದೇ ಒಂದು ದೊಡ್ಡ ಸಂಪತ್ತು" ಹಾಗಾಗಿ ಅವಳಿಗೆಂದೂ ಭಗವಂತನ ಸ್ಮರಣೆ ತಪ್ಪಲಿಲ್ಲ. ಅವಳು ಎಂದೆಂದಿಗೂ (ಸದಾ) ಸುಖವಾಗಿಯೇ ಇದ್ದಳು.

## ತಿರುಮಲೆಯಲ್ಲಿ ನೋಡುವ ಪ್ರದೇಶಗಳು

### ಸ್ವಾಮಿಪುಷ್ಕರಿಣಿ :

ಸ್ವಾಮಿಪುಷ್ಕರಿಣಿ ತಿರುಮಲೆಯಲ್ಲಿ ಆಲಯದ ಪಕ್ಕದಲ್ಲಿದೆ. ಭಕ್ತರು ಆಲಯದಲ್ಲಿ ಪ್ರವೇಶಿಸುವ ಮೊದಲು ಈ ಪುಷ್ಕರಿಣಿಯಲ್ಲಿ ಸ್ನಾನ ಮಾಡು ತ್ತಾರೆ. ಇಲ್ಲಿ ಸ್ನಾನ ಮಾಡಿದರೆ ದೇಹವೇ ಅಲ್ಲದೇ ಮನಸ್ಸು ಕೂಡಾ ಪರಿಶುದ್ಧ ವಾಗುತ್ತದೆ.

### ಆಕಾಶಗಂಗ :

ಈ ತೀರ್ಥ ಆಲಯದಿಂದ ಉತ್ತರಕ್ಕೆ 5 ಕಿ.ಮೀ ದೂರದಲ್ಲಿದೆ.

### ಪಾಪವಿನಾಶನ :

ಈ ತೀರ್ಥ ಗುಡಿಗೆ ಉತ್ತರಕ್ಕೆ 5 ಕಿ.ಮೀ. ದೂರದಲ್ಲಿದೆ.

### ವೈಕುಂಠತೀರ್ಥ :

ಈ ತೀರ್ಥ ಗುಡಿಗೆ ಉತ್ತರಕ್ಕೆ 5 ಕಿ.ಮೀ. ದೂರದಲ್ಲಿದೆ.

### ತುಂಬುರುತೀರ್ಥ :

ಈ ತೀರ್ಥ ಗುಡಿಗೆ ಉತ್ತರಕ್ಕೆ 16 ಕಿ.ಮೀ. ದೂರದಲ್ಲಿದೆ.

### ಶಿಲಾತೋರಣ :

ಭೌಗೋಳಿಕ ಪರಿಣಾಮದಿಂದ ಸಹಜಸಿದ್ಧವಾಗಿರುವ ಶಿಲಾ ತೋರಣ.ಗುಡಿಗೆ ಉತ್ತರಕ್ಕೆ ಒಂದು ಕಿಲೋ ಮೀಟರು ದೂರದಲ್ಲಿದೆ.

### ತಿ.ತಿ.ದೇ ಉದ್ಯಾನವನಗಳು :

ದೇವಸ್ಥಾನದವರು ತಿರುಮಲೆಯಲ್ಲಿ ಶೋಭಾಯಮಾನವಾದ ಉದ್ಯಾನವನಗಳನ್ನು ಬೆಳಸುತ್ತಿದ್ದಾರೆ. ಇಲ್ಲಿ ಅಪುರೂಪವಾದ ಗಿಡಗಳು, ವೃಕ್ಷಗಳು ಅಭಿವೃದ್ಧಿಯಾಗುತ್ತಿವೆ.

### ಆಸ್ಥಾನಮಂಡಪ :

ಹಿಂದೂ ಧರ್ಮ ಪ್ರಚಾರಪರಿಷತ್ತು ಅವರ ಆಧ್ವರ್ಯದಲ್ಲಿ ನಿರ್ವಹಿಸುವ ಧಾರ್ಮಿಕ ಉಪನ್ಯಾಸಗಳು, ಹರಿಕಥೆ, ಸಂಗೀತ, ಭಜನೆ ಕಾರ್ಯಕ್ರಮಗಳಿಗೆ ವೇದಿಕೆಯಾಗಿ ಉಪಯೋಗಿಸಲ್ಪಡುತ್ತಿರುವ ಸಭಾ ಮಂಡಪ.

### ಶ್ರೀವೆಂಕಟೇಶ್ವರ ಧ್ಯಾನಮಂದಿರ(ಎಸ್.ವಿ.ಮ್ಯೂಜಿಯಂ) :

ಅಪುರೂಪವಾದ ಪುರಾವಸ್ತು ಪ್ರದರ್ಶನ, ಚಿತ್ರ, ಶಿಲ್ಪಕಳಾ ರೂಪಗಳಿಗೆ, ಧ್ಯಾನಕ್ಕೆ ಕೇಂದ್ರವಾಗಿ ಭಕ್ತರನ್ನು ಆಕರ್ಷಿಸುತ್ತಿದೆ. ಭಕ್ತರು ಭಗವಂತನನ್ನು ಧ್ಯಾನಿಸುತ್ತಾ ಮಾನಸಿಕ ಒತ್ತಡವನ್ನು ಕಳೆದುಕೊಳ್ಳಬಹುದು.

# ಆರೋಗ್ಯ ಸಂರಕ್ಷಣೆಗೆ ಕರಿಬೇವು

ತೆಲುಗು ಮೂಲ:ಡಾ॥ ಸಿ. ಮಧುಸೂದನಶರ್ಮ

ಅನುವಾದ:-ಡಿ.ಎಸ್. ಬದ್ರಿನಾಥ್



ನಮ್ಮ ದೈನಂದಿನ ಬದುಕಿನಲ್ಲಿ ಆಹಾರ ಪದಾರ್ಥಗಳ ಅಡುಗೆ ಮನೆಯ ತಯಾರಿಕೆಗಳಲ್ಲಿ ರುಚಿಗೆ ಮತ್ತು ಘಮ ಘಮವೆನ್ನುವ ಸುವಾಸನೆಗೆ ಕರಿಬೇವನ್ನು ಉಪಯೋಗಿಸುವುದು ಎಲ್ಲರಿಗೂ ವಿಹಿತವಾದದ್ದೇ.ಕರಿಬೇವು ಬರೀ ಆಹಾರದ್ರವ್ಯವೊಂದೇ ಅಲ್ಲ. ಅತ್ಯುನ್ನತವಾದ ಔಷಧೀಯ ಗುಣಗಳನ್ನು ಸಹಾ ತನ್ನಲ್ಲಡಗಿಸಿಕೊಂಡಿರುವ ದಿವ್ಯವಾದ ಔಷಧೀಯ ದ್ರವ್ಯವೂ ಸಹ ಹೌದು. ಪ್ರತಿನಿತ್ಯದ ಬದುಕಿನಲ್ಲಿ ನಾವು ಎದುರಿಸುವ ಅತ್ಯಂತ ಸಹಜವಾದ ವಿವಿಧ ಅನಾರೋಗ್ಯ ಸಮಸ್ಯೆಗಳಿಗೆ ಈ ಕರಿಬೇವು ಯಾವ ರೀತಿ ಸದ್ವಿನಿಯೋಗವಾಗುತ್ತದೆ ಎಂಬುದನ್ನು ಪ್ರಸ್ತುತ ತಿಳಿಯೋಣ.

**ಕಲೆ ಅಥವಾ ಬಿಳಿಮಚ್ಚೆ ತಗ್ಗಲು :** ಕರಿಬೇವಿನ ಪುಡಿ,ಆಯುರ್ವೇದ ಔಷಧಿ ವಿಕ್ರಯಾಲಯಗಳಲ್ಲಿ ಲಭಿಸುವ ಸುಗಂಧಿಪಾಲಪುಡಿ,ಗುಂಟ ಗರಗರ (ಭೃಂಗರಾಜ) ಪುಡಿ ಸ್ಪಟಿಕ ಬೆಲ್ಲದ ಪುಡಿ ಸಮಾನವಾಗಿ ಕಲಿಸಿಟ್ಟುಕೊಂಡು ಉದಯ, ಸಾಯಂಕಾಲ ಬಾರಿಯೊಂದಕ್ಕೆ 2-3 ಗ್ರಾಂ ಸೇವಿಸುತ್ತಿದ್ದರೆ ಚರ್ಮಕ್ಕೆ ಬಣ್ಣ ಸ್ಪುರಿಸುವ ಮೆಲಾನಿನ್ ಎಂಬ ರಂಜಕ ಪದಾರ್ಥ ಉತ್ಪತ್ತಿಯಾಗಿ ಈ ಸಮಸ್ಯೆ ತಗ್ಗುತ್ತದೆ.

**ಕೈಕಾಲು ಉರಿತ ಪೈತ್ಯದ ಸಮಸ್ಯೆಗೆ:** ಕರಿಬೇವು ಪುಡಿ, ಜೀರಿಗೆಯನ್ನು ಕಲಿಸಿ ಮಾಡಿಸಿದ ಪುಡಿ, ಶುಂಠಿ ಪುಡಿಯನ್ನು ಸಮಾನವಾಗಿ ಕಲಿಸಿಟ್ಟುಕೊಂಡು ಎರಡು ಬಾರಿ ಬಾರಿಯೊಂದಕ್ಕೆ ಕಾಲು ಟೀಸ್ಪೂನ್‌ನಿಂದ ಅರ್ಧ ಟೀ ಸ್ಪೂನ್‌ವರೆಗೆ ತಕ್ಕಷ್ಟು ಜೇನನ್ನು ಕಲಿಸಿ, ಶುಗರ್ ವ್ಯಾದಿಗ್ರಸ್ಥರು ನೀರಿನಲ್ಲಿ ಕಲಿಸಿ ಸೇವಿಸುತ್ತಿದರೆ ಒಳ್ಳೆಯ ಲಾಭವುಂಟಾಗುತ್ತದೆ.

**ರಕ್ತಪರಿಚಲನೆಯ ನಿಯಂತ್ರಣಕ್ಕೆ:** ಕರಿಬೇವು, ತುಳಸಿ, ಪುದಿನಾ, ಜೀರಿಗೆಯನ್ನು ಹಾಕಿ ಪುಡಿಮಾಡಿದ ಪುಡಿ, ಧನಿಯಾವನ್ನು ಕುಟ್ಟಿ ಪುಡಿ ಮಾಡಿದ ಚೂರ್ಣವನ್ನು ಸಮಾನವಾಗಿ ಕಲಿಸಿಟ್ಟುಕೊಂಡು ಬೆಳಗ್ಗೆ, ಸಂಜೆ ಆಹಾರ ಸೇವನೆಯ ನಂತರ ಬಾರಿಯೊಂದಕ್ಕೆ 50 ಮಿ.ಲೀ. ನೀರಿನಲ್ಲಿ ಒಂದು ಟೀ ಸ್ಪೂನ್ ಪುಡಿ ಕಲಿಸಿ ಸೇವಿಸುತ್ತಿರಬೇಕು. ಈ ಔಷಧ ಸೇವನೆಯಿಂದಾಗಿ ರಕ್ತದೊತ್ತಡದಿಂದ ಉಂಟಾಗುವ ತಲೆನೋವು, ತಲೆ ಸುತ್ತು, ಪೈತ್ಯ ವಿಕಾರಗಳು ಕೂಡ ಶಮನಗೊಂಡು ಮಾಯವಾಗುತ್ತವೆ.

**ಬಸುರಿವಾಂತಿಗೆ:** 25 ಗ್ರಾಂ ಕರಿಮೆಣಸನ್ನು 2,3 ಗಂಟೆಗಳು ಸುಣ್ಣದ ನೀರಿನಲ್ಲಿ ನೆನೆಸಿ ಹೊರತೆಗೆದು ಒಣಗಿಸಿ, ಚೂರ್ಣಮಾಡಿ ಅದರಲ್ಲಿ 25 ಗ್ರಾಂ ಕರಿಬೇವಿನ ಪುಡಿ ಕಲಿಸಿ ತಕ್ಕಷ್ಟು ನಿಂಬೆರಸದೊಡನೆ ನುರಿದು ಕಲಿಸಿ ಶೇಂಗಾ ಬೀಜದಷ್ಟು ಉಂಡೆಗಳನ್ನು ಮಾಡಿ ಆರಿಸಿ ದಿನವೂ ಮೂರು ಹೊತ್ತು ಆಹಾರಕ್ಕೆ 15 ನಿಮಿಷ ಮೊದಲು ಒಂದು ಮಾತ್ರೆಯನ್ನು ನೀರಿನೊಂದಿಗೆ ಸೇವಿಸಬೇಕು.

**ಹೆಚ್ಚಿನ ಕೊಲೆಸ್ಟ್ರಾಲ್ ಕರಗಲು :** ದಿನವೂ ಬರಿ ಹೊಟ್ಟೆಯಲ್ಲಿ 100 ಮಿ.ಲೀ. ಉಗುರು ಬೆಚ್ಚಗಿನ ನೀರಿನಲ್ಲಿ ಒಂದು ಸ್ಪೂನ್ ಕರಿಬೇವು ಪುಡಿ ಕಲಿಸಿ ಸೇವಿಸುತ್ತಿದ್ದರೆ ಒಳ್ಳೆಯ ಫಲಿತಾಂಶ ಉಂಟಾಗುತ್ತದೆ.

**ಸೈನಸೈಟಿಸ್ ಕಡಿಮೆಯಾಗಲು :** ಕರಿಬೇವು ಪುಡಿ,ಕಲ್ಲು ಸಕ್ಕರೆ ಸಮಾನವಾಗಿ ಕಲಿಸಿ ದಿನವೂ ಎರಡು ಬಾರಿ, ಬಾರಿಯೊಂದಕ್ಕೆ ಒಂದು ಟೀಸ್ಪೂನ್ 50 ಮಿ.ಲೀ. ಉಗುರು ಬೆಚ್ಚಗಿನ ನೀರಿನಲ್ಲಿ ಕಲಿಸಿ ಸೇವಿಸುತ್ತಿರಬೇಕು.

**ಕೂದಲು ಒತ್ತಾಗಿ ಬೆಳೆಯಲು :** ವಾರಕ್ಕೆ ಎರಡು ಮೂರು ಬಾರಿ ಕರಿಬೇವು ದಾಸವಾಳ ಹೂಗಳನ್ನು ಸಮಾನವಾಗಿ ತೆಗೆದುಕೊಂಡು ಸ್ವಲ್ಪವೇ ನೀರಿನಲ್ಲಿ ಮೆತ್ತಗೆ ನಾದಿ ಪೇಸ್ಟಿನಂತೆ ಮಾಡಿ ತಲೆಗೆ ಹಚ್ಚಿಕೊಳ್ಳುವುದರಿಂದ, ಒಂದು ತಾಸು ಬಿಟ್ಟು ತಲೆಸ್ನಾನ ಮಾಡುವುದರಿಂದ ಕೇಶವು ಮೃದುವಾಗಿ ಒತ್ತಾಗಿ, ಸೌಂದರ್ಯಯುತವಾಗಿ ಬೆಳೆಯುತ್ತದೆ.

**ರಕ್ತವೃದ್ಧಿಗೆ :** ದಿನವೂ ಒಂದು ಬಾರಿ 200 ಮಿ.ಲೀ. ನೀರಿನಲ್ಲಿ 25 ಗ್ರಾಂ ನೆನೆಸಿದ ಕರಿಬೇವನ್ನು 15 ಒಣಗಿದ ದ್ರಾಕ್ಷಿಗಳನ್ನು ಹಾಕಿ ಒಂದು ತಾಸು ನೆನೆಸಿ ಅರ್ಧ ಟೀ ಸ್ಪೂನ್ ತಾಳೆ ಬೆಲ್ಲ ಇಲ್ಲವೇ ಸ್ಪಟಿಕ ಬೆಲ್ಲ ಪುಡಿ ಕಲಿಸಿ ಸ್ವಲ್ಪ ಹೊತ್ತು ಮರಳಿಸಿ, ಶೋಧಿಸಿ ಉಗುರುಬೆಚ್ಚಗಿರುವಾಗಲೇ ಕುಡಿಯುತ್ತಿದ್ದರೆ ರಕ್ತವೃದ್ಧಿಯಾಗಿ ಆಯಾಸ ನಿಯತ್ರಾಣಗಳು ತಗ್ಗುತ್ತವೆ.

**ತ್ರಿದೋಷಗಳು ಸಮಸ್ಥಿತಿಗೆ ಬರಲು :** ಒಣಗಿದ ಕರಿಬೇವನ್ನು ತುಪ್ಪದೊಂದಿಗೆ ಕುಟ್ಟಿ ಪುಡಿಮಾಡಿದ ಪುಡಿಯನ್ನು 50 ಗ್ರಾಂ, ಜೀರಿಗೆ, ಹವೀಜಗಳನ್ನು ಕುಟ್ಟಿ ಮಾಡಿದ ಚೂರ್ಣಗಳು ಒಂದೊಂದನ್ನು 10 ಗ್ರಾಂ, ಸೈಂಧವ ಲವಣ ಚೂರ್ಣ 10 ಗ್ರಾಂ ಲವಂಗದ ಚೂರ್ಣ 5 ಗ್ರಾಂ ಕಲಿಸಿಟ್ಟುಕೊಂಡು ದಿನವೂ ಒಂದು ಬಾರಿ ಭೋಜನದ ಸಮಯದಲ್ಲಿ ಆಹಾರದ ಮೊದಲ ತುತ್ತಿನಲ್ಲಿ 2- 3 ಗ್ರಾಂ ಪುಡಿ ಕಲಿಸಿ ಸೇವಿಸಿದರೆ ಉಲ್ಬಣಗೊಂಡ ವಾತ,ಪಿತ್ತ, ಶ್ಲೇಷ್ಮದೋಷಗಳು ಸಮಸ್ಥಿತಿಗೆ ಬಂದು ವ್ಯಾಧಿಗಳು ಶೀಘ್ರದಲ್ಲಿ ಕಡಿಮೆಗೊಳ್ಳುತ್ತದೆ.

- ಕಳೆದ ಸಂಚಿಕೆಯಿಂದ

ಗರುಡಾ! ಅನಂತಾ! ಭಗವಂತನಿಂದ ಅನುಗ್ರಹ ಪಡೆದವರು ನೀವಲ್ಲದೆ ಮತ್ಯಾರು!

ಕಾಸಾರಯೋಗಿ ಪರಮಾದ್ಭುತ ಭಕ್ತಿ ಬದ್ಧ
ವಾಙ್ಮಾಲ್ಯ ಭೂಷಿಕ ಮಹೋತ್ಪಲ ರಮ್ಯಪಾದ
ಗೋಪಾಧಿನಾಥ ವಸುದೇವ ಕುಮಾರ ಕೃಷ್ಣ
ಶ್ರೀಗೋವಿಂದ ರಾಜಾ ವಿಜಯೀ ಭವ ಗೋಕುಲೇಂದ್ರ
ಶ್ರೀಭೂತಯೋಗಿ ಪರಿಕಲ್ಪಿತ ದಿವ್ಯಮಾನ
ಜ್ಞಾನಪ್ರದೀಪ ಪರಿದೃಷ್ಟ ಗುಣಾಮೃತಾಬ್ಧೇ
ಗೋಗೋಪಜಾಲ ಪರಿರಕ್ಷಣ ಬದ್ಧದೀಕ್ಷೆ
ಗೋವಿಂದರಾಜ ವಿಜಯೀಭವ ಗೋಪವಂದ್ಯ
ಮಾನ್ಯಾನುಭಾವ ಮಹಾದಾಹ್ವಯ ಯೋಗಿದೃಷ್ಟ
ಶ್ರೀಶಂಖಚಕ್ರ ಕಮಲಾಸಹಿತಾಮಲಾಂಗ
ಗೋಪಿಜನಪ್ರಿಯ ಚರಿತ್ರ ವಿಚಿತ್ರವೇಷ
ಗೋವಿಂದರಾಜ ವಿಜಯೀ ಭವ ಗೋಪಿನಾಥ!

ಸಲ್ಪಟ್ಟಿರುವ ಗುಣಗಳಿಗೆ ನಮೃತಸಾಗರ ಸ್ವರೂಪಾ! ಗೋವುಗಳನ್ನು, ಗೋಪಾಲಕರನ್ನು ರಕ್ಷಿಸುವುದಕ್ಕಾಗಿ ದೀಕ್ಷೆಯನ್ನು ತೆಗೆದುಕೊಂಡವನೇ! ಗೋಪಾಲಕ ವಂದನೀಯಾ! ಗೋವಿಂದರಾಜಾ! ಜಯಶೀಲನಾಗಿರುವಿ.

ಮಹಾನುಭಾವನಾದ ಮಹಾದಾಹ್ವಾಯಯೋಗಿ(ಪೇಯಾಳ್ವಾರು)ರಿಂದ ಸಾಕ್ಷಾತ್ಕಾರಿಸಿಕೊಂಡ ಶ್ರೀಮಂತರಾಗಿರುವ ಶಂಖ ಚಕ್ರಗಳಿಂದೊಡಗೊಡಿ ಲಕ್ಷ್ಮಿದೇವಿ ಸಹಿತವಾಗಿ ನಿರ್ಮಲದೇಹವನ್ನು ಹೊಂದಿರುವವನೇ! ಗೋಪಿಕಾ ಜನರಿಗೆ ಪ್ರಿಯವಾದ ಚರಿತ್ರೆಯುಳ್ಳವನೇ!



ಧಾರಾವಾಹಿ

# ತಿರುಮಲೆ ಕಾಲಮಾನಾಚರಣೆಗಳು

- ಮೂಲ . ಡಾ॥ ಎನ್.ಸಿ.ವಿ. ನರಸಿಂಹಾಚಾರ್ಯ

- ಅನುವಾದ : ಶ್ರೀಮತಿ

ಕಾಸರಯೋಗಿ (ಪೊಯ್‌ಗೈ ಆಳ್ವಾರು) ವಿರಚಿತ ಭಕ್ತಿ ನಿಬದ್ಧವಾದ ವಾಗ್ರೂಪಮಾಲಿಕೆಯಿಂದ ಅಲಂಕರಿಸಲ್ಪಟ್ಟಿರುವ ಕಮಲ ಮನೋಜ್ಞವಾದ ಪಾದಗಳನ್ನು ಹೊಂದಿರುವವನೇ!

ಗೋಪಾಲಪಾಲಕನೇ! ವಸು ದೇವ ಪುತ್ರನೇ! ಕೃಷ್ಣಾ ಗೋಕುಲನಾಥ! ಗೋವಿಂದರಾಜಾ! ಜಯಶೀಲನಾಗಿರುವವನೇ!

ಶ್ರೀ ಭೂತಯೋಗಿ (ಪೂದತ್ತಾಳ್ವಾರು)ರಿಂದ ಸೃಷ್ಟಿಸಲ್ಪಟ್ಟಿರುವ ಬೆಳಕು ಚೆಲುವ ಜ್ಞಾನಪ್ರದೀಪದಲ್ಲಿ ಉತ್ತಮವಾಗಿ ವರ್ಣಿ

ವಿಚಿತ್ರ ವೇಷಾ! ಗೋಪಪ್ರಭು! ಗೋವಿಂದರಾಜಾ! ಜಯಶೀಲ ನಾಗಿರುವಿ! ಪೊಯ್‌ಗೈ ಆಳ್ವಾರರು, ಪೂದತ್ತಾಳ್ವಾರರು, ಪೇಯಾಳ್ವಾರರನ್ನು ಭಗ ವಂತನು ಖಂಡಿತಾ ಗಮನಿಸುವನಲ್ಲದೇ ಮತ್ತೇನು!

ಶ್ರೀಮತ್ತ್ವದೀಯ ಪದಪಂಕಜ ಭಕ್ತಿ ನಿಷ್ಠ
ಶ್ರೀ ಭಕ್ತಿಸಾರ ಮುನಿನಿಶ್ಚಿತ ಮುಖ್ಯತತ್ತ್ವ
ಗೋಪೀಜನಾರ್ತಿಪರ ಗೋಪ ಜನಾಂತರಂಗ
ಗೋವಿಂದರಾಜ ವಿಜಯಿ ಭವ ಗೋಪರತ್ನ

(ಸಿರಿಯಂಥ ನಿನ್ನ ಪದ ಕಮಲಗಳಲ್ಲಿ ದೃಢಭಕ್ತಿಯಿಂದ ಶ್ರೀಭಕ್ತಿ ಸಾರ (ತಿರುವಳಿಶೈ ಆಳ್ವಾರರು) ಮುನಿಯಿಂದ ನಿಶ್ಚಯಿಸಲ್ಪಡುವ ನಿಜ ಸ್ವ ರೂಪವನ್ನು ಹೊಂದಿರುವವನೇ! ಗೋಪಿಕಾಬಾಧಾಪರಿಹಾರಾ! ಗೋಪ ಜನಾಂತರಂಗಾ! ಗೋಪಾಲಮಣಿ! ಗೋವಿಂದರಾಜಾ! ಜಯಶೀಲನಾಗು)

ಶ್ರೀ ಭಕ್ತಿ ಸಾರಯೋಗಿ (ತಿರುಮಳಿಶೈ ಆಳ್ವಾರರು) ಭಗವಂತನಿಂದ ಅನುಗ್ರಹಿಸಲ್ಪಟ್ಟವರಲ್ಲವೇನು!

ಶ್ರೀಮತ್ಪರಾಂಕುಶಮುನೀಂದ್ರ ಸಹಸ್ರಗಾಥಾ
ಸಂಸ್ತೂಯಮಾನ ಚರಣಾಂಬುಜ ಸರ್ವಶೇಷನ್
ಗೋಪಾಲವಂಶತಿಲಕಾಚ್ಯುತ ಪದ್ಮನಾಭ
ಗೋವಿಂದರಾಜಾ! ವಿಜಯೀಭವ ಗೋಪವೇಷ

(ಶ್ರೀಮತ್ಪರಾಂಕುಶ (ನಮ್ಮಳ್ವಾರು) ಗ್ರಥಿತಿಗಾಥಾ ಸಹಸ್ರದಿಂದ ಸ್ತುತಿಸಲ್ಪಡುತ್ತಿರುವ ಚರಣ ಕಮಲಗಳಿರುವಾ ತನೇ! ಸರ್ವ ಚೇತನಗಳಿಗೆ ಶೇಷಿಭೂತನೇ! ಗೋಪಾಲ ಕುಲ ಭೂಷಣಾ!ಪದ್ಮನಾಭಾ!ಗೋಪಾಲವೇಷಾ! ಗೋವಿಂದ ರಾಜಾ! ಜಯಶೀಲನಾಗು.)

ನಮ್ಮ ಶಠಗೋಪುರ (ನಮ್ಮಾಳ್ವಾರು) ವನ್ನು ಭಗವಂತನು ಅನುಗ್ರಹಿಸದೆ ಮತ್ತೇನು!

ಶೇಷಾಚಲೇ ಮಹತಿ ಪಾದಸ ಪಕ್ಷಿಜನ್ಮ
ತ್ವದ್ಭಕ್ತಿತಃ ಸ್ಪೃಹಯಿತಾ ಕುಲಶೇಖರೇಣ
ರಾಜ್ಞಾ ಪುನಃ ಪುನರುವಾಸಿತ ಪಾದಪದ್ಮ
ಗೋವಿಂದರಾಜಾ ವಿಜಯಿ ಭವ ಗೋರಪಜ್ಞ

(ನಿನ್ನಲ್ಲಿನ ಭಕ್ತಿ ಅತಿಶಯದಿಂದಲೇ ಶೇಷಾಚಲದಲ್ಲಿರುವ ಗಿಡವಾಗಿದ್ದೇನೆ, ಗಂಟೆಯಾಗಿದ್ದೇನೆಂಬ ಜನ್ಮದಭಿಲಾಷೆಯಿಂದ ಶ್ರೀ ಕುಲಶೇಖರ ಮಹಾರಾಜನು ರಾಜನ ಕರಗಳಿಂದಲೇ ಮತ್ತೆ ಮತ್ತೆ ಉಪಾಸನೆ ಮಾಡಿದ ಚರಣ ಹೊಂದಿರುವವನೇ! ಆಕಳಿನ ಹಾಲಿನ ರುಚಿ ಯುಂಡವನೇ ಗೋವಿಂದರಾಜಾ! ಜಯಶೀಲನಾಗಿ ಬಾ ! )

ಶ್ರೀ ಕುಲಶೇಖರಾಳ್ವಾರರನ್ನು ಭಗವಂತನು ಅನುಗ್ರಹಿಸದಿರಲೇನು?

ಶ್ರೀವಿಷ್ಣುಚಿತ್ತ ಕೃತ ಮಂಗಳ ದಿವ್ಯಸೂಕ್ತೇ
ತನ್ಮಾನಸಾಂಬುರೂಪಕಲ್ಪಿತ ನಿತ್ಯವಾಸ
ಗೋಪಾಲಬಾಲಯುವತೀವಿಟ ಸಾರ್ವಭೌಮ
ಗೋವಿಂದರಾಜ ವಿಜಯೀ ಭವ ಗೋವೃಷೇಂದ್ರ)

ಶ್ರೀವಿಷ್ಣುಚಿತ್ತ ದಿವ್ಯಸೂರಿಯ (ಪೆರಿಯಾಳ್ವಾರು) ರಿಂದ ರಚಿಸಲ್ಪಟ್ಟಿ ರುವ ಮಂಗಳಕರ ದಿವ್ಯಸೂಕ್ತದಲ್ಲಿರುವವನೇ!

ಅವನ ಹೃದಯ ಕಮಲದಲ್ಲಿ ನಿತ್ಯನಿವಾಸವನ್ನು ಕಲ್ಪಿಸಿಕೊಂಡವನೇ! ಗೋಪಮುಗ್ಧಾಂಗನೆ ವಿಟ ಸಾರ್ವ ಭೌಮ ! ಧೇನುವೃಷಭಪಾಲಕ! ಗೋವಿಂದರಾಜಾ! ಜಯಶೀಲನಾಗಿರು!)

- ಮುಂದುವರೆಯುತ್ತದೆ.



ರಸಪ್ರಶ್ನೆಗಳು

## ಡಿಸೆಂಬರ್ 2023 ತಿಂಗಳ ರಸಪ್ರಶ್ನೆಯ ಉತ್ತರಗಳು

1. ಕುಂಭಾಸುರ
2. ಶ್ರೀರಾಮ
3. ಯಮ ಮತ್ತುಶನಿ
4. ಗೋವುಗಳನ್ನು
5. ಪರಂಜ್ಯೋತಿ
6. ಭಕ್ತಿ
7. ವೈಶಾಖಮಾಸ
8. ವಿಜಯನಗರ
9. ಸುಂಕೇನಹಳ್ಳಿ
10. ಮುಕ್ಕೋಟಿ ದ್ವಾದಶಿ
11. ಮದ್ದೂರು
12. ಭಾಷ್ಯಕಾರರಿಗೆ
13. ಶಿವನಿಗೆ
14. ಲೋಕನಾಥಸ್ವಾಮಿ
15. ಹಸು



# ಆಳ್ವಾರುಗಳು ಕಂಡ ತಿರುವೇಂಗಡ

- ಎಂ. ಆರ್. ನರಸಿಂಹನ್

ಶ್ರೀಪೇಯಾಳ್ವಾರ್ ಅವರ 'ಮೂನ್ರಾಂ ತಿರುವಂದಾದಿ' ಯಲ್ಲಿ ವೇಂಗಡದ ನಾಮ ನಿರ್ದೇಶನದ ಬಗ್ಗೆ ಈ ಪಾಶುರದಿಂದ ಕೆಲ ಅಂಶಗಳು ಮನಗಾಣಬಹುದು ಎಂದು ನನ್ನ ಅನಿಸಿಕೆ.

ಶಾರ್ನ್ದ ಅಗಡು ತೇಯ್ಟ ತಡಾವಿಯ ಕೋಡು ಉಚ್ಚಿವಾಯ್
ಊರ್ನ್ದ ಇಯಂಗು ವೆಣ್ ಮದಿಯಯಿನ್
ಒಣ್ ಮುಯಲೈಶೇರ್ನ್ದ
ಶಿನ ವೇಂಗೈ ಪಾರ್ಕುಂ ತಿರುಮಲೈಯೇ ಅಯನ್
ಪುನ ವೇಂಗೈ ನಾರುಂ ಪೊರುಪ್ಪು

ಈ ಪಾಶುರದಲ್ಲಿ 'ವೇಂಗೈ' ಎನ್ನುವ ಪದವನ್ನು ಎರಡು ಅರ್ಥದಲ್ಲಿ ಉಪಯೋಗಿಸಲಾಗಿದೆ. ಬೆಟ್ಟದ ಮೇಲೆ ಸುಳಿಯುತ್ತಾ ಕೆಳಗಿಳಿಯುವ ಪೂರ್ಣಚಂದ್ರನು ಬೆಟ್ಟದ ಕೋಡನ್ನು ಸೋಕಲು ಸಾಣೆಯ ಚಕ್ರಕ್ಕೆ ಕೊಟ್ಟ ಕಬ್ಬಿಣದ ತಗಡಿನಂತೆ ಸವೆಯುತ್ತಾ ಬರುತ್ತಿದ್ದಾನಂತೆ.ಆ ಬಿಳಿಯ ಚಂದ್ರಮನು ದೊಡ್ಡದಾಗಿ ಕಾಣಿಸುವಾಗ, ಹೊಟ್ಟೆಯೊಳಗಿನ ಜಿಂಕೆ ಬೆಟ್ಟದ ಕೋಡನ್ನು ಸಮೀಪಿಸುವಾಗ, ಆ ಕೋಡಿನ ಮೇಲೆ ಹಸಿದು ಕುಳಿತ ಹುಲಿಯೊಂದು ಬೇಟೆಯೊಂದು ಸಮಾಗತವಾಗಲು ಅದನ್ನು ತಿನ್ನಲು ಘರ್ಜಿಸುತ್ತಾ ಮೇಲೇಳುವುದಂತೆ, ಇಂತಹ ಘರ್ಜಿಸುವ ಹುಲಿಯನ್ನು ವೇಂಗೈ ಎಂದಿದ್ದಾರೆ ಆಳ್ವಾರ್,ವೇಂಗೈ ಎಂದರೆ ಹುಲಿ.ಇಂತಹ ದಿವ್ಯ ಪರ್ವತವೇ ತಿರುಮಲೆ! ಅದರ ಮೇಲೆ ಎಲ್ಲೆಲ್ಲೂ ದಟ್ಟವಾಗಿ ಬೆಳೆದು ಕಂಗೊಳಿಸುವ 'ವೇಂಗೈ' ಎನ್ನುವ ಒಂದು ಜಾತಿಯ ಪುಷ್ಪದ ಪರಿಮಳ ಸಾಂದ್ರವಾಗಿ ಹರಡಿಕೊಂಡು ಆಹ್ಲಾದ ನೀಡುತ್ತಿರುವುದಂತೆ!

'ವೇಂಗೈ' ಎಂದರೆ ಹುಲಿ. 'ಈ ಪರ್ವತದ ಮೇಲೆ ಹುಲಿಗಳು ಹೇರಳವಾಗಿ ವಾಸಿಸುತ್ತಿದ್ದಿರಬಹುದಾದ ಕಲ್ಪನೆ ಈ ಪಾಶುರದಿಂದ ಲಭಿಸುತ್ತದೆ. ಕಾಡು ದಟ್ಟವಾಗಿ ಬೆಳೆದಿದ್ದು ಆಳ್ವಾರ್ ಪಾಶುರಗಳಲ್ಲಿ ಚಿತ್ರಿತವಾಗಿದೆ.ವೇಂಗಡದೊಡೆಯನನ್ನು ಬೇಟೆಗಾರನೆಂಬುದಾಗಿಯೂ ಜನ ಕರೆಯುತ್ತಾರೆ. ಈ ದೇವರು ಒಂದು ಕಾಲಕ್ಕೆ ಕುರುವರಿಗೂ, ಬೇಡರಿಗೂ ದೈವವಾಗಿತ್ತೆಂದು ರಾಮಚಂದ್ರರಾಯರು 'ತಿರುಪತಿ ತಿಮ್ಮಪ್ಪ'ದಲ್ಲಿ ಹೇಳಿದ್ದಾರೆ. ಆದ್ದರಿಂದ ಈ ಕಾಡು ಪ್ರದೇಶದಲ್ಲಿ ಹುಲಿಗಳು ಹೇರಳವಾಗಿ ಸಂಚಾರ ಮಾಡುತ್ತಿದ್ದರೆ ಆಶ್ಚರ್ಯವಿಲ್ಲ.ಈ ಮಲೆಸೀಮೆ ಆಂಧ್ರಪ್ರದೇಶದ ವಿಶಾಖಪಟ್ಟಣದಿಂದ ದಕ್ಷಿಣದ ನೀಲಗಿರಿಯವರೆಗೂ ವ್ಯಾಪ್ತಿಗೊಂಡಿರುವ ಪೂರ್ವ ಘಟ್ಟವೆಂದೂ ಹೇಳುತ್ತಾರೆ. ಅಲ್ಲಿನ ಮುಖ್ಯ ಪ್ರದೇಶಗಳಲ್ಲಿ ದಟ್ಟವಾದ ಅರಣ್ಯ ಇಂದಿಗೂ ವ್ಯಾಪ್ತಿಯಾಗಿದೆ. ಮಂಗಳಗಿರಿ, ಸಿಂಹಾಚಲ, ಅಹೋಬಿಲ, ಶ್ರೀಶೈಲ,ತಿರುಪತಿ ಮುಂದುವರೆದು ಕರ್ನಾಟಕದ ಮಹದೇಶ್ವರನ ಬೆಟ್ಟ, ಬಿಳಿಗಿರಿರಂಗನ ಬೆಟ್ಟದ ಮೂಲಕ ಸಾಗುತ್ತದೆ.ಈ ಪೂರ್ವಘಟ್ಟಗಳಲ್ಲಿ ಹುಲಿಗಳು ಹೇರಳವೆಂದು ಗುರುತಿಸಿದ್ದಾರೆ.ಮಹದೇಶ್ವರ,ಶ್ರೀಶೈಲದ ಮಲ್ಲಿಕಾರ್ಜುನರನ್ನೂ "ಹುಲಿವಾಹನದಯ್ಯ"ನೆಂದು ಜನ ಇಂದಿಗೂ ಕರೆಯು

ತ್ತಾರೆ. ಜಾತ್ರೆಗಳಲ್ಲಿ ಹುಲಿವಾಹನ ಮಾಡುತ್ತಾರೆ. ಈಶ್ವರನಿಗೆ ಹುಲಿ ವಾಹನವುಂಟು. ಸಾತ್ವಿಕಮೂರ್ತಿಯಾದ ವೆಂಕಟೇಶ್ವರ ನಿಗೆ ಬೇಟೆರಾಯನೆಂಬ ಹೆಸರಿದ್ದರೂ ಹುಲಿವಾಹನವಿಲ್ಲ, ಆದ್ದ ರಿಂದ ಹುಲಿಗಳು ಹೇರಳವಾಗಿ ವಾಸವಾಗಿದ್ದ ಈ ಬೆಟ್ಟಕ್ಕೆ "ವೇಂಗೈ+ಇಡಂ"ವೇಂಗಿಡಂ, ವೇಂಗಡಂ ಎನ್ನುವ ನಾಮ ನಿಷ್ಪತ್ತಿ ಇರುವುದರಲ್ಲಿ ಸಿಂಧುತ್ವವಿದೆ. ಹುಲಿ ವಾಹನದಯ್ಯ ಎನ್ನುವಂತೆಯೇ ಈ ದೇವರಿಗೂ ಹುಲಿ ಸಂಬಂಧವಾದ 'ವೇಂಗಡವನ್''ವೇಂಗಡತ್ತಾನ್' ಮೊದಲಾದ ಹೆಸರು ಹುಟ್ಟಿ ಕೊಂಡಿರಬಹುದೇ?

ಶ್ರೀನಿವಾಸನಿಗೆ ಸಿಂಹವಾಹನ ಮಾಡುವ ವಿಚಾರ ಈಚೆಗೆ ತಿಳಿದು ಬಂದಿತು. ಆದರೆ ಸಿಂಹ ಮೃಗರಾಜ, ಹುಲಿ ಗಿಂತ ಭಿನ್ನವಾದ ಪ್ರಾಣಿ. ಪ್ರಾಣಿಗಳಲ್ಲಿ ಆನೆ, ಸಿಂಹ ಇವುಗಳಿಗೆ ವಿಶಿಷ್ಟ ಸ್ಥಾನವುಂಟು, ಗೌರವವುಂಟು. ವಿಷ್ಣುವಿನ ಅವತಾರ ವಾದ ನರಸಿಂಹಾವತಾರದಲ್ಲಿ ಆತ ಸಿಂಹರೂಪ ಧರಿಸಿದ್ದ. ಹುಲಿ ಸಿಂಹದಷ್ಟು ಗೌರವ ಪಡೆದಿಲ್ಲ. ಸಿಂಹದ ಗಾಂಭೀರ್ಯ. ವೈಭವ, ಸೊಬಗು, ಆಕರ್ಷಣೆ ಇದಕ್ಕೆ ಇಲ್ಲ. ಇದು ಕುಟಿಲ ಪ್ರಾಣಿಗಳೊಂದಿಗೆ ವರ್ಗೀಕೃತವಾಗಿದೆ. ಆದ್ದರಿಂದ ಸಿಂಹ ರಾಜಸ, ತಾಮಸ ಪ್ರಕೃತಿಗೆ ಸೇರಿದ್ದಲ್ಲ ಎಂದು ತೋರುತ್ತದೆ. ಮತ್ತಾವ ವಿಷ್ಣು ದೇವರುಗಳಿಗೆ ಸಿಂಹಾವಾಹನವುಂಟೋ ಗೊತ್ತಿಲ್ಲ.

"ಪುನವೇಂಗೈನಾರುಂ ವೋರುಪ್ಪ" ಎಂದು ಆಳ್ವಾರ್ ವರ್ಣಿಸಿದ್ದಾರೆ ! ಈ ಪರ್ವತದ ಉದ್ದಗಲಕ್ಕೂ ವೇಂಗೈ ಎನ್ನುವ ಸುವಾಸನಾಭರಿತವಾದ ಪುಷ್ಪ ಆವೃತವಾಗಿದ್ದ ಚಿತ್ರ ನಮ್ಮ ಕಣ್ಮುಂದೆ ಸುಳಿಯುತ್ತದೆ. ಈ ಸಂದರ್ಭದಲ್ಲಿ ನನಗೆ ನನ್ನ ಒಂದು ಅನುಭವ ನೆನಪಿಗೆ ಬರುತ್ತದೆ. ನಾನು ಕೊಡಗಿನಲ್ಲಿ ಉದ್ಯೋಗಿಯಾಗಿದ್ದಾಗ ಅಲ್ಲಿನ 'ಪೊಲ್ಲಿಬೆಟ್ಟ' ಎನ್ನುವ ಸ್ಥಳಕ್ಕೆ ಹೋಗಿದ್ದೆ ಅಲ್ಲಿ ಸುತ್ತಲೂ ಬೆಟ್ಟ ಗುಡ್ಡಗಳು, ಮಧ್ಯೆ ತಗ್ಗಾದ ಭೂಮಿಯಲ್ಲಿ ಊರು, ಆ ಬೆಟ್ಟಗಳೆಲ್ಲಾ ಕಾಫೀ ಗಿಡಗಳಿಂದ ಆವೃತವಾಗಿದೆ. ಬರೀ ಹಸಿರೇ ಕಣ್ಣಿಗೆ ಹಬ್ಬ ನೀಡುತ್ತದೆ. ಕೊಡ ಗರು "ಬ್ಲಾಸಮಿಂಗ್ ಸೀಸನ್' (Blossaming season) ಎಂದು ಕರೆಯುವ ಏಪ್ರಿಲ್-ಮೇ ತಿಂಗಳಲ್ಲಿ ಈ ಪ್ರಾಂತ್ಯ ಒಟ್ಟಿಗೆ ಹೂ ಬಿಡುತ್ತದೆ. ಈ ಹೂವಿನ ಬಿಳಿಯ ಬಣ್ಣ ಆ ಹಸಿರು ಪ್ರದೇಶವನ್ನೆಲ್ಲಾ ಮರೆಸಿ ಬಿಡುತ್ತದೆ. 'ಘಂ' ಎನ್ನುವ ಸುವಾಸನೆ ಎಲ್ಲೆಡೆಯಿಂದಲೂ ನಮ್ಮ ಮನ ತಣಿಸುತ್ತದೆ. ಈ ದಿವ್ಯದೃಶ್ಯ ನಾಲ್ಕಾರು ದಿನಗಳು ಮಾತ್ರ ಲಭ್ಯ, ಪ್ರತಿವರ್ಷ, ನಮ್ಮನ್ನು ಬೇರೆ ಲೋಕಕ್ಕೆ ಕೊಂಡೊಯ್ಯುತ್ತದೆ. ಈ ತಿರುಮಲೆಯ ಮೇಲೆಯೂ ಒಂದು ಕಾಲಕ್ಕೆ ವೇಂಗೈ ಪುಷ್ಪಗಳು ಹೀಗೆ ರಂಜಿಸುತ್ತಿದ್ದಿರ ಬಹುದಾದ ಚಿತ್ರ ಕಣ್ಣ ಮುಂದೆ ಸುಳಿಯುತ್ತದೆ. ಈ ಪುಷ್ಪಗಳು ಕೇವಲ ಒಂದು ಋತುವಿಗೆ ಮಾತ್ರ ಸೀಮಿತವಾಗದೇ ಸರ್ವದಾ ಆನಂದ ನೀಡುತ್ತಿದ್ದಿತೋ ಏನೋ! ಇದನ್ನು ಊಹಿಸಿಕೊಳ್ಳ ಬಲ್ಲವನೇ ನಿಜಕ್ಕೂ ರಸಋಷಿ! ಅಂತಹವನೇ ವೇಂಗಡಕ್ಕೆ 'ವೇಂಗೈ+ಇಡಂ' (ವೇಂಗೈ ಪುಷ್ಪಗಳಿಂದ ನಿಬಿಡವಾದ ಜಾಗ) ಎಂದೇನಾದರೂ ನಾಮಕರಣ ಮಾಡಿದನೆ?


ತಮಿಳಿನಲ್ಲಿ ವಿಜಯಗಳಿಸಿದವನನ್ನು 'ವೇಂದನ್' ಎಂದು ಪ್ರಶಂಸಿಸುತ್ತಾರೆ. ಇದರಿಂದಲೇ ರಾಜ ಚಕ್ರವರ್ತಿಗಳನ್ನು 'ವೇಂದನ್'ಎಂಬುದಾಗಿ ಕೀರ್ತಿಸುತ್ತಿದ್ದರೇನೋ? 'ವೇಂದನ್' ಎನ್ನುವುದರ ಪರ್ಯಾಯ ಪದ 'ವೇನ್' ಎನ್ನುವುದಾಗಿದ್ದಿತೆ? ವೆಟ್ರಿ, ವೆಟ್ರಿಲೈ ಮುಂತಾದ ವಿಜಯ ಸೂಚಕ ಪದಗಳು ವೇನ್ ಅಥವಾ ವೆನ್ ಧಾತುವಿನಿಂದ ಆ ವಿರ್ಭವಿ ಸಿರಬೇಕೆಂದು ನನ್ನ ಊಹೆ. ವೆಟ್ರಿ ಎಂದರೆ ವಿಜಯ ವೆಟ್ರಿಲೈ ಎಂದರೆ ಯುದ್ಧಕ್ಕೆ ಹೊರಡುವಾಗ ಶೂರರಿಗೆ ನೀಡುತ್ತಿದ್ದ ವೀಳ್ಯ. ಈ ವೇನ್ ಅಥವಾ ವೆನ್ ಧಾತು ವಿಜಯ ಸೂಚಕ ಅರ್ಥದ್ದು. ಹಾಗೆ ವೇಂಗಡಂ 'ವಿಜಯಸ್ಥಾನ' ಎನ್ನುವ ಅರ್ಥ ಬರುವ ರೂಪಾಂತರವೇ! ಭಾಷಾಕೋವಿದರು ತಿಳಿಸಬೇಕು.

ಈಚೆಗೆ Lifco ರವರು ಪ್ರಕಟಿಸಿರುವ ತಮಿಳು - ತಮಿಳು - ಇಂಗ್ಲೀಷ್ ನಿಘಂಟನ್ನು ನೋಡುವ ಸಂದರ್ಭದಲ್ಲಿ ವೇಂಗೈ ಎನ್ನುವ ಪದಕ್ಕೆ ನಾಲ್ಕು ಅರ್ಥ ವಿವರಣೆಯನ್ನು ನೋಡಿದೆ. 1. ಬಂಗಾಳದ ಹುಲಿ. 2. ಒಂದು ಬಗೆಯ ಮರ (East Indian Kino tree) 3.ವೇಂಗೈ ನಾಡು Vengai Country Comprising the Godavari & Krishna Districts ruled by the Cholas in 10th and 11th Centures 4. ಒರು ಮಲೈ The Vengadam Hill.

ಹುಲಿಯ ವಿಚಾರ ಮೇಲೆ ಹೇಳಿದ್ದಾಯಿತು. ಎರಡನೆಯ ಅರ್ಥ Kino Tree ಎಂದಿದ್ದಾರೆ. ಹೊನ್ನೇ ಮರಕ್ಕೆ ಈ ಹೆಸರೆಂಬುದಾಗಿ "Forest Trees"ಎನ್ನುವ ಪುಸ್ತಕದಲ್ಲಿ ಅರಣ್ಯ ಸಸ್ಯವನ್ನು ವರ್ಗೀಕರಿಸಿದ್ದಾರೆ. ಮತ್ತೊಂದು ಜಾತಿಯ ವೃಕ್ಷವಾದ ಪಲಾಶ ಮರವನ್ನು Pulas Kino ಎಂದು ಕರೆಯುತ್ತಾರೆಂಬ ವಿವರಣೆ ಇದೆ. ಪಲಾಶ ಎಂದರೆ ಮುತ್ತುಗದ ಮರ." When in full blossom, the tree is conspicuous object throughout the above Districts" ಎಂದು ವಿವರಿಸುತ್ತಾರೆ. ಗ್ರಂಥಕರ್ತರು. ಆದರೆ ಈ ಎರಡು ಮರಗಳ ಲ್ಲಿಯೂ ಸುವಾಸನೆಯಾದ ಪುಷ್ಪಗಳು ಬಿಡುವುದಿಲ್ಲ ಎಂದು ನನ್ನ ತಿಳುವಳಿಕೆ. ಮುತ್ತುಗದ ಹೂ ಕೆಂಪಗೆ ಮರವನ್ನೆಲ್ಲಾ ಆಕ್ರಮಿಸಿಕೊಂಡು ಕೆಂಡದಂತೆ ನಿಗಿನಿಗಿಸುತ್ತದೆ ಎಂಬ ವರ್ಣನೆ ಕೇಳಿದ್ದೇನೆ. Mysore University ಯ Dictionary ಯಲ್ಲಿ ಕಿನೋ ಎನ್ನುವ ಪದಕ್ಕೆ "ಔಷಧಿ ತಯಾರಿಕೆಯಲ್ಲೂ, ಚರ್ಮ ಹದ ಮಾಡುವುದರಲ್ಲಿಯೂ ಉಪಯೋಗಿಸುವ, ಕಾಚನ್ನು ಹೋಲುವ ಹಲವು ಮರಗಳಗೊಂದು" ನೀಡುವ ಮರ ಎಂಬುದಾಗಿಯೂ ಅರ್ಥವಾಗುತ್ತದೆ. ಅದು ಯಾವ ಮರ ವೆಂಬುದು ತಿಳಿಯುವುದಿಲ್ಲ. ಆ ವೃಕ್ಷದ ಹೂಗಳು ದಟ್ಟವಾಗಿ ಬಿಟ್ಟು ಸುವಾಸನೆಯನ್ನು ಸೂಸಬೇಕು. ಅಂತಹ ಮರಗಳು ಬೆಟ್ಟ ಪೂರ್ತಿ ಹೇರಳವಾಗಿ ಬೆಳೆಯಬೇಕು. ಇಂತಹ ಬೆಳೆ ಯಿಂದ ಕೂಡಿದ ಬೆಟ್ಟಕ್ಕೆ ವೇಂಗಡ ಎನ್ನುವ ಹೆಸರು ಪ್ರಚಾರ ದಲ್ಲಿರಬೇಕು.

- ಮುಂದುವರೆಯುತ್ತದೆ.

# ಶ್ರೀವೆಂಕಟಾಚಲ ಮಹಾತ್ಯೆ



ತೆಲುಗು ಮೂಲ – ಆಚಾರ್ಯ ಕೆ. ಸರ್ವೋತ್ತಮ ರಾವ್
ಅನುವಾದ – ಶ್ರೀಮತಿ. ಎಸ್. ಪಾರ್ವತಿ



ಹಿಂದಿನ ಸಂಚಿಕೆಯ ನಂತರ...

"ಶ್ರೀಹರಿಯು ಶ್ರೀ ಸತಿಯೊಂದಿಗೆ ವೆಂಕಟಾದ್ರಿಯಲ್ಲಿ ವಿಲಾಸದಿಂದ ವಿಹರಿಸುತ್ತಾ ಅಲ್ಲಿನ ರಮಣೀಯ ಸೌಂದರ್ಯಕ್ಕೆ ಮರುಳಾಗಿ ಸಂಚರಿಸುತ್ತಿದ್ದನು. ಆ ಸಮಯದಲ್ಲಿ ಒಬ್ಬ ವೃದ್ಧನನ್ನು ಕಂಡನು. ಎಲ್ಲಿಲ್ಲದ ಕರುಣೆ ಹುಟ್ಟಿತು. ಆತನು ಯಾರು? ಆ ವೃದ್ಧನ ಬಗ್ಗೆ ಶ್ರೀ ಹರಿಗೆ ಅಷ್ಟೊಂದು ಕರುಣೆ ಏಕೆ ಬಂದಿತು? ಎನ್ನುವುದನ್ನು ಸವಿವರವಾಗಿ ಹೇಳುತ್ತೇನೆ ಕೇಳಿ. ಈ ಕಥೆಯನ್ನು ಜಾಬಾಲಿ ನನಗೆ ಹೇಳಿದನು" ಎಂದು ಸೂತರು ಪ್ರಾರಂಭಿಸಿದರು.

ಶೌನಕಾದಿ ಮಹಾಮುನಿಗಳೇ, ಜಾಬಾಲಿ ಮುನಿ ಹೇಳಿರುವ ಕುಮಾರಧಾರ ಮಹಿಮೆಯ ಕುರಿತು ಈಗ ಹೇಳುತ್ತೇನೆ.

ತಿರುಮಲೆಯು ಪವಿತ್ರ ತೀರ್ಥಗಳ ಸ್ಥಳ ಎಂದು ಈಗಾಗಲೇ ಹೇಳಿದ್ದೇನೆ.ಆ ತೀರ್ಥಗಳಲ್ಲಿ ಮಾತ್ರವಲ್ಲದೆ, ಕುಮಾರಧಾರವೆಂಬ ಹೆಸರಿನ ತೀರ್ಥದೊಂದಿಗೂ ಸಂಬಂಧವಿದೆ. ಹಾಗೆಯೇ ಪವಿತ್ರೋದಕಗಳಿಂದ ಕೂಡಿದ ಈ ಧಾರಾ ಪ್ರಾಂತದಲ್ಲಿ ಕುಮಾರಸ್ವಾಮಿಯು ಸ್ವಲ್ಪ ಕಾಲ ನಿವಾಸ ಮಾಡಿರಬಹುದು. ಅಷ್ಟೇ ಅಲ್ಲದೆ ಒಬ್ಬ ವೃದ್ಧನು ಈ ಕುಮಾರಧಾರದಲ್ಲಿ ಸ್ನಾನ ಮಾಡಿ ಕುಮಾರನಾದನು. ಇದು ಸಾಮಾನ್ಯರು ಊಹಿಸಲಾಗದ ಮಹಿಮೆ.

ತಿರುಮಲೆ ಅರಣ್ಯ ಪ್ರಾಂತವಾಗಿದೆ. ಅದಲ್ಲದೆ ಅನೇಕ ಪರ್ವತ ಶಿಖರಗಳಿಂದ ಕೂಡಿದ ಅಂದವಾದ ಪ್ರದೇಶ.ಇಲ್ಲಿಗೆ ಬೇರೆ ಪ್ರದೇಶದ ಒಬ್ಬ ಅಪರಿಚಿತ ಬಂದನು. ಅವನು ವೃದ್ಧನೂ, ಬಲಹೀನನೂ ಇದ್ದ. ಕಳೆದು ಹೋಗಿದ್ದ ಮಗನನ್ನು ಕುಮಾರ 'ಕೌಂಡಿನ್ಯ' ಎಂದು ಅರಸುತ್ತ ಬರುತ್ತಿದ್ದನು. ಆದರೂ ಆತನಿಗೆ ಕುಮಾರನು ಕಾಣಿಸಲಿಲ್ಲ.ಕಾಲ್ನಡಿಗೆಯಲ್ಲಿ ವೆಂಕಟಾದ್ರಿ ಮಾರ್ಗದಲ್ಲಿ ಸಂಚರಿಸುತ್ತಿದ್ದಾಗ ಒಂದೆಡೆ ಹಸಿವೆಯಿಂದ ಬಳಲುತ್ತ, ಮತ್ತೊಂದೆಡೆ ಕುಮಾರನು ಸಿಗಲಿಲ್ಲ ಎನ್ನುವ ವೇದನೆಯಿಂದ ಬಳಲಿ ಕುಸಿದು ಬಿದ್ದನು. ಆದರೂ ವೃದ್ಧನು ತನ್ನ ಕೊನೆಯ ಇಚ್ಛೆಯನ್ನು ಮಗ ಈಡೇರಿಸಬಹುದೇನೋ ಎನ್ನುವ ಆಸೆಯಿಂದ "ಮಗನೇ ಕೌಂಡಿನ್ಯ ಎಲ್ಲಿದ್ದೀಯೋ?ಎಲ್ಲಿಗೆ ಹೋಗಿದ್ದೆಯೋ" ಎಂದು ವಾತ್ಸಲ್ಯದಿಂದ ಆರ್ತನಾದ ಮಾಡುತ್ತಿದ್ದನು. ಇವನ ಆರ್ತನಾದವನು ಯಾರು ಕೇಳಲಿಲ್ಲ. ಆದರೆ ಆದಿ ದೇವನೂ,ದೀನರಕ್ಷಕನು ರಕ್ಷಣೆಗೆ ಬಂದನು. ತಾನೇ ಆ ವೃದ್ಧನ ಮುಂದೆ ಪ್ರತ್ಯಕ್ಷನಾದನು.

"ಓ ವೃದ್ಧನೇ ಒಬ್ಬ ನರಪಿಳ್ಳೆಯೂ ಓಡಾಡದ ಇರುವೆಯೂ ಬಾರದ ದಟ್ಟಾರಣ್ಯದಲ್ಲಿ ಏಕೆ ಬಂದಿರುವೆ? ದೇಹದಲ್ಲಿ ಸ್ವಲ್ಪವೂ ತ್ರಾಣವಿರದಿದ್ದರೂ ಬದುಕುವ ಆಸೆಯೇ? ನೀನು ಇಲ್ಲಿ ಬಂದಿರುವ ಉದ್ದೇಶವಾದರೂ ಏನು? ಹೇಳು"ಎಂದನು. ಆಗ ವೃದ್ಧ ಬ್ರಾಹ್ಮಣನು "ನೀವು ಯಾರೋ ನನಗೆ ತಿಳಿಯದು. ನನ್ನನ್ನು ಕಾಪಾಡಿದ್ದೀರಿ. ನೀವ ಪುಣ್ಯಾತ್ಮರು ನನಗೆ ನನ್ನ ದೇಹದ ಬಗ್ಗೆ ಯಾವುದೇ ಆಸಕ್ತಿ ಇಲ್ಲ ಆದರೆ ಋಣ ತೀರಿಸಿಕೊಳ್ಳದೆ ಮರಣಿಸುತ್ತಿದ್ದೇನೆ ಎಂಬ ಚಿಂತೆ ನನ್ನನ್ನು ಕಾಡುತ್ತಿದೆ." ಎಂದನು.

ಸ್ವಾಮಿಯು ತಾಳ್ಮೆಯಿಂದ ಆ ವೃದ್ಧನ ಮಾತುಗಳನ್ನು ಕೇಳಿ, ಅವನ ಆಂತರ್ಯವನ್ನು ಅರ್ಥೈಸಿದರು. ಆತನನ್ನು ಮತ್ತೊಮ್ಮೆ ನೋಡಿ ಕೈ ಹಿಡಿದು ಮೆಲ್ಲಗೆ ಎಬ್ಬಿಸಿ ನಡೆಸುತ್ತ ಪಾವನ ತೀರ್ಥದ ಹತ್ತಿರ ಕರೆದುಕೊಂಡು ಬಂದರು. ತೀರ್ಥಜಲವನ್ನು ಕಂಡ ತಕ್ಷಣವೇ ವೃದ್ಧನಿಗೆ ಆರಾಮವೆನಿಸಿ,ತನ್ನ ವೇದನೆಯನ್ನು ತೀರಿಸಿಕೊಳ್ಳಲು ಸ್ನಾನ ಮಾಡಬೇಕೆಂದೇನಿಸಿತು. ಆ ಧಾರೆಯಲ್ಲಿ ಹಾಯಾಗಿ ಸ್ನಾನ ಮಾಡಿದನು. ಸ್ನಾನ ಮಾಡುತ್ತಿದ್ದಂತೆ ತನ್ನ ಶರೀರದಲ್ಲಿ ಯಾವುದೋ ಅಭೂತಪೂರ್ವ ಬದಲಾವಣೆ ಉಂಟಾಗಿರುವುದನ್ನು ಗಮನಿಸಿದನು.

ಸ್ನಾನ ಮುಗಿಸುತ್ತಿದ್ದಂತೆ ವೃದ್ಧನು ಯುವಕನಾದನು. ಈ ಘಟನೆಯಿಂದ ಆಶ್ಚರ್ಯಚಕಿತನಾದ ಕುಮಾರನು ಎಲ್ಲಾ ದಿಕ್ಕುಗಳಲ್ಲಿ ನೋಡುತ್ತಿದ್ದಂತೆ ಎದುರಿನಲ್ಲಿ ಸ್ವಾಮಿ ದರ್ಶನ! ಅಪದ್ಬಾಂಧವ, ಅನಾಥ ರಕ್ಷಕನಾದ, ಕೋರಿಕೆಗಳನ್ನು ಈಡೇರಿಸುವ, ದಯಾಮಯನಾದ ಸ್ವಾಮಿಯು ವಿಶ್ವರೂಪನಾಗಿ ದರ್ಶನ ನೀಡಿದನು. ಸಹಸ್ರಾಕ್ಷ, ಸಹಸ್ರಪಾದಗಳು, ಸಹಸ್ರ ತಲೆಗಳು, ಸಹಸ್ರ ಬಾಹುಗಳೊಂದಿಗೆ ಸ್ವಾಮಿ ಸಾಕ್ಷಾತ್ಕರಿಸುತ್ತಿದ್ದಂತೆ ದೇವದುಂದುಭಿಗಳು ಮೊಳಗಿದವು.ದೇವತೆಗಳು ಹೂವಿನ ಮಳೆ ಸುರಿಸಿದರು. ತಮ್ಮ ಆನಂದವನ್ನು ಸ್ತೋತ್ರ ರೂಪದಲ್ಲಿ ಸುವ್ಯಕ್ತಪಡಿಸಿದರು.ಅದಲ್ಲದೇ ಸ್ವಾಮಿಯು ಕುಮಾರನಾದ ವೃದ್ಧನನ್ನು ನೋಡಿ "ನೀನು ಬಡವ ಎಂದು ಕೊರಗಬೇಡ. ನೀನು ಧನ, ಧಾನ್ಯವಂತನಾಗುತ್ತೀಯ ದೇವಋಣ ತೀರಿಸಿಕೊಳ್ಳಲಾಗಲಿಲ್ಲವೆಂದು ವ್ಯಥೆಪಡಬೇಡ. ಹತ್ತಿರದಲ್ಲೇ ಇರುವ ಆಶ್ರಮಕ್ಕೆ ಹೋಗು ಯಾಗ ಮಾಡು.ಆ ಕೋರಿಕೆಯೂ ತೀರುತ್ತದೆ.'' ಎಂದು ಸ್ವಾಮಿಯು ಅಂತರ್ಧಾನನಾದನು.

ಆ ಬ್ರಾಹ್ಮಣನು ಹತ್ತಿರದ ಆಶ್ರಮಕ್ಕೆ ಹೋದನು. ಅಲ್ಲಿ ತನ್ನ ಶಕ್ತ್ಯಾನುಸಾರ ಧನ ಸಮೃದ್ಧಿಯಾಗವನ್ನು ಮಾಡಿದನು.

ಈ ಅದ್ಭುತವಾದ ದೃಶ್ಯವನ್ನು ಕಂಡ ದೇವತೆಗಳು ಆನಂದದಿಂದ 'ವಯೋ ವೃದ್ಧನಾಗಿ ಅಶಕ್ತನಾಗಿದ್ದ ಬ್ರಾಹ್ಮಣನು, ಈ ತೀರ್ಥದಲ್ಲಿ ಸ್ನಾನ ಮಾಡಿದುದರಿಂದ ದೇವತಾ ಕಾರ್ಯವನ್ನು ಪೂರ್ತಿ ಮಾಡಲೆಂದೇ ಬದುಕುಳಿದನು. ಸುಜಲ ಧಾರದಲ್ಲಿ ಸುಸ್ನಾನ ಮಾಡಿದ್ದರಿಂದ ಬಾಲಕುಮಾರನಾದನು ಅಲ್ಲವೇ! ತೀರ್ಥವು ಲೋಕ ಪ್ರಖ್ಯಾತವಾಗಬೇಕು ಎನ್ನುತ್ತಾ ಸಂಕಲ್ಪ ಪೂರ್ವಕವಾಗಿ ಯಾರ್ಯಾರು ಜಿತೇಂದ್ರಿಯರಾಗಿ ಮೂರು ಮಾಸಗಳು ಮೂರು ಹೊತ್ತು ಸ್ನಾನ ಮಾಡುತ್ತಾರೋ ಅಂತಹವರು ವಜ್ರದೇಹಿಗಳಾಗುತ್ತಾರೆ.ಅಂತಹವರಿಗೆ ಮುಪ್ಪೇ ಬಾರದು ಎಂದು ನಿರ್ಣಯ ರೂಪದ ವರಾನುಗ್ರಹವನ್ನು ಮಾಡಿದರು.

ಈ ವಿಷಯವನ್ನು ಜಾಬಾಲಿ ವಿಷದ ಪಡಿಸಿದ್ದು, ಆವೃತ್ತಾಂತವನ್ನೇ ನಿಮಗೂ ತಿಳಿಸಿರುವೆನೆಂದು ಸೂತನು ತಿಳಿಸಿದನು. ಇದಲ್ಲದೆ ವಾಲ್ಮೀಕಿ ಮಹರ್ಷಿಯು ನನಗೆ ಶಂಕಣ ಎಂಬ ರಾಜನ ಕಥೆ ಹೇಳಿದ್ದಾನೆ.ಆ ಕಥೆಯನ್ನು ಕೂಡ ನಿಮಗೆ ಹೇಳುವೆನು ಕೇಳಿ.

ಚಂದ್ರವಂಶದ ರಾಜ ಶಂಕಣ. ಆತನು ಕಾಲಾನುಕ್ರಮದಲ್ಲಿ ತನ್ನ ರಾಜ್ಯಾಧಿಕಾರವನ್ನು ಕಳೆದುಕೊಂಡನು ನಿಸ್ಸಹಾಯಕನಾದನು. ಕೊನೆಗೆ ಶತ್ರುಗಳು ದಂಡೆತ್ತಿ ಶಂಕಣ ರಾಜ್ಯವನ್ನು ವಶಪಡಿಸಿಕೊಂಡರು.ತಲೆಮರೆಸಿಕೊಳ್ಳಲು ಜಾಗವಿಲ್ಲದೆ, ತನ್ನ ರಾಜ್ಯದಲ್ಲಿ ವಾಸ ಮಾಡಲು ಆಗದೇ, ಶಂಕಣ ಅಡವಿಯನ್ನು ಪ್ರವೇಶಿಸಿದ. ಪುಣ್ಯತೀರ್ಥಗಳನ್ನು ದರ್ಶಿಸಲು ಪ್ರಯಾಣ ಬೆಳೆಸಿದನು.

ರಾಮೇಶ್ವರವನ್ನು ತಲುಪಿದನು.ರಾಮ ಸೇತುವಿನಲ್ಲಿ ಮುಳುಗೆದ್ದು ಕೃತಾರ್ಥನಾದನು. ಹಾಗೆ ದಾರಿ ಮಧ್ಯದಲ್ಲಿ ಸಿಗುವ ಸಾಕಷ್ಟು ಕ್ಷೇತ್ರಗಳನ್ನು ಸಂದರ್ಶಿಸುತ್ತಾ ತಿರುಚಾನೂರು ತಲುಪಿದನು. ಸುವರ್ಣ ಮುಖಿಯಲ್ಲಿ ಸ್ನಾನ ಮಾಡಿದನು. ಆ ನದಿ ತೀರದಲ್ಲಿ ಪದ್ಮ ಸರಸ್ಸಿನಲ್ಲಿಯೂ ಸಹ ಮುಳುಗೆದ್ದನು. ಆತನಿಗೆ ಶಾಂತಿ ಸಿಗಲಿಲ್ಲ.ಯಾವುದೋ ಹೇಳಲಾಗದ ವ್ಯಥೆ ಅವನನ್ನು ಕಾಡುತ್ತಿತ್ತು.

ನನ್ನ ರಾಜ್ಯವನ್ನು ಶತ್ರುಗಳು ಆಕ್ರಮಿಸಿದ್ದಾರೆ. ವಿರೋಧಿಗಳ ಬಣವನ್ನು ನಾನು ಧ್ವಂಸ ಮಾಡಲಾಗಲಿಲ್ಲ, ಸೋತಿದ್ದೇನೆ. ನನಗಿದ್ದ ಸರ್ವಸಂಪತ್ತನ್ನು ತ್ಯಜಿಸಿ ಒಂಟಿಯಾಗಿ ನಗರವನ್ನು ಬಿಟ್ಟು ಬಂದಿದ್ದೇನೆ. ಈ ಹಿಂದೆ ಎಲ್ಲವನ್ನೂ ಹೊಂದಿದ್ದ ನಾನು ಇಂದು ಭಿಕಾರಿಯಾಗಿದ್ದೇನೆ.ಉದರ ಪೋಷಣೆಯ ಮಾರ್ಗ ತಿಳಿಯುತ್ತಿಲ್ಲ. ಧರಿಸಲು ಕನಿಷ್ಟ ವಸ್ತ್ರಗಳು ಕೂಡ ಇಲ್ಲದಾಗಿವೆ. ರಾಜಭೋಗಗಳನ್ನು ಅನುಭವಿಸಿರುವ ನನಗೆ ಇಂತಹ ದುರ್ಗತಿ ಬರುತ್ತದೆಂದು ಕನಸಿನಲ್ಲೂ ಊಹಿಸಿರಲಿಲ್ಲ. ಇನ್ನು ನನ್ನ ಗತಿ ಏನು ಎಂದು ಅಂಗಲಾಚುತ್ತಾ ಸಾಗಿದನು. ಈ ದುಃಖವು ನಿದ್ರೆಯೇ ಬಾರದ ನಿದ್ರಾವಸ್ಥೆಯಲ್ಲಿ ದೂಡಿತು. ಆಗ ಅಶರೀರವಾಣಿಯು "ನಿರ್ಮಲಾತ್ಮಕನೇ,ದೈನ್ಯದಿಂದೇಕೆ ಹಲುಬುತಿದ್ದೀಯಾ? ಧೈರ್ಯ ತಂದುಕೊ, ಚಿಂತೆ ಮಾಡಬೇಡ. ಇಲ್ಲಿಂದ ಉತ್ತರ ದಿಕ್ಕಿನಲ್ಲಿ ಸ್ವಲ್ಪ ದೂರದಲ್ಲಿಯೇ ವೆಂಕಟಾದ್ರಿ ಇದೆ. ನೀನು ಅಲ್ಲಿ ಹೋಗು ಅದು ಸಾಮಾನ್ಯವಾದ ಸ್ಥಳವಲ್ಲ.ಚಿಂತೆಗಳನ್ನು ತೀರಿಸುವ ಚಿಂತಾಮಣಿ. ಅಲ್ಲಿ ಸ್ವಾಮಿ ಪುಷ್ಕರಣಿಯನ್ನು ದರ್ಶಿಸು. ಮೂರು ಹೊತ್ತು ಆ ಪುಷ್ಕರಣಿಯಲ್ಲಿ ಸ್ನಾನ ಮಾಡು.ಸ್ವಾಮಿಯನ್ನು ಶೋಡಶೋಪಾಚಾರದಿಂದ ಪೂಜಿಸು. ಆ ಸ್ವಾಮಿ ಅನುಗ್ರಹಿಸುತ್ತಾನೆ." ಎಂದು ನುಡಿಯಿತು.

ಆ ಅಶರೀರವಾಣಿಯಂತೆ ಶಂಕಣ ವೆಂಕಟಾದ್ರಿಯನ್ನು ತಲುಪಿದನು.ಸ್ವಾಮಿ ಪುಷ್ಕರಣಿಯನ್ನು ದರ್ಶಿಸಿದನು. ಪುಷ್ಕರಣಿಯಲ್ಲಿ ಸ್ನಾನ ಮಾಡಿದನು. ಅಶರೀರವಾಣಿ ನುಡಿದಂತೆ ಪೂಜಿಸಿದನು. ಸದಾ ಸರ್ವಾಂಗ ಸುಂದರನಾದ ಶ್ರೀನಿವಾಸನ ಧ್ಯಾನದಲ್ಲಿ ಮಗ್ನನಾದನು.ಶಂಕಣ ನಿಷ್ಠೆಗೆ ಸ್ವಾಮಿ ಕರುಣಿಸಿ, ಸಾಕ್ಷಾತ್ಕಾರಗೊಂಡನು.ದೇವತೆಗಳು ದೇವ ದುಂದುಭಿಗಳನ್ನು ಮೊಳಗಿಸಿದರು.ಹೂಮಳೆಯನ್ನು ಸುರಿಸಿದರು. ನೃತ್ಯ, ಗೀತೆಗಳಿಂದ ಸಂಭ್ರಮಿಸುತ್ತಿದ್ದಂತೆ ಶಂಕಣ ಸ್ವಾಮಿಯನ್ನು ಕುರಿತು "ದೇವದೇವಾ, ದೀನ ರಕ್ಷಕ, ನಿನ್ನ ಕೃಪಾಕಟಾಕ್ಷ ನನ್ನ ಮೇಲಿರಲಿ. ನನ್ನ ಪೂರ್ವಜರಿಗೆ ನೀನೇ ರಾಜ ಭೋಗಗಳನ್ನು ಕರುಣಿಸಿ ಕಾಪಾಡಿದ್ದೀಯ. ನಾನು ಆ ರಾಜ್ಯವನ್ನು ಉಳಿಸಿಕೊಳ್ಳಲಾಗಲಿಲ್ಲ.ಅವಕಾಶವನ್ನು ಕಳೆದುಕೊಂಡಿದ್ದೇನೆ.ನಾನು ಈಗ ಸಾಮಾನ್ಯ ವ್ಯಕ್ತಿ, ಸ್ವಾಮಿ ನನ್ನ ಶತ್ರುಗಳನ್ನು ಶಿಕ್ಷಿಸು. ನನ್ನ ರಾಜ್ಯವನ್ನು ನನಗೆ ಪ್ರಸಾದಿಸು"ಎಂದು ದೈನ್ಯದಿಂದ ಬೇಡಿ ಕೊಂಡನು.

ಸ್ವಾಮಿಯು ಶಂಕಣ, ಏತಕ್ಕೆ ಬಾಧೆ ಪಡುತ್ತೀಯ. ನಿನ್ನ ರಾಜ್ಯ ನಿನಗೆ ದಕ್ಕುತ್ತದೆ. ಪತ್ನಿ ಸಮೇತನಾಗಿ ನಿನಗೆ ಮತ್ತೆ ಪಟ್ಟಾಭಿಷೇಕ ನಡೆಯುತ್ತದೆ ಎಂದು ಅನುಗ್ರಹಿಸಿ ಅಂತರ್ಧಾನನಾದನು. ಶಂಖು ಬೆಟ್ಟವನ್ನು ಇಳಿದು ತನ್ನ ರಾಜ್ಯದ ಕಡೆ ತೆರಳಿದನು.

ಅಲ್ಲಿನ ರಾಜ್ಯಾಧಿಪತಿಗಳು ತಮ್ಮ ತಮ್ಮಲ್ಲೇ ಕಲಹಗಳಿಂದ ಹತರಾಗಿದ್ದರು.ಆ ದೇಶದ ಪ್ರಜೆಗಳು ರಾಜ್ಯಾಧಿಕಾರ ಇಲ್ಲದೆ ರಾಜನನ್ನು ಹುಡುಕುತ್ತಾ ಶಂಕಣನನ್ನು ಗುರುತಿಸಿ,ತಮಗೆ ರಾಜ ನೀವೇ ಆಗಬೇಕೆಂದು ಪ್ರಾರ್ಥಿಸಿದರು. ಶಂಕಣನು ಶ್ರೀವೆಂಕಟೇಶ್ವರ ವರಪ್ರಸಾದದಿಂದ ಕಾಂಬೋಜ ರಾಜ್ಯಾಧಿಪತಿ ಆದನು ಎಂದು ಸೂತರು ಹೇಳಿದರು.

- ಮುಂದುವರೆಯುತ್ತದೆ.



# ಫೆಬ್ರವರಿ ತಿಂಗಳ
# ರಾಶಿ ಫಲಗಳು

ಮೂಲ-ಬ್ರಹ್ಮಶ್ರೀ ತಂಗಿರಾಲ ವೆಂಕಟಕೃಷ್ಣ ಪೂರ್ಣಪ್ರಸಾದ್ ಸಿದ್ಧಾಂತಿ
ಅನುವಾದ- ಕೆ.ಎನ್.ಎಸ್



### ಮೇಷ
ಇತರರೊಡನೆ ವಾದವಿವಾದಗಳು ಒದಗಿ ಬಂದು ಮಾನಸಿಕ ಉದ್ರಿಕ್ತತೆಗೆ ದಾರಿ ಮಾಡುವ ಅವಕಾಶಗಳಿರುತ್ತವೆ. ಸದ್ಗುಣಗಳನ್ನು ಬೆಳಸಿಕೊಂಡು ಆಧ್ಯಾತ್ಮಿಕತೆಯಿಂದ ಸಾಗುವುದರಿಂದ ಪ್ರಯೋಜನವಾಗಲಿದೆ. ಪ್ರಯಾಣಗಳು ಒದಗಿಬರುತ್ತವೆ. ಆಕಸ್ಮಿಕವಾಗಿ ಧನಲಾಭಗಳಾಗುವ ಅವಕಾಶವಿದೆ. ಇದರಿಂದ ಆರ್ಥಿಕ ಪರಿಸ್ಥಿತಿ ಬೆಳವಣಿಗೆಯಾಗಲಿದೆ. ಭೂಲಾಭ ಒದಗಿ ಬರುತ್ತದೆ, ದೈವಬಲವಿರುತ್ತದೆ.

### ವೃಷಭ
ದೂರ ಪ್ರಯಾಣಗಳನ್ನು ಮುಂದೂಡುವುದು ಒಳಿತು. ಕುಟುಂಬ ಸದಸ್ಯರೊಂದಿಗೆ ಕಾಲ ಕಳೆಯುವುದರಿಂದ ಮನಶ್ಶಾಂತಿ, ಕುಟುಂಬ ಸದಸ್ಯರ ವಿಶ್ವಾಸವನ್ನು ಗೌರವಿಸಿ ಅವರನ್ನು ಪರಿಗಣನೆಗೆ ತೆಗೆದುಕೊಳ್ಳುವುದರಿಂದ ಕೌಟುಂಬಿಕ ವಿಷಯಗಳಲ್ಲಿ ಅಭಿವೃದ್ಧಿಯುಂಟಾಗಲಿದೆ. ಉದ್ಯೋಗ ವಿಷಯಗಳಲ್ಲಿ ಉತ್ತಮ ಫಲಿತಾಂಶಗಳನ್ನು ಆಶಿಸಬಹುದು. ತಕ್ಷಣವೇ ಉದ್ಯೋಗ ಪ್ರಾಪ್ತಿಯುಂಟಾಗಲಿದೆ.

### ಮಿಥುನ
ನ್ಯಾಯ ಪರವಾದ ಸಮಸ್ಯೆಗಳು ಬರುವ ಸಾಧ್ಯತೆಗಳಿವೆ.ಗೃಹವಾತಾವರಣದಲ್ಲಿ ಅನುಕೂಲಕರವಾದ ಹಾಗೂ ವಿಲಾಸಮಯವಾದ ಜೀವನವನ್ನು ಅನುಭವಿಸುವಿರಿ. ವ್ಯಾಜ್ಯ ತಕರಾರುಗಳಲ್ಲಿ ನಷ್ಟವಾಗುವ ಸಂಭವಗಳಿವೆ. ವಾಹನ ವಿಷಯಗಳಲ್ಲಿ ಸಾಕಷ್ಟು ಜಾಗ್ರತೆಯ ಅಗತ್ಯವಿದೆ. ತಿಳುವಳಿಕೆಯ ನಿರ್ಧಾರಗಳನ್ನು ಕೈಗೊಳ್ಳುವಿರಿ.

### ಕರ್ಕಾಟಕ
ಕುಟುಂಬದ ಸದಸ್ಯರೊಂದಿಗೆ ಸಹನೆಯನ್ನು ಪಾಲಿಸುವುದು ಅಗತ್ಯ. ವೃತ್ತಿ ಉದ್ಯೋಗ ವಿಷಯಗಳಲ್ಲಿ ಕೂಡ ಅವಸರದ ನಿರ್ಣಯಗಳಿಂದ ಹೊರಬರಬೇಕು. ಸಹೋದ್ಯೋಗಿಗಳಿಂದ ವಾದ ವಿವಾದಗಳುಂಟಾದಲ್ಲಿ ತಪ್ಪಿಸಿಕೊಳ್ಳಲು ಪ್ರಯತ್ನಿಸಬೇಕು.ವ್ಯವಹಾರ ಪ್ರತಿಬಂಧಕಗಳಿವೆ ಪ್ರತಿ ವಿಷಯಗಳಲ್ಲಿಯೂ ಪ್ರತಿರೋಧಗಳುಂಟಾಗುವ ಸಾಧ್ಯತೆಗಳಿವೆ.

### ಸಿಂಹ
ಸಂತಾನ ವಿಷಯದಲ್ಲಿ ಅಭಿವೃದ್ಧಿಯುಂಟಾಗಲಿದೆ. ಉನ್ನತ ಉದ್ಯೋಗ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿನ ವಿಜಯವು ಸಂತೋಷವನ್ನುಂಟು ಮಾಡಲಿದೆ. ನಿಮ್ಮ ಸ್ನೇಹಿತರು ಹಿತೈಷಿಗಳು ಕುಟುಂಬ ಸದಸ್ಯರು ನಿಮ್ಮ ಮಾತಿಗೆ ಗೌರವ ಕೊಟ್ಟು ನಿಮ್ಮೊಡನೆ ಉತ್ತಮವಾಗಿ ವ್ಯವಹರಿಸಲಿದ್ದಾರೆ. ಅವರು ನಿಮ್ಮೊಡನೆ ವ್ಯವಹರಿಸುವ ರೀತಿ ನಿಮ್ಮನ್ನು ಸಂತೋಷಗೊಳಿಸಲಿದೆ. ಆನಂದಕರವಾದ ಜೀವನವನ್ನು ಅನುಭವಿಸುವಿರಿ.

### ಕನ್ಯ
ಮನೆಯಲ್ಲಿ ಆಧ್ಯಾತ್ಮಿಕ ಶೋಭೆ ಪ್ರಕಾಶಿಸಲಿದೆ. ಭಕ್ತಿ ವೈರಾಗ್ಯಗಳುಂಟಾಗುವುದು. ವಿಶೇಷ ಧೈರ್ಯ ಮತ್ತು ಪ್ರಯತ್ನಗಳಿಂದ ಎಲ್ಲದರಲ್ಲೂ ವಿಜಯ ಸಾಧಿಸುವಿರಿ.ಅದೃಷ್ಟ ಸ್ಫುರಿಸಲಿದೆ. ವ್ಯವಸಾಯಗಾರರಿಗೆ ಬೆಳೆಗಾರಿಕೆಯಲ್ಲಿನ ಪಗತಿಯಿಂದ ಅನುಕೂಲಕರವಾಗಲಿದೆ. ಸಾಮಾಜಿಕ ಜೀವನ, ಗೃಹ ವಾತಾವರಣ ಅನುಕೂಲಕರವಾಗಿರುತ್ತದೆ.

### ತುಲಾ
ಶುಭವಾರ್ತೆಗಳು ಕೇಳಿಬರುತ್ತವೆ. ನಿಮ್ಮ ಒಡಹುಟ್ಟಿದವರೊಂದಿಗೆ ಸುಖಕರವಾದ ಸಮಯವನ್ನು ಕಳೆಯುವಿರಿ. ಸ್ನೇಹಿತರು ಬಂಧು ವರ್ಗದವರು ನಿಮಗೆ ಸಹಕರಿಸುತ್ತಾರೆ. ಕುಟುಂಬ ಸದಸ್ಯರೊಂದಿಗೆ ಶುಭಕಾರ್ಯಗಳು, ವಿನೋದ ಕೂಟಗಳಲ್ಲಿ ಪಾಲ್ಗೊಳ್ಳುವಿರಿ. ಅವಿವಾಹಿತರಿಗೆ ಈ ತಿಂಗಳು ಶುಭಕಾರ್ಯಸಿದ್ಧಿಯಾಗಲಿದೆ. ಭವಿಷ್ಯದ ಯೋಜನೆಗಳು ಫಲಕಾರಿಯಾಗಲಿವೆ. ವಸ್ತ್ರಾಭರಣೆ, ನೂತನ ವಾಹನಗಳನ್ನು ಖರೀದಿಸುವಿರಿ.

### ವೃಶ್ಚಿಕ
ಸಂಪತ್ತು ವೃದ್ಧಿಯಾಗಲಿದೆ. ವಿದ್ಯೆಯಲ್ಲಿ ಜಯ ಸಮಾಜದಲ್ಲಿ ಗುರುತಿಸಲ್ಪಡುತ್ತೀರಿ. ವಿವಾಹಾವಕಾಶಗಳು ಹೀಗೆ ಬಹಳ ಆನಂದಕರವಾದ ಸಂಘಟನೆಗಳನ್ನು ಊಹಿಸಬಹುದು. ನೂತನ ಯೋಜನೆಗಳನ್ನು ಸಿದ್ಧಪಡಿಸುವಿಕೆ ಕಾರ್ಯಾಚರಣೆಗಳಿಗೆ ಮುನ್ನುಡಿಯಾಗುವುದು.ಪುಷ್ಕಳ ಆರೋಗ್ಯ ಮಾನಸಿಕ ವಿಕಾಸವನ್ನನುಭವಿಸುವಿರಿ. ಆಸೆಪಟ್ಟ ಕೆಲಸಗಳು ಸದ್ಯದಲ್ಲೇ ಫಲಿಸಲಿದೆ.

### ಧನಸ್ಸು
ಅಂಜದೇ ಅಳುಕದೇ ಧೈರ್ಯದಿಂದ ವರ್ತಿಸಿ ಅಂದುಕೊಂಡ ಕಾರ್ಯಗಳನ್ನು ಪೂರ್ಣಗೊಳಿಸಿರಿ ಎಲ್ಲರ ಮನ್ನಣೆಯನ್ನು ಪಡೆಯುವಿರಿ. ವ್ಯವಹಾರದಲ್ಲಿ ಪ್ರತಿಕೂಲ ವರ್ಗದವರನ್ನು ಮಟ್ಟಹಾಕುವಿರಿ. ನಿಮ್ಮ ಪ್ರಯತ್ನಗಳು ಸಾನುಕೂಲ ಫಲಿತಾಂಶಗಳನ್ನು ನೀಡಲಿವೆ.ನೀವು ಅಂದುಕೊಂಡ ಫಲಗಳನ್ನು ಪಡೆಯುವಿರಿ. ನಿಮ್ಮ ಬಂಧುಗಳು,ಸ್ನೇಹಿತರು, ಕುಟುಂಬ ಸದಸ್ಯರು ನಿಮ್ಮನ್ನು ತುಂಬಾ ಗೌರವಿಸುವರು.

### ಮಕರ
ಹೊಸ ವ್ಯಕ್ತಿಗಳ ಪರಿಚಯ ಹೆಚ್ಚಾಗಲಿದೆ. ಹೊಸ ವ್ಯಕ್ತಿಗಳೊಂದಿಗೆ ವ್ಯಾಪಾರ ಒಪ್ಪಂದಗಳನ್ನು ಕರಾರು ಮಾಡಿಕೊಳ್ಳುವಿರಿ.ಸಂಪತ್ತು, ಆನಂದ ವಿದ್ಯೆಯಲ್ಲಿ ಜಯ, ಹೊಸ ವಿಷಯಗಳನ್ನು ವಿಶ್ಲೇಷಣೆ ಮಾಡುವುದು. ಸಂಶೋಧನಾ ವರ್ಗದಲ್ಲಿ ವಿಶೇಷ ಕೃಷಿ,ಇತರರನ್ನು ಶಾಸನ ಮಾಡುವಿರಿ. ಉದ್ಯೋಗಸ್ಥರಿಗೆ ವೃತ್ತಿಯಲ್ಲಿ ಪ್ರತಿಕೂಲ ವಾತಾವರಣ. ಕೆಲಸದಲ್ಲಿ ಅಧಿಕ ಒತ್ತಡ ನಿರಾಶೆಯನ್ನು ತರಲಿದೆ.

### ಕುಂಭ
ಕುಂಭರಾಶಿಯವರು ಭೂಮಿ ಅಥವಾ ಸ್ಥಿರಾಸ್ತಿಗಳನ್ನು ಖರೀದಿ ಮಾಡುವರು. ನೀವು ಮಾಡುವ ಪ್ರತಿಕಾರ್ಯದಲ್ಲೂ ನಿಮ್ಮ ಸ್ನೇಹಿತರ ಬೆಂಬಲವಿರುತ್ತದೆ. ನೀವು ಮಾಡಬೇಕಾದ ಪ್ರತಿಕಾರ್ಯದಲ್ಲೂ ನಿಮ್ಮ ಸ್ನೇಹಿತರ ನೈತಿಕ ಬೆಂಬಲ ನಿಮಗಿರುತ್ತದೆ. ತಿಂಗಳೆಲ್ಲಾ ವೃತ್ತಿ ವ್ಯಾಪಾರ ಉದ್ಯೋಗ ಸ್ಥರಿಗೆ ಅನುಕೂಲಕರವಾದ ಸಮಯ.

### ಮೀನ
ಸಮಸ್ತ ಐಶ್ವರ್ಯಗಳನ್ನು ಅನುಭವಿಸುವಿರಿ. ವ್ಯಾಪಾರಿಗಳು ಅಧಿಕ ಲಾಭಗಳನ್ನು ಅನುಭವಿಸುವಿರಿ. ಅನೇಕ ಮೂಲಗಳಿಂದ ಅಧಿಕ ಆದಾಯವನ್ನು ಅನುಭವಿಸುವಿರಿ. ವಿನೋದಕೂಟಗಳನ್ನು ಏರ್ಪಡಿಸುವಿರಿ. ಧನವ್ಯಯ ಮಾಡಲಿದ್ದೀರಿ. ಸಾಮಾಜಿಕವಾಗಿ ನಿಮ್ಮ ಅನುಸರಿಸುವಿಕೆ ಎಲ್ಲರನ್ನೂ ಒಟ್ಟು ಗೂಡಿಸುವಂತೆ ಮಾಡುತ್ತದೆ.



# ನಿಮ್ಮ ಸಂದೇಹಗಳಿಗೆ ನಮ್ಮ ಉತ್ತರಗಳು

– ಡಾ. ಅನಸೂಯ ಎಸ್.ರಾಜೀವ್

**1.ಮಾಘಸ್ನಾನದ ವಿಶೇಷವೇನು?**

**ಉತ್ತರ :** ಮಾಘಮಾಸದಲ್ಲಿ ಮಕರ ಸಂಕ್ರಮಣ ಮೊದಲುಗೊಂಡು ಕುಂಭ ಸಂಕ್ರಮಣದವರೆಗಾಗಲೀ,ಮಾಘಶುದ್ಧ ಪಾಡ್ಯಮಿ ಮೊದಲು ಮಾಘ ಬಹುಳ ಅಮಾವಾಸ್ಯೆಯವರೆಗಾಗಲೀ,ಪ್ರಾತಃಕಾಲದಲ್ಲಿ ಸೂರ್ಯೋದಯವಾಗುತ್ತಿರುವಾಗ ಪ್ರತಿಯೊಬ್ಬರೂ ಸ್ನಾನವನ್ನು ಆಚರಿಸಬೇಕು. ಸೂರ್ಯೋದಯವಾದ ಮೇಲೆ ಮಾಡುವ ಸ್ನಾನವು ವ್ರತವಾಗಲಾರದು. ಮಾಘಮಾಸದಲ್ಲಿ ಸೂರ್ಯೋದಯದ ಸಮಯದಲ್ಲಿ ಜಲಗಳೆಲ್ಲವೂ ಬಹಳ ಪವಿತ್ರವಾಗಿರುವುವು.ಮನೆಯಲ್ಲಿಯಾಗಲೀ, ತೀರ್ಥಸ್ಥಳದಲ್ಲಾಗಲೀ ಎಲ್ಲಿಯೇ ಸ್ನಾನವನ್ನು ಮಾಡಿದರೂ ಪ್ರಯಾಗವನ್ನೂ ಶ್ರೀಹರಿಯನ್ನೂ ಸ್ಮರಿಸುತ್ತಿರಬೇಕು. ಸ್ನಾನವನ್ನು ಸಂಕಲ್ಪಪೂರ್ವವಾಗಿ ಮಾಡಬೇಕು. ದುಃಖವನ್ನೂ, ದಾರಿದ್ರ್ಯವನ್ನೂ ನಾಶ ಮಾಡಲು ಅಘನಾಶಿನಿಯಾದ ಈ ಮಾಘಸ್ನಾನವನ್ನು ವಿಷ್ಣು ಪ್ರೀತಿಗಾಗಿ ಮಾಡುತ್ತಿದ್ದೇನೆ ಎಂದು ಪ್ರಾರ್ಥಿಸಿ ಅನಂತರ ಸ್ನಾನ ಮಾಡಬೇಕು. ಸೂರ್ಯನು ಮಕರ ರಾಶಿಯಲ್ಲಿರುವಾಗ ಮಾಘಮಾಸದಲ್ಲಿ ಪ್ರಾತಃಕಾಲದಲ್ಲಿ ಸ್ನಾನ ಮಾಡುವ ಮನುಷ್ಯನು ಸಮಸ್ತ ಪಾಪಗಳಿಂದ ಮುಕ್ತನಾಗುವನು. ಮಾಘಮಾಸದಲ್ಲಿ ಒಮ್ಮೆಯಾದರೂ ಸೂರ್ಯೋದಯಕ್ಕೆ ಮುಂಚೆ ನದೀಸ್ನಾನವನ್ನು ಮಾಡಿ ಆದಿತ್ಯಹೃದಯ ಪಠಿಸಿ, ನದಿಗೆ ಬಾಗಿನ ಸಮರ್ಪಣೆ ಮಾಡಿದಲ್ಲಿ ಮಹಾಪಾತಕ ನಾಶವಾಗುವುದು. ಬಲವಂತಕ್ಕೆ ಮಾಘಸ್ನಾನ ಮಾಡಿದರೂ ಪುಣ್ಯವುಂಟು. ಮಾಘಮಾಸದಲ್ಲಿ ಸ್ನಾನದಷ್ಟೇ ದಾನಕ್ಕೂ ಬಹಳ ಮಹತ್ವವಿದೆ. ಮಾಘಮಾಸದಲ್ಲಿ ಸತ್ಪಾತ್ರರಿಗೆ ದಾನ ಮಾಡಿದಲ್ಲಿ ಪುಣ್ಯಪ್ರಾಪ್ತಿಯಾಗುವುದು.

**2.ರಥಸಪ್ತಮಿಂದು ಸೂರ್ಯನ ಪೂಜೆ ಮಾಡುವುದರ ವೈಶಿಷ್ಟ್ಯವೇನು?**

**ಉತ್ತರ :** ಮಾಘಮಾಸದ ಶುಕ್ಲಪಕ್ಷದ ಸಪ್ತಮಿಯಂದು ಆಚರಿಸುವ ಅತ್ಯಂತ ಪವಿತ್ರವಾದ ಹಬ್ಬ ರಥಸಪ್ತಮಿ. ರಥಸಪ್ತಮಿಯನ್ನು ಅಚಲಾ ಸಪ್ತಮಿ ಎಂದೂ ಕರೆಯುತ್ತಾರೆ. ಕಾರಣವೆಂದರೆ ಅಚಲ ಎಂದರೆ ಸ್ಥಿರವಾದ ಫಲವನ್ನು ಅಕ್ಷಯವಾದ ಫಲವನ್ನು ಕೊಡುವ ದಿನ ಈ ಸಪ್ತಮಿ . ಹಾಗಾಗಿ ಈ ದಿನವನ್ನು ಬಹಳ ಭಕ್ತಿಯಿಂದ ಆರಾಧಿಸುವರು. ಆಕಾಶದಲ್ಲಿ ನಕ್ಷತ್ರಗಳೆಲ್ಲವೂ ಒಂದು ರಥಾಕಾರದಲ್ಲಿ ಮಾಘಮಾಸದ ಸಪ್ತಮಿಯಂದು ಕಾಣುತ್ತವೆ.ಇಂತಹ ಖಗೋಳ ವಿಶೇಷತೆಯನ್ನು ಸೂಚಿಸುವುದೇ ರಥಸಪ್ತಮಿಯ ಪರ್ವದಿನ. ಇದು ಸೂರ್ಯನ ಜನ್ಮದಿನ.ಆದಿತ್ಯನಲ್ಲಿ ಅಂತರ್ಯಾಮಿಯಾಗಿರುವ ಹಿರಣ್ಮಯ ನಾದ ಪುರುಷನನ್ನು ಉಪಾಸನೆ ಮಾಡುವುದು. ಸೂರ್ಯನ ಪೂಜೆ ಕೇವಲ ಭೌತಿಕವಾದ ಪೂಜೆಯಾಗದೆ ಆದಿತ್ಯನೊಳಗಿರುವ ಪರಂಜ್ಯೋತಿಯ ಉಪಾಸನೆಯಾಗಿರುತ್ತದೆ.

**3.ರಥಸಪ್ತಮಿಯಂದು ಎಕ್ಕದ ಎಲೆಗಳನ್ನಿಟ್ಟುಕೊಂಡು ಸ್ನಾನ ಮಾಡುವುದರ ವೈಶಿಷ್ಟ್ಯವೇನು?**

**ಉತ್ತರ :** ಅರ್ಕಸಮಿದ ಮಾದಿತ್ಯಾಯ ಸೂರ್ಯನಿಗೆ ಪ್ರಿಯವಾದ ಗಿಡ ಎಕ್ಕದ ಗಿಡ. ರಥಸಪ್ತಮಿಯು ಸೂರ್ಯನ ಜನ್ಮದಿನವಾದ್ದರಿಂದ ಎಕ್ಕದ ಎಲೆಗಳನ್ನಿಟ್ಟುಕೊಂಡು ಸ್ನಾನ ಮಾಡುತ್ತೇವೆ. ಎಕ್ಕದೆಲೆಯು ಕಟು, ಉಷ್ಣಕಾರಿ, ವಾತ, ವ್ರಣ, ಕುಷ್ಠ, ಕ್ರಿಮಿನಾಶಕ, ಕಫದೋಷನಿವಾರಕ, ಉದರರೋಗ ನಿವಾರಕ ಎಂದು ಆಯುರ್ವೇದಶಾಸ್ತ್ರ ಹೇಳುತ್ತದೆ. ಅದರ ಸ್ಪರ್ಶವು ಬ್ರಹ್ಮಚರ್ಯಕ್ಕೆ ವಿರುದ್ಧವಾದ ರಸವನ್ನು ಶೋಷಣೆ ಮಾಡುವುದಕ್ಕೆ ಮತ್ತು ಸೂರ್ಯದೇವತೆಯು ನಮ್ಮದೇಹದಲ್ಲಿರುವ ಕೇಂದ್ರಸ್ಥಾನಗಳನ್ನು ವಿಕಾಸಗೊಳಿಸುವುದಕ್ಕೆ ಸಹಾಯಕವಾಗಿದೆ. ಆದ್ದರಿಂದ ಅದು ಸೂರ್ಯನಾರಾಯಣನಿಗೆ ಪ್ರಿಯವೆನಿಸುತ್ತದೆ. ಏಳು ಸೂರ್ಯಾಶ್ವದ ಸಂಖ್ಯೆಯಾಗಿರುವುದರಿಂದ ಅಂದು ಏಳು ಎಕ್ಕದೆಲೆಗಳನ್ನಿಟ್ಟುಕೊಂಡು ಸ್ನಾನ ಮಾಡಬೇಕು. ಸಪ್ತಜನ್ಮಗಳಲ್ಲಿ ನಾನು ಯಾವ ಯಾವ ಪಾಪಗಳನ್ನು ಮಾಡಿದ್ದೇನೋ ಆ ರೋಗಗಳನ್ನು ಶೋಕವನ್ನೂ ಈ ಮಕರಮಾಸದ ಸಪ್ತಮಿಯ ಅಧಿ ದೇವತೆಯು ಧ್ವಂಸಮಾಡಲಿ. ನಾನು ಈ ಜನ್ಮದಲ್ಲಿ ಆಚರಿಸಿದ ಪಾಪ, ಜನ್ಮಾಂತರದಲ್ಲಿ ಸಂಪಾದಿಸಿದ ಪಾಪ,ಮನಸ್ಸು,ಮಾತು ಮತ್ತು ದೇಹಗಳಿಂದ ಉಂಟಾಗುವ ಪಾಪ ತಿಳಿದೋ,ತಿಳಿಯದೆಯೋ ಮಾಡಿದ ಪಾಪ ಎಂಬ ಸಪ್ತವಿಧ ಪಾಪಗಳನ್ನು ಸಪ್ತಾಶ್ವನಾದ ಸೂರ್ಯನಿಗೆ ಪ್ರಿಯವಾದ ಈ ಸಪ್ತಮಿಯು ತೊಲಗಿಸಲಿ ಎಂಬ ಅಭಿಪ್ರಾಯವಾಗಿದೆ.

**4.ಸೂರ್ಯನನ್ನು ಸಪ್ತಾಶ್ವ, ಸಪ್ತಸಪ್ತಿ ಎಂದು ಕರೆಯಲು ಕಾರಣವೇನು?**

**ಉತ್ತರ :** ಸೂರ್ಯಭಗವಂತನ ರಥವು ಒಂದೇ ಒಂದು ಸಂವತ್ಸರವೆಂಬ ಚಕ್ರವನ್ನು ಹೊಂದಿದೆ. ಅರುಣನೆಂಬ ಸಾರಥಿಯು ಈ ರಥಕ್ಕೆ ಗಾಯತ್ರೀ, ಬೃಹತೀ, ಉಷ್ಣಿಕ್, ಜಗತೀ, ತ್ರಿಷ್ಟುಪ್, ಅನುಷ್ಟುಪ್, ಪಂಕ್ತಿ ಎಂಬ ಏಳು ಛಂದಸ್ಸುಗಳೆಂಬ ಏಳು ಕುದುರೆಗಳನ್ನೂ ಹೂಡಿ ರಥವನ್ನು ನಡೆಸುತ್ತಿದ್ದಾನೆ. ಸೂರ್ಯನ ಲಕ್ಷಾಂತರ ಕಿರಣಗಳಲ್ಲಿ ಏಳನ್ನು ಮುಖ್ಯವಾಗಿ ಪರಿಗಣಿಸಲಾಗಿದೆ. ಸುಷುಮ್ನ, ಹರಿಕೇಶ, ವಿಶ್ವಕರ್ಮ, ವಿಶ್ವವ್ಯಾಸ, ಸಮತ್ವಸು, ಅರ್ವಗ್ವಸು, ಸ್ವರಾಟ.ಇವುಗಳನ್ನು ವಿಜ್ಞಾನದಲ್ಲಿ ಕಾಂತವರ್ಣರಾಜಿಗಳೆಂದು ಕರೆಯುತ್ತಾರೆ. ಕಾಸ್ಮಿಕ್ ಕಿರಣಗಳು, ಗಾಮಾ ಕಿರಣಗಳು, ಎಕ್ಸ್ ಕಿರಣಗಳು, ಅತಿನೇರಳೆ ಕಿರಣಗಳು, ಸಾಧಾರಣ ಬಿಳಿ ಬೆಳಕು, ಪರಾರುಣ ಕಿರಣಗಳು, ನಾನಾ ಉಷ್ಣ ಪ್ರಕಾಶ ಅಲೆಗಳು ಮತ್ತು ಸ್ರಾವಗಳು. ಈ ಏಳೂ ಪರತತ್ವಕ್ಕೆ ಸಂಬಂಧಿಸಿದೆ. ಆತ್ಮನಿಗೆ ಅಧೀನವಾಗಿರುವ ಸಪ್ತಪ್ರಾಣಗಳೇ ಪರಮಾತ್ಮಸೂರ್ಯನ ಸಪ್ತಾಶ್ವಗಳು.

ನೀತಿ ಕಥೆ

# ಶುಚಿತ್ವದಿಂದ ಸುಂದರ ಸಮಾಜ ನಿರ್ಮಾಣ

ಎ.ಆರ್. ರಘುರಾಮ
9916138436

ಶುಚಿತ್ವವೇ ದೈವತ್ವಕ್ಕೆ ಮೊದಲ ಹೆಜ್ಜೆ ಎನ್ನುತ್ತದೆ ಉಪನಿಷತ್ತು. ಧರ್ಮದ ಹತ್ತು ಲಕ್ಷಣಗಳಲ್ಲಿ ಶೌಚವೂ ಒಂದು. ದೇಹ ನಿರಂತರ ಮಲಿನವಾಗುವುದು ಪ್ರಕೃತಿ. ಅದನ್ನು ನಿತ್ಯ ನಿರ್ಮಲ ಗೊಳಿಸುವುದು ಸಂಸ್ಕೃತಿ.

ಬೆಳಗ್ಗೆ ಎದ್ದು ಪ್ರಾತರ್ವಿಧಿಗಳನ್ನು ಮುಗಿಸುವುದು, ಶೌಚಕ್ರಿಯೆ ನಂತರ ಕೈಕಾಲು ಸ್ವಚ್ಛ ಮಾಡಿಕೊಳ್ಳುವುದು, ಉಗುರುಗಳನ್ನು ಕತ್ತರಿಸಿಕೊಳ್ಳುವುದು, ಸ್ನಾನ ಮಾಡಿ ಶುಭ್ರ ವಸ್ತ್ರ ಧರಿಸುವುದು, ಅಡುಗೆಗೆ ಬಳಸುವ ತರಕಾರಿ,ಧಾನ್ಯಗಳನ್ನು ಶುಚಿಗೊಳಿಸುವುದು, ತಿನ್ನುವ ಮೊದಲು,ತಿಂದ ನಂತರ ತಟ್ಟೆ,ತಿನ್ನುವ ಸ್ಥಳ, ಕೈ ಬಾಯಿಗಳನ್ನು ಶುದ್ಧಮಾಡುವುದು, ಮನೆ ಮತ್ತು ಆವರಣವನ್ನು ಕಸರಹಿತವಾಗಿಟ್ಟುಕೊಳ್ಳುವುದು-ಇದೆಲ್ಲವೂ ನಮ್ಮ ಆರೋಗ್ಯಕ್ಕೆ ಪೂರಕವಾದ ಅಂಶಗಳು.

ಶಾಸ್ತ್ರೀಯವರು ಒಂದು ದಿನ ಮಧ್ಯಾಹ್ನ ಮನೆಗೆ ಊಟಕ್ಕೆ ಬಂದರು. ಕೋಣೆಯಲ್ಲಿ ಮಕ್ಕಳು ಸಾಕಷ್ಟು ಕಸ ಹರಡಿದ್ದರು. ಊಟ ಮಾಡುವುದನ್ನು ಮರೆತ ಶಾಸ್ತ್ರೀಯವರು ತಾವೇ ಕೊಠಡಿಯ ಸ್ವಚ್ಛತೆಗೆ ನಿಂತರು. ಚೆನ್ನಾಗಿ ಗುಡಿಸಿ ಕಸ ವನ್ನೂ ಎತ್ತಿ ಹೊರ ಹಾಕಿದರು. ಮನೆಯ ಒಳಗೆ ಮತ್ತು ಹೊರಗಿದ್ದ ಕಾವಲುಗಾರರು, ಭದ್ರತಾ ಸಿಬ್ಬಂದಿಗಳು ಇದನ್ನು ಕಂಡು ಮೂಕವಿಸ್ಮಿತರಾದರು. ಲಾಲ್‌ಬಹದ್ದೂರ್‌ಶಾಸ್ತ್ರೀಯವರು ಪ್ರಧಾನಿಯಾಗಿದ್ದಾಗ ಅವರ ಮನೆಯಲ್ಲೇ ನಡೆದ ಪ್ರಸಂಗವಿದು.

ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿ ಕೂಡ ಸ್ವಚ್ಛತೆಯ ಪರಿಪಾಲಕರು, ಸಾಬರಮತಿ ಆಶ್ರಮದಲ್ಲಿ ಶೌಚಗೃಹವನ್ನು ಸ್ವಚ್ಛ ಮಾಡಲು ಅವರೇ ಮುಂದಾಗುತ್ತಿದ್ದರು.

ಅವರ ಪತ್ನಿ ಕಸ್ತೂರಬಾ ಸೇರಿದಂತೆ ಆಶ್ರಮಕ್ಕೆ ಬಂದ ಎಲ್ಲರೂ ಸ್ವಚ್ಛತಾ ಕಾರ್ಯದಲ್ಲಿ ಭಾಗವಹಿಸುವುದು ಕಡ್ಡಾಯ ವಾಗಿತ್ತು.

ಸಾರ್ವಜನಿಕ ಸ್ಥಳದ ಕಸ ಎಸೆಯುವುದು, ಅದನ್ನು ತೆಗೆಯುವುದು ನಮ್ಮ ಕೆಲಸವಲ್ಲ, ಇದಕ್ಕಾಗಿ ನಗರ ಸಭೆ, ಪಾಲಿಕೆ ಸಿಬ್ಬಂದಿಗಳಿದ್ದಾರೆ ಎಂದು ಧೋರಣೆ ತಾಳುವುದು ಜವಾಬ್ದಾರಿಯುತ ನಾಗರೀಕನ ಲಕ್ಷಣವಲ್ಲ. ಚಿಕ್ಕ ವಯಸ್ಸಿನಲ್ಲಿಯೇ ಇವುಗಳ ಬಗ್ಗೆ ಅರಿವು ಮೂಡಿಸಿಕೊಂಡವರು ಜೀವನವನ್ನೂ ಶುದ್ಧವಾಗಿಟ್ಟುಕೊಳ್ಳಲು ಸಮರ್ಥರಾಗುತ್ತಾರೆ.

ದಾಸವರೇಣ್ಯರೆಲ್ಲರೂ ಬಸವಣ್ಣನವರು ಅಂತರಂಗ ಹಾಗೂ ಬಹಿರಂಗ ಶುದ್ಧಿಗೆ ತಮ್ಮ ಕೀರ್ತನೆಗಳಲ್ಲಿ ಸಂದೇಶ ಸಾರಿ ಹೇಳಿದರು. ದೇಹದ ಕೊಳೆ ತೆಗೆದಂತೆ ಮನಸ್ಸಿನ ಕೊಳೆಯನ್ನು ತೆಗೆದು ಶುದ್ಧ ಮಾಡಿಕೊಳ್ಳಿರೆಂದರು. ಮನಸ್ಸಿನ ಕೊಳೆಯನ್ನು ಸಭ್ಯತೆಯ ಸೋಗಿನಿಂದ ಮುಚ್ಚಿಕೊಂಡರೆ ವ್ಯಕ್ತಿತ್ವ ಎಂಬುದು ಗಬ್ಬು ನಾರುತ್ತದೆ ಎಂಬುದು ವಚನವೊಂದರ ಸಾರ. ಮನಶುದ್ಧಿ ಇಲ್ಲದವನಿಗೆ ಮಂತ್ರದ ಫಲವೇನು ಎನ್ನುತ್ತಾರೆ ಪುರಂದರದಾಸರು.



ನಿಸರ್ಗ ನಮಗೆ ಉತ್ತಮವಾದ ನೀರು, ಫಲವತ್ತಾದ ಮಣ್ಣು , ಸ್ವಚ್ಛವಾದ ಗಾಳಿ, ನಿರ್ಮಲವಾದ ಬೆಳಕನ್ನು ನೀಡಿದೆ. ಅವುಗಳನ್ನು ನಮ್ಮ ಅಜ್ಞಾನ ಮತ್ತು ಸ್ವಾರ್ಥದಿಂದ ಮಲಿನಗೊಳಿಸಿಕೊಂಡರೆ ಮಾರಕ ಪರಿಣಾಮಗಳನ್ನು ನಾವು ಮಾತ್ರವಲ್ಲ.ನಮ್ಮ ಮುಂದಿನ ಜನಾಂಗವೂ ಎದುರಿಸಬೇಕಾಗುತ್ತದೆ.


ಸ್ವಚ್ಛ ಭಾರತದ ಆಂದೋಲನದ ಹಿಂದಿನ ಉದ್ದೇಶವೂ ಇದೇ. ನಮ್ಮ ದೇಹ, ಮನಸ್ಸು,ಪರಿಸರವನ್ನು ಶುದ್ಧವಾಗಿಟ್ಟುಕೊಳ್ಳುವ ಮೂಲಕ ಸುಂದರ ಸಮಾಜವನ್ನು ನಿರ್ಮಿಸಲು ಸಹಕರಿಸೋಣ.


ಬಾಲ ವಿನೋದಿನಿ



ಈ ಗೊಂಬೆಗೆ ಚುಕ್ಕಿಯನ್ನು ಸೇರಿಸಿ ಹಾಗೂ ಬಣ್ಣವನ್ನು ತುಂಬಿರಿ.....

ಈ ಗೊಂಬೆಯನ್ನು ನೋಡಿ





ಬಣ್ಣವನ್ನು ತುಂಬಿರಿ.

## ಈ ಅಕ್ಷರಗಳಲ್ಲಿ ಒಂದು ಗಾದೆ ಇದೆ ಕಂಡು ಹಿಡಿಯಿರಿ ನೋಡೋಣ....


ಕ  ನೇ  ಆ  ಇ  ದ  ತ  ಳು  ರ  ವ  ಅ

ಕೂ  ದ  ಳು  ಟ್ಟಿ  ಕ್ಕಿ  ವ  ದಾ  ಸು  ನೇ

## ಒಳ್ಳೆ ವಿಷಯವನ್ನು ಹೇಳುವ ಪದ್ಧತಿ ಎರಡು





## 'ಅ' ವರ್ಣಮಾಲೆಯಿಂದ ಬರುವ ದೇವರ ಹೆಸರನ್ನು ಬರಿಯಿರಿ.



## ತಿರುಮಲ ತಿರುಪತಿ ದೇವಸ್ಥಾನಗಳು

# ಮಕ್ಕಳೇ ಇದು ನಿಮಗಾಗಿ



## ರಸಪ್ರಶ್ನೆಗಳು

01.ಕಾಲಚಕ್ರಕ್ಕೆ ಮೂಲ ದೇವರು ಯಾರು? ..............................................................................................

02.ರಥಸಪ್ತಮಿಯಂದು ಸ್ನಾನ ಮಾಡುವಾಗ ಯಾವ ಎಲೆಯನ್ನು ಉಪಯೋಗಿಸುತ್ತಾರೆ? ......................................................

03.ಯಾವ ಮಾಸವು ದಾನ ಮಾಡಲು ಶ್ರೇಷ್ಠವಾದುದು?..............................................................................................

04.ಮಿರ್ಲೆ ಗ್ರಾಮದ ಹೊರವಲಯದಲ್ಲಿ ಯಾವ ದೇವಾಲಯವಿದೆ? ..............................................................................

05.ಪುರಂದರದಾಸರನ್ನು ಯಾರ ಅವತಾರವೆಂದು ಹೇಳುತ್ತಾರೆ? ..............................................................................

06.ಗೋಪಾಲದಾಸರು ಎಂದು ವೈಕುಂಠವಾಸಿಯಾದರು? ..........................................,..........................................

07. ನರಹರಿತೀರ್ಥರು ಎಷ್ಟು ಗ್ರಂಥಗಳನ್ನು ರಚಿಸಿದರು? ..............................................................................

08. ಪುಂಡಲೀಕನ ತಂದೆ ತಾಯಿ ಹೆಸರೇನು?..............................................................................................

09. ಸಂಧ್ಯಾವಂದನೆಯಲ್ಲಿ ಯಾರ ಉಪಾಸನೆ ಮಾಡಬೇಕು?..............................................................................

10.ಕುಂತಿದೇವಿಯು ಯಾರನ್ನು ಕುರಿತು ಮಂತ್ರವನ್ನು ಜಪಿಸುತ್ತಾರೆ? ..............................................................

11.ಗೋವುಗಳನ್ನು ರಕ್ಷಣೆಯ ದೀಕ್ಷೆಯನ್ನು ತೆಗೆದುಕೊಂಡವರು ಯಾರು? ..........................................................

12.ವೇಂಗೈ ಪದವನ್ನು ಎಷ್ಟು ಅರ್ಥದಲ್ಲಿ ಉಪಯೋಗಿಸಲಾಗಿದೆ?..............................................................

13. ವೆಂಕಟಾದ್ರಿಯನ್ನು ಯಾರು ತಲುಪಿದರು? ..............................................................................................

14. ಯಾರು ಕೋಣೆಯನ್ನು ಅವರೇ ಸ್ವಚ್ಛಗೊಳಿಸಿದರು? ..............................................................................

15. ಆ ಬಡ ಬ್ರಾಹ್ಮಣನಿಗೆ ನೀಡಿದ ಆಭರಣ ಯಾವುದು? ..............................................................................




## ಸೂಚನೆಗಳು

1. ಈ ಕ್ವಿಜ್ 10-15 ವರ್ಷ ವಯಸ್ಸಿನ ಮಕ್ಕಳು ಹಿಂದೂವಾಗಿರಬೇಕು.
2. ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳುವ ಮಕ್ಕಳ ತಂದೆ ತಾಯಿ ತಪ್ಪದೇ ಸಪ್ತಗಿರಿ ಮಾಸಪತ್ರಿಕೆಯ ಚಂದಾದಾರರಾಗಿರಬೇಕು.
3. ಕ್ವಿಜ್ ಪ್ರಶ್ನಾಪತ್ರಿಕೆಯಲ್ಲಿ ತಪ್ಪದೇ ತಮ್ಮ ಚಂದಾ ಸಂಖ್ಯೆ, ಹೆಸರು, ವಿಳಾಸ, ಪಿನ್‌ಕೋಡ್, ಫೋನ್ ನಂಬರ್ ಸ್ಪಷ್ಟವಾಗಿ ಬರೆಯಬೇಕು.
4. ಕ್ವಿಜ್ ಉತ್ತರಗಳನ್ನು ಪ್ರಶ್ನೆಯ ಕೆಳಗೆ ನಿರ್ದೇಶಿಸಿದ ಸ್ಥಳದಲ್ಲಿಯೇ ಬರೆದು ಕಳುಹಿಸಬೇಕು.
5. ಕ್ವಿಜ್ ಉತ್ತರದ ಜೆರಾಕ್ಸ್ ಅನ್ನು ತೆಗೆದುಕೊಂಡು ಕಳಿಹಿಸಿದವರು ಖಚಿತವಾಗಿ ಚಂದಾನಂಬರ್‌ನ್ನು ಕಳುಹಿಸಬೇಕು. ಒಬ್ಬ ಚಂದಾದಾರರು ಒಂದು ಉತ್ತರವನ್ನು ಮಾತ್ರವೇ ಕಳುಹಿಸತಕ್ಕದ್ದು.
6. ಉತ್ತರ ಬರೆಯುವಾಗ ಅಳಿಸುವುದು,ತಿದ್ದುವುದು ಮಾಡಬಾರದು.
7. ಉತ್ತರಗಳನ್ನು ನಮಗೆ ಕಳುಹಿಸುವ ಕೊನೆಯ ದಿನಾಂಕ 25.02.2024
8. ಈ ಕ್ವಿಜ್‌ನಲ್ಲಿ ಎಲ್ಲಾ ಉತ್ತರಗಳನ್ನು ಸರಿಯಾಗಿ ಬರೆದ ಮೂರು ಮಕ್ಕಳನ್ನು ಮಾತ್ರವೇ ವಿಜೇತರಾಗಿ ಲಕ್ಕಿ ಡಿಫ್ ಮುಖಾಂತರ ಆಯ್ಕೆ ಮಾಡಲಾಗುತ್ತದೆ.
9. ವಿಜೇತರಾದ ಮಕ್ಕಳ ಹೆಸರನ್ನು ಮುಂದಿನ ತಿಂಗಳ ಸಪ್ತಗಿರಿ ಮಾಸ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.
10. ತಿ.ತಿ.ದೇ. ಪ್ರಧಾನ ಸಂಪಾದಕರ ಕಾರ್ಯಾಲಯದಲ್ಲಿ ಕೆಲಸ ಮಾಡುವ ಉದ್ಯೋಗಿಗಳ ಮಕ್ಕಳು ಈ ಕ್ವಿಜ್‌ನಲ್ಲಿ ಪಾಲ್ಗೊಳ್ಳಬಾರದು.
11. ಕ್ವಿಜ್‌ಗೆ ಸಂಬಂಧಿಸಿದ ಯಾವ ಸಮಾಚಾರವನ್ನು ಫೋನ್ ಮುಖಾಂತರ ನೀಡಲಾಗುವುದಿಲ್ಲ.

**ನಿಮ್ಮ ಉತ್ತರಗಳನ್ನು ಕಳುಹಿಸಬೇಕಾದ ವಿಳಾಸ**

ಪ್ರಧಾನ ಸಂಪಾದಕರು
ಸಪ್ತಗಿರಿ ಮಾಸಪತ್ರಿಕೆ
**ತಿ.ತಿ.ದೇ. ಪ್ರೆಸ್ ಕಾಂಪೌಂಡ್**
**ಕೆ.ಟಿ. ರಸ್ತೆ, ತಿರುಪತಿ : 517 507**
**ಆಂಧ್ರ ಪ್ರದೇಶ್**

| | |
|---|---|
| **ಹೆಸರು :** | **ವಿಳಾಸ :** |
| **ಚಂದಾ ಸಂಖ್ಯೆ :** | |
| **ತಂದೆಯ ಹೆಸರು :** | |
| **ತಾಯಿಯ ಹೆಸರು:** | **ದೂರವಾಣಿ ಸಂಖ್ಯೆ:** |

# ಶ್ರೀ ವೇದಾಂತದೇಶಿಕರ ಜೀವನ ಹಾಗೂ ಹಂಸ ಸಂದೇಶ


- ಡಾ|| ಸಿ.ಎಸ್. ಊರ್ಮಿಳಾ




ಕಾಲ್ಯೇಸೇನಾಂ ಕಪಿಕುಲಪತೇಃ ತೂರ್ಣ ಮುದ್ಯೋಜಯಿಷ್ಯನ್
ದೂರೀ ಭಾವಾತ್ ಜನಕದುಹಿತುಃ ದೂಯ ಮಾನಾಂತರಾತ್ಮ
ಕ್ರೀಡಾ ಖೇಲಂ ಕಮಲಸರಸಿ ಕ್ವಾಪಿ ಕಾಲೋಪಯಾತಂ
ರಾಕಾಚಂದ್ರ ದ್ಯುತಿ ಸಹಚರಂ ರಾಜಹಂಸಂ ದದರ್ಶ।

ಸೀತೆಯೋ ಬಹಳ ದೂರದಲ್ಲಿ ಲಂಕಾಪಟ್ಟಣದಲ್ಲಿದ್ದಾಳೆ. ಸಮುದ್ರವನ್ನು ದಾಟಿ, ಪರ್ವತವನ್ನು ಹತ್ತಿ ಅತ್ಯಂತ ಪ್ರಯಾಸದಿಂದ ಅವಳನ್ನು ಪಡೆಯಬೇಕಾಗಿದೆ. ಆದಷ್ಟು ಅವಳ ಬಳಿ ಸೇರಬೇಕೆಂದು ನಿಶ್ಚಯಿಸಿ ಮರುದಿನ ಪ್ರಾತಃಕಾಲದಲ್ಲಿ ಅಂದರೆ ತನ್ನ ನಿತ್ಯಕರ್ಮಾನುಷ್ಠಾನಗಳನ್ನು ಮುಗಿಸದೆಯೇ ಪಕ್ಕದಲ್ಲಿದ್ದ ತಾವರೆಯ ಕೊಳದತ್ತ ಬಂದನು. ಶರತ್ಕಾಲವಾದುದರಿಂದ ಅಲ್ಲಿ ಒಂದು ರಾಜಹಂಸವು ಉಲ್ಲಾಸದಿಂದ ಸರೋವರದಲ್ಲಿ ಸಂಚರಿಸುತ್ತಿದ್ದುದನ್ನು ಶ್ರೀರಾಮನು ಕಂಡನು.

ಈ ಚಿತ್ರದಲ್ಲಿ ಒಟ್ಟು 7 ವ್ಯತ್ಯಾಸಗಳಿವೆ. ಮಕ್ಕಳೇ ಇದನ್ನು ಕಂಡು ಹಿಡಿಯಿರಿ ನೋಡೋಣ.



ಮಕ್ಕಳೇ ವ್ಯತ್ಯಾಸಗಳನ್ನು ಕಂಡು ಹಿಡಿಯಿರಿ ನೋಡೋಣ



ಚಿಟ್ಟೆ, ಕೆಂಪು ಬಣ್ಣದ ಹೂ, ನೀಲಿ ಬಣ್ಣದ ಹೂ, ಹುಲ್ಲು, ಗಿಳಿಗಳು, ಕಾಗೆ, ಮರದ ಮೇಲಿರುವ ಗುಲಾಬಿ ಬಣ್ಣದ ಹೂ

**ಚಿತ್ರಕಥೆ**

# ನಮ್ಮದೆಂದೂ ಏನು ಇಲ್ಲ

ಕಥೆ : ತೆಲುಗು ಮೂಲ : ಡಾ॥ ಕೆ. ರವಿಚಂದ್ರನ್
ಅನುವಾದ : ಆರ್. ಕೆ.ವಿ.
ಚಿತ್ರಗಳು : ಟಿ. ಶಿವಾಜಿ





ಅಂದ ಹಾಗೆ ನಿನ್ನ ಮೂಗುತಿ ಎಲ್ಲಿ?
ಆ.... ಮೂಗುತಿ ಇದೆ....
ಒಮ್ಮೆ ತೋರಿಸುತ್ತೀಯಾ? ಆತುರ ಏನು ಇಲ್ಲ... ಊಟ ಮುಗಿದ ನಂತರ ತೋರಿಸು
ಪರಂಧಾಮ! ಪಾಂಡುರಂಗ! ನನ್ನನ್ನು ಕ್ಷಮಿಸು! ನನಗೆ ಬೇರೆ ದಾರಿಯಿಲ್ಲದ ಕಾರಣ ನಾನು ಈ ವಿಷವನ್ನು ಕುಡಿಯುತ್ತಿದ್ದೇನೆ.
ಸರಸ್ವತಿಬಾಯಿ ವಿಷದ ಬಟ್ಟಲನ್ನು ಕುಡಿಯಲು ಪ್ರಯತ್ನಿಸಿದಾಗ ಆ ಬಟ್ಟಲಿನಲ್ಲಿ ತನ್ನ ರತ್ನದ ಮೂಗುತಿ ಕಾಣಿಸಿತು. ಅವಳಿಗೆ ಆಶ್ಚರ್ಯವಾಯಿತು. ಭಗವಂತನ ಕರುಣೆಗೆ ಆಶ್ಚರ್ಯಚಕಿತಳಾದಳು.
ಇದೇನಿದು? ಹಾಕಿದ ಬೀಗ ಹಾಗೆ ಇದೆ. ಇದರಲ್ಲಿದ್ದ ಮೂಗುತಿ ಮಾಯವಾಗಿದೆ.
ನಾನು ಅಂಗಡಿಯಲ್ಲಿ ಭದ್ರಪಡಿಸಿದ ಮೂಗುತಿ ಮಾಯವಾಗಿದೆ. ಆ ಮುದುಕ ಬಂದು ತನ್ನ ವಸ್ತುವನ್ನು ನೀಡು ಎಂದು ಕೇಳಿದರೆ ನಾನು ಏನು ಮಾಡಬೇಕು?
ಇದನ್ನು ತೆಗೆದುಕೊಂಡು ಹೋಗಿ ಅವನಿಗೆ ಕೊಡಿ....
ಇದು ನಿನ್ನ ತವರಿನವರು ಕೊಟ್ಟದ್ದು. ಇದನ್ನು ನಾನು ತೆಗೆದುಕೊಳ್ಳಬಾರದು.
ಅದನ್ನು ಇವತ್ತು ಒಬ್ಬ ಮುದುಕ ಬ್ರಾಹ್ಮಣನಿಗೆ ಕೊಟ್ಟೆ ಇದು ಆ ಪರಂಧಾಮನು ಕೊಟ್ಟಿರುವುದು.
ಎಂದು ನಡೆದದ್ದನ್ನೆಲ್ಲ ಗಂಡನಿಗೆ ಹೇಳಿದಳು.
ಛೀಛೀ ! ನಾನೊಬ್ಬ ಪಾಪಿ....ಈ ಐಶ್ವರ್ಯಗಳೆಲ್ಲ ನನ್ನ ಘನತೆ ಗೌರವಗಳಿಂದಲೇ ಎಂದು ಭ್ರಮಿಸಿದೆ..... ಎಲ್ಲವೂ ಭಗವಂತನ ಕೃಪೆ ಎಂದು ತಿಳಿಯಲಾಗದೆ ಸಹೃದಯರ ಸಂಕಷ್ಟದಲ್ಲಿ ಪಾಲುಗೊಳ್ಳಲು ಸಾಧ್ಯವಾಗಲಿಲ್ಲ, ದೈವಕ್ಕೆ ದೂರವಾದೆನು.
ಭಗವಂತನ ಮಹಿಮೆ ಶೀನಪ್ಪನಲ್ಲಿ ದೊಡ್ಡ ಬದಲಾವಣೆಗೆ ಕಾರಣವಾಯಿತು. ನನ್ನ ಯಾವದಾಸ್ತಿಯನ್ನು ದಾನ ಮಾಡುತ್ತಾ, ಉಟ್ಟ ಬಟ್ಟೆಯಲ್ಲಿ ಹೆಂಡತಿಯನ್ನು ಕರೆದುಕೊಂಡು ಪಂಡರೀಪುರವನ್ನು ತಲುಪಿ ಉಂಧವೃತ್ತಿಯನ್ನು ಮಾಡಿಕೊಂಡು ಮೂರು ಹೊತ್ತು ಆ ರಂಗನ ಸೇವೆಯಲ್ಲಿ ಕಾಲವನ್ನು ಕಳೆದರು.
ಶುಭಂ

ತಿರುಮಲೆ ತಿರುಪತಿ ದೇವಸ್ಥಾನಗಳು. ತಿರುಪತಿ

# ಸಪ್ತಗಿರಿ

(ಆಧ್ಯಾತ್ಮಿಕ ಮಾಸಪತ್ರಿಕೆ)

## ಚಂದಾ ನಮೂನೆ ಪತ್ರ

ಹೆಸರು ಮತ್ತು ವಿಳಾಸ :

(ಬಿಡಿಬಿಡಿ ಅಕ್ಷರಗಳಲ್ಲಿ ಅರ್ಥವಾಗುವಂತೆ ಇಂಗ್ಲೀಷಿನಲ್ಲಿ ಬರಿಯಿರಿ. ಪಿನ್ ಕೋಡ್ ತಪ್ಪದೇ ನಮೂದಿಸಿ)

(ಪಿನ್ ಕೋಡ್ ತಪ್ಪದೇ ನಮೂದಿಸಿ)

ಬೇಕಾಗುವ ಭಾಷೆ : ☐ ಕನ್ನಡ ☐ ತೆಲುಗು ☐ ಹಿಂದೀ ☐ ತಮಿಳು ☐ ಇಂಗ್ಲೀಷು ☐ ಸಂಸ್ಕೃತ

ವಾರ್ಷಿಕ /ಆಜೀವಚಂದಾ : ☐ ರೂ.240/- ☐ ರೂ.2,400/-( 12 ವರ್ಷ),

ವಿದೇಶಿ ವಾರ್ಷಿಕ ಚಂದಾ ☐ ರೂ. 1030/-

ಚಂದಾ ನವೀಕರಣ :

(ಅ) ಚಂದಾ ನಂಬರು :

(ಆ) ಭಾಷೆ :

ಸಲ್ಲಿಸಿದ ಹಣ :

ಡಿ. ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./ ಅಟ್‌ಪರ್ ಚೆಕ್ಕು ಮಾತ್ರವೇ :

ಸ್ಥಳ :

ದಿನಾಂಕ: ಚಂದಾದಾರರ ಸಹಿ

ಸಪ್ತಗಿರಿ ವಾರ್ಷಿಕ ಚಂದಾ ರೂ.240/-, ಆಜೀವಚಂದಾ (12 ವರ್ಷ) ರೂ.2,400/- ಗಳು ಡಿ. ಡಿ. ಸಂಖ್ಯೆ/ಈ.ಎಂ.ಓ/ಐ.ಪಿ.ಓ./ ಅಟ್‌ಪರ್ ಚೆಕ್ಕು ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ, ತಿ.ತಿ.ದೇ. ತಿರುಪತಿ. ಅವರ ಹೆಸರಿನಲ್ಲಿ ತೆಗೆಯ ಬೇಕು. ಸಪ್ತಗಿರಿ ಚಂದಾದಾರರಾಗಿ ಸೇರ ಬಯಸು ವವರು/ತಮ್ಮ ಚಂದಾ ನವೀಕರಿಸುವವರು ಈ ಕೂಪನ್‌ನಲ್ಲಿ ಅಥವಾ ಬಿಳಿಹಾಳಿಯಲ್ಲಿ ಮೇಲೆ ತಿಳಿ ಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು. ಎಂ.ಓ. ಕಳುಹಿಸುವವರು ಅದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳಿಸಿ.

ನಮ್ಮ ವಿಳಾಸ -''ಪ್ರಧಾನ ಸಂಪಾಕರು, ಸಪ್ತಗಿರಿ ಕಾರ್ಯಾಲಯ, ತಿ.ತಿ.ದೇ ಪ್ರೆಸ್ ಕಾಂಪೌಂಡ್, ಕೆ. ಟಿ.ರೋಡ್ಡು, ತಿರುಪತಿ - 517 507''.

ಸಪ್ತಗಿರಿ ಚಂದಾ ವಿವರಣೆಗಾಗಿ ಪೋನ್‌ನಂಬರ್:0877- 2264359,0877-2264543

ತಿರುಮಲೆ ತಿರುಪತಿ ದೇವಸ್ಥಾನಗಳು

## ಟೋಲ್ ಫ್ರಿ ನಂಬರ್

ಸ್ವಾಮಿಯ ದರ್ಶನಾರ್ಥ ತಿರುಮಲೆಗೆ ಬರುವ ಭಕ್ತರ ಸೌಕರ್ಯಾರ್ಥಕ್ಕಾಗಿ ತಿರುಮಲೆ ತಿರುಪತಿ ದೇವಸ್ಥಾನದವರು **ಟೋಲ್ ಫ್ರಿ ನಂಬರ್** ಅನ್ನು ಏರ್ಪಡಿಸಿದ್ದಾರೆ.

ಯಾತ್ರಿಕರು, ಭಕ್ತರು ದೇವಸ್ಥಾನಕ್ಕೆ ಸಂಬಂಧಿಸಿದ ಸೂಚನೆ /ದೂರುಗಳನ್ನು ಮತ್ತು ಇತರ ಸಮಾಚಾರಕ್ಕಾಗಿ ಈ ನಂಬರನ್ನು ಸಂಪರ್ಕಿಸಬಹುದು.

**ತಿರುಮಲೆ ತಿರುಪತಿ ದೇವಸ್ಥಾನವು ಯಾತ್ರಿಕರಿಗೆ ಮತ್ತಷ್ಟು ಸೇವೆಯನ್ನು ನೀಡಲು ನಿಮ್ಮ ಸೂಚನೆಗಳನ್ನು ನೀಡಿರಿ.**

**ಟೋಲ್ ಫ್ರಿ ನಂಬರ್**

**18004254141**

0877-2233333,

0877-2277777

Printed by Sri P. Ramaraju, M.A., and Published by Dr. K. Radha Ramana, M.A., M.Phil., Ph.D., on behalf of Tirumala Tirupati Devasthanams and Printed and Published at Tirumala Tirupati Devasthanams Press, K.T.Road, Tirupati - 517 507.
Editor : Dr. V. G. Chokkalingam, M.A., Ph.D.



ಆಂಧ್ರಪ್ರದೇಶದ ರಾಷ್ಟ್ರ ರಾಜ್ಯಪಾಲರು ಗೌ॥ ಜಸ್ಟಿಸ್ ಎಸ್. ಅಬ್ದುಲ್ ನಜೀರ್ ರವರು 19-12-2023 ರಂದು ತಿರುಮಲೆ ಸ್ವಾಮಿಯವರ ದರ್ಶನ ಪಡೆದರು. ದರ್ಶನಾನಂತರ ರಾಜ್ಯಪಾಲರಿಗೆ ತಿ.ತಿ.ದೇ., ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀ ಭೂಮನ ಕರುಣಾಕರರೆಡ್ಡಿ ರವರು ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಎ.ವಿ. ಧರ್ಮಾರೆಡ್ಡಿ, ಐ.ಡಿ.ಈ.ಎಸ್. ರವರು ಸ್ವಾಮಿಯವರ ತೀರ್ಥ ಪ್ರಸಾದಗಳನ್ನು, ಚಿತ್ರಪಟವನ್ನು, ತಿ.ತಿ.ದೇ., ಡೈರಿ, ಕ್ಯಾಲೆಂಡರ್‌ಗಳನ್ನು ನೀಡಿದರು.



19-12-2023 ರಂದು ತಿರುಮಲೆ ಸ್ವಾಮಿಯವರ ಆಲಯದಲ್ಲಿ ನಡೆದ ಕೋಯಿಲ್ ಆಳ್ವಾರು ತಿರುಮಂಜನದಲ್ಲಿ ಪಾಲ್ಗೊಂಡ ತಿ.ತಿ.ದೇ., ಆಡಳಿತ ಮಂಡಳಿ ಅಧ್ಯಕ್ಷರು ಶ್ರೀ ಭೂಮನ ಕರುಣಾಕರರೆಡ್ಡಿ ಯವರು ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಎ.ವಿ. ಧರ್ಮಾರೆಡ್ಡಿ, ಐ.ಡಿ.ಈ.ಎಸ್. ರವರು .



26-12-2023 ರಂದು ನಡೆದ ತಿ.ತಿ.ದೇ., ಆಡಳಿತ ಮಂಡಳಿಯ ಸಮಾವೇಶದಲ್ಲಿ ತಿ.ತಿ.ದೇ.,ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀ ಭೂಮನ ಕರುಣಾಕರರೆಡ್ಡಿ ಯವರು, ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಎ.ವಿ. ಧರ್ಮಾರೆಡ್ಡಿ , ಐ.ಡಿ.ಈ.ಎಸ್. ರವರು ಆಡಳಿತ ಮಂಡಳಿಯ ಸದಸ್ಯರು "ಮನುಕುಲದ ದಾರಿ ದೀಪ ಭಗವದ್ಗೀತೆ" ಎಂಬ ಪುಸ್ತಕವನ್ನು ಬಿಡುಗಡೆ ಮಾಡಿದ ದೃಶ್ಯ



ತಿ.ತಿ.ದೇವಸ್ಥಾನವು ಸ್ವಿಮ್ಸ್ ನ ಅಂಕಾಲಜಿ ಪ್ರತ್ಯೇಕಾಧಿಕಾರಿ ಡಾ॥ ಎಮ್. ಜಯಚಂದ್ರಾರೆಡ್ಡಿಯವರಿಗೆ "ಯಂಗ್ ಸರ್ಜನ್‌ಆಫ್ ಇಂಡಿಯಾ" ಪ್ರಶಸ್ತಿ ಲಭಿಸಿದೆ. ಈ ಸಂದರ್ಭವಾಗಿ ತಿ.ತಿ.ದೇ.,. ಕಾರ್ಯನಿರ್ಿಹಣಾಧಿಕಾರಿ ಶ್ರೀ ಎ.ವಿ. ಧರ್ಮಾರೆಡ್ಡಿ ಐ.ಡಿ. ಈ.ಎಸ್., ರವರು, ತಿ.ತಿ.ದೇ., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಎಸ್. ಭಾರ್ಗವಿ ಐ.ಎ.ಎಸ್., ರವರು ಅಭಿವಂದನೆಗಳನ್ನು ಸಲ್ಲಿಸಿದರು.



23-12-2023 ರಂದು ತಿ.ತಿ.ದೇ., ನೇತೃತ್ವದಲ್ಲಿ ನಡೆದ ಗೀತಾ ಜಯಂತಿ ಕಾರ್ಯಕ್ರಮದಲ್ಲಿ ಭಗವದ್ಗೀತೆ ಶ್ಲೋಕ ಪಠನ ಸ್ಪರ್ಧೆಯಲ್ಲಿ ವಿಜೇತರಿಗೆ ತಿ.ತಿ.ದೇ., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ. ಎಸ್. ಭಾರ್ಗವಿ, ಐ.ಎ.ಎಸ್., ರವರು ಬಹುಮಾನಗಳನ್ನು ನೀಡುತ್ತಿರುವ ದೃಶ್ಯ




ಶ್ರೀ ವೆಂಕಟೇಶ್ವರ ಆಯುರ್ವೇದ ಕಳಾಶಾಲೆ, ತಿ.ತಿ.ದೇ., ಯಲ್ಲಿ ಆಯುಷ್ ಮಂತ್ರಿತ್ವ ಶಾಖೆಯವರ ನೇತೃತ್ವದಲ್ಲಿ ನಡೆದ ಸಿ.ಎಂ.ಈ. ಶಿಕ್ಷಣಾ ಕಾರ್ಯಕ್ರಮದಲ್ಲಿ ತಿ.ತಿ.ದೇ., ಸಂಯುಕ್ತಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಎಸ್. ಭಾರ್ಗವಿ, ಐ.ಎ.ಎಸ್., ರವರು ಪಾಲ್ಗೊಂಡು ದೃಶ್ಯ

SAPTHAGIRI (KANNADA) SPIRITUAL ILLUSTRATED MONTHLY Published by Tirumala Tirupati Devasthanams Printing on 25-01–2024 and Posting at Tirupati RMS.Regd. with the Registrar of Newspapers for India under RNI. No. APKAN/2021/80589. Postal Regd.No.TRP/156/2024-2026 "Licenced toPost Without Prepayment No. PMGK/RNP/WPP-04(6)/ 2024-2026" Posting on 5th of Every Month.



## ರಥೋತ್ಸವ
## 16-02-2024

## ದೇವುನಿ ಕಡಪ
## ಶ್ರೀ ಲಕ್ಷ್ಮೀವೆಂಕಟೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು
## 09-02-2024 ರಿಂದ 18-02-2024 ರ ವರೆಗೆ